ಬೆಲೆ: ಎರಡು ಆಣೆ

ವರ್ಗಣಿ ದರ
(ಅಂಚೆವೆಚ್ಚ ಸೇರಿ)
ವರ್ಷಕ್ಕೆ ರೂ. ೬-೪-೦
೬ ತಿಂಗಳಿಗೆ ,, ೩-೪-೦
೩ ತಿಂಗಳಿಗೆ ,, ೧-೧೨-೦
ವ್ಹಿ. ಪಿ. ಮೂಲಕ ತರಿಸಿಕೊಂಡಲ್ಲಿ ೫ ಆಣೆ ಹೆಚ್ಚಿಗೆ ಬೀಳುವದು.

ಕರ್ಮವೀರ

KARMAVEER
WEEKLY
HUBLI
APRIL 1
1946

ಸಂಪಾದಕರು :
ಹ. ರಾ. ಪುರೋಹಿತ, ಎಂ. ಎ.

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

Editor : H. R. Purohit, M. A.

ಸಂಪುಟ ೧೬] 卐 ಹುಬ್ಬಳ್ಳಿ ಸೋಮವಾರ ತಾರೀಖು ೧—೪—೧೯೪೬ 卐 [ಸಂಚಿಕೆ ೪೮

ಹಿಂದೀಯರನ್ನು ಶಾಶ್ವತ ನೀಚ ಸ್ಥಿತಿಗೆ ತಳ್ಳುವ ಯತ್ನ

ದಕ್ಷಿಣ ಆಫ್ರಿಕೆಯಲ್ಲಿ ವರ್ಣದ್ವೇಷ ಮಸೂದೆ :

ವಾಯಿಸರಾಯರಿಗೆ ದಕ್ಷಿಣ ಆಫ್ರಿಕಾ ಹಿಂದೀಯರ ಮನವಿ

ದಕ್ಷಿಣ ಆಫ್ರಿಕೆಯ ಹಿಂದೀಯರ ಒಂದೊಂದೇ ಹಕ್ಕು ವರ್ಣದ್ವೇಷಿ ಬಿಳಿಯರಿಂದ ಕಸಿದುಕೊಳ್ಳಲ್ಪಡುತಿದೆ. ೧೮೯೬ ರಲ್ಲಿ ಹಿಂದೀಯರ ಮತಾಧಿಕಾರ ಹೋಯಿತು. ೧೯೨೪ ರಲ್ಲಿ ನಗರಸಭಾ ಮತಾಧಿಕಾರವೂ ಹೋಯಿತು. ೧೯೪೩ ರಲ್ಲಿ ಕೆಲ ಪ್ರದೇಶಗಳಲ್ಲಿ ಹಿಂದೀಯರು ಆಸ್ತಿ ಕೊಳ್ಳದಂತೆ ನಿರ್ಬಂಧಿಸಲಾಯಿತು ಈಗ ಹಿಂದೀಯರನ್ನು ಕೆಲವು ವಿಶಿಷ್ಟ ಪ್ರದೇಶಗಳಲ್ಲಿ ದಿಗ್ಬಂಧಿಸಿ ಅವರನ್ನು ಶಾಶ್ವತ ಕೀಳ್ಮೆಗೆ ತಳ್ಳುವ ಮಸೂದೆಯೊಂದು ಬಂದಿದೆ. ಇದನ್ನು ಪ್ರತಿಭಟಿಸುವಲ್ಲಿ ಮಾತೃಭೂಮಿಯ ಸಹಾಯ ಕೋರಲು ಬಂದಿರುವ ದ ಆಫ್ರಿಕಾ ಹಿಂದೀಯರು ವಾಯಿಸರಾಯರಿಗೊಪ್ಪಿಸಿದ ಮನವಿಯ ಅಂಶಗಳನ್ನು ಎತ್ತಿ ಇಲ್ಲಿ ಕೊಡಲಾಗಿದೆ.

[ಹರಿಜನದಿಂದ]

ನಾ. ಆಗಾಖಾನರ ನೇತೃತ್ವದಲ್ಲಿ ವಾಯಿಸರಾಯರನ್ನು ದಕ್ಷಿಣ ಆಫ್ರಿಕಾ ಹಿಂದೀಯರ ಶಿಷ್ಟಮಂಡಲದವರು ಕಂಡು ಒಪ್ಪಿಸಿದ ಮನವಿಯ ಮುಖ್ಯಾಂಶಗಳು :-

....

೩. ದಕ್ಷಿಣ ಆಫ್ರಿಕಾ ಸರಕಾರದ ಸದ್ಯದ ಉದ್ದೇಶ ನೆರವೇರಿದರೆ ಅದು ನಮ್ಮನ್ನು ಕೀಳು ಮಟ್ಟಕ್ಕೆ ತಳ್ಳಿಬಿಡುವದು. ೧೮೯೩ ರಲ್ಲಿ ನಾತಾಳ ಮೊದಲಾದೆಡೆಗಳಲ್ಲಿರುವ ಹಿಂದೀ ಸಮಾಜವನ್ನು ಮತಾಧಿಕಾರವಿಲ್ಲದ್ದನ್ನಾಗಿ ಮಾಡುವ ಪ್ರಯತ್ನ ನಡೆಸಿದಾಗಿನಿಂದಲೂ ನಮ್ಮನ್ನು ಸ್ಪಷ್ಟವಾಗಿ ಕೀಳು ಮಟ್ಟಕ್ಕೆ ತಳ್ಳುವ ಈ ಪ್ರಯತ್ನದ ವಿರುದ್ಧ ನಾವು ಹೋರಾಡುತ್ತ ಬಂದಿದ್ದೇವೆ. ಆಗ ನಾವು, ಇದು ನಾತಾಳದಲ್ಲಿರುವ ಹಿಂದೀಯರಿಗೆ ಮಾತ್ರವಲ್ಲ, ಮಾತೃದೇಶಕ್ಕೂ ಆಗುವ ಅಪಮಾನವೆಂದು ಪರಿಗಣಿಸಿದೆವು. ಆಗ ದಕ್ಷಿಣ ಆಫ್ರಿಕೆಯ ಯೂನಿಯನ್ ಇದ್ದಿಲ್ಲ. ಕೇಪಿನಲ್ಲಿ ಹೇಳಿಕೊಳ್ಳುವಂಥ ಹಿಂದೀ ಸಮಸ್ಯೆ ಇದ್ದಿಲ್ಲ. ಆರೇಂಜ ಸ್ವತಂತ್ರ ರಾಜ್ಯ ತನ್ನಲ್ಲಿದ್ದ ಕೆಲವೇ ಹಿಂದೀ ವ್ಯಾಪಾರಿಗಳನ್ನು ಹೊರಗೆ ಹಾಕಿ ತನ್ನ ಶುದ್ಧ ಏಶಿಯಾಟಿಕ— ವಿರೋಧಿ ಧೋರಣೆಗಾಗಿ ಹೆಮ್ಮೆ ಪಡುತಲಿತ್ತು. ಟ್ರಾನ್ಸವಾಲದಲ್ಲಿ ಅಲ್ಲಲ್ಲಿ ಕೆಲಕೆಲವು ಹಿಂದೀ ವ್ಯಾಪಾರಿಗಳು, ಹೊತ್ತು ಮಾರುವವರು ಮತ್ತು ಇತರರು ಇದ್ದರು ಪ್ರತ್ಯೇಕೀಕರಣದ ಪ್ರಸಿದ್ಧವಾದ ಧೋರಣೆ ಅಲ್ಲಿಯೆ ಉದಯಿಸತೊಡಗಿತು ನಾತಾಳದಲ್ಲಿದ್ದ ಬಿಳಿಯರು, ಉದ್ದೇಶಪೂರ್ವಕವಾಗಿ, ತಮ್ಮ ಸ್ವಂತ ಹಿತಸಾಧನೆಗಾಗಿ, ತಮ್ಮ ಸಕ್ಕರೆ ಮತ್ತು ಚಹಾ ತೋಟಗಳಲ್ಲಿಯೂ ಇತರ ಉದ್ಯೋಗಗಳಲ್ಲಿಯೂ ದುಡಿಯಲೆಂದು ಕರಾರು ಬದ್ಧ ಹಿಂದೀಯರನ್ನು ದೊಡ್ಡ ಸಂಖ್ಯೆಯಲ್ಲಿ ಕರೆಸಿಕೊಂಡರು. ಈ ಕರಾರುಬದ್ಧರ ಹಿಂದೆಯೇ ಹಿಂದೀ ವ್ಯಾಪಾರಿಗಳೂ ಇತರರೂ ಹೋದರು. ಆದುದರಿಂದ ಇಂದು ಇಲ್ಲಿ ಹಿಂದೀಯರ ಜನಸಂಖ್ಯೆ ೧.೦ವು ಕಟ್ಟಿದೆ.

೪. ಯೂನಿಯನ್ (ಸಂಯುಕ್ತ ಸರಕಾರ) ಸ್ಥಾಪಿತವಾದಾಗ ದ. ಆಫ್ರಿಕೆಯ ಜನಾಂಗಗಳ— ಅಂದರೆ ಆಫ್ರಿಕನ್ (ಬಂಟು), ಯುರೋಪಿಯನ್ ಮತ್ತು ಏಶಿಯಾಟಿಕ (ಮುಖ್ಯವಾಗಿ ಹಿಂದೀಯರು) —ಜನಾಂಗಗಳ ಸಂಮಿಲನವಾಗುವದೆಂದು ಯಾರಾದರೂ ಆಶಿಸಬಹುದಾಗಿತ್ತು. ಅಂಥ ಸಂಮಿಲನವಾಗಿದ್ದರೆ ಇಡೀ ಜಗತ್ತಿಗೇ ಅದೆಂಥ ಉದಾತ್ತ ಪರಂಪರೆ ಹಾಕಿಕೊಡುತಿತ್ತು! ಆದರೆ ಹಾಗೆ ಆಗಲಿಲ್ಲ. ಬದಲಿಗೆ ಯೂನಿಯನ್ನು ಆಫ್ರಿಕನ್-ವಿರೋಧಿ, ಏಶಿಯಾಟಿಕ-ವಿರೋಧಿ ಕೂಟವಾಗಿ ಪರಿಣಮಿಸಿತು. ಯೂನಿಯನ್ನಿನ ಮುನ್ನಡೆಯ ಪ್ರತಿ ವರ್ಷವೂ ಈ ಕೂಟದ ಮುನ್ನಡೆಯನ್ನು ಸ್ಪಷ್ಟವಾಗಿ ಮಾಡಿತು. ಅದರ ಜತೆಗೆ ಅಲ್ಲಿನ ಹಿಂದೀ ನಿವಾಸಿಗಳು ಮತ್ತು ಅವರ ವಂಶಜರು ಹೂಡಿದ ಹೋರಾಟವೂ ತೀಕ್ಷ್ಣವಾಯಿತು. ಪರಿಶಿಷ್ಟ "ಅ" ದಲ್ಲಿ ಇದನ್ನು ಸ್ಫುಟವಾಗಿ ನೋಡಬಹುದು.

೫. ಮಾನ್ಯ ವಾಯಿಸರಾಯರು ಈ ಸಮಸ್ಯೆಯನ್ನು ಈ ದೃಷ್ಟಿಯಿಂದಲೇ ನೋಡಬೇಕು ಹೊರತು ಬೇರಾವ ದೃಷ್ಟಿಯಿಂದಲ್ಲ, ಎಂದು ನಾವು ಕೇಳಿಕೊಳ್ಳುತ್ತೇವೆ. ಈ ಶಿಷ್ಟಮಂಡಲವನ್ನು ದಕ್ಷಿಣ ಆಫ್ರಿಕೆಯಿಂದ ತ್ವರೆಯಾಗಿ ಇಲ್ಲಿಗೆ ಬರುವಂತೆ ಮಾಡಿರುವ, ಫೀಲ್ಡ ಮಾರ್ಶಲ ಸ್ಮಟ್ಸರು ಹೂಡಿರುವ ಅಪಾಯಕರ ಮಸೂದೆಯೆಂದರೆ ಏಶಿಯಾಟಿಕ್ ಜನರನ್ನು ಶಾಶ್ವತ ನೀಚಸ್ಥಿತಿಗೆ ಒಗೆದುಬಿಡುವ ವ್ಯವಸ್ಥೆಯಲ್ಲಿ ದೊಡ್ಡ ಹೆಜ್ಜೆಯೆಂದು, ಬಹುಶಃ ಈ ವರೆಗಿನ ಪ್ರಯತ್ನಗಳೆಲ್ಲೆಲ್ಲ ಅತಿದೊಡ್ಡದೆಂದು ಹೇಳಬೇಕು. ಹೀಗೆ ಜಡಿಯಲಾದ ಕೀಲು ಈಗ ಸರ್ವವ್ಯಾಪಿ ಅಸಮಾನತೆ ಮತ್ತು ನೀಚತೆಯಾಗಿ ರೂಪುಗೊಂಡಿದೆ. ಈ ಪ್ರಕಾರ, ಪ್ರತ್ಯೇಕೀಕೃತ ವಲಯಗಳು ಉಂಟಾಗಿವೆ—ಬಿಳಿಯರು ತಮಗಾಗಿ ಒಂದು ವಲಯವನ್ನು ಮೀಸಲಿಟ್ಟುಕೊಂಡು, ಆ ಮೂಲಕ ಇತರ ಜನಾಂಗಗಳನ್ನು ಕಾಯಿದೆ ಬಲದಿಂದ ಇತರ ವಲಯಗಳಲ್ಲಿ ಪ್ರತ್ಯೇಕಿಸಿಟ್ಟದ್ದಾರೆ. ದೇವರು ಮನುಷ್ಯನನ್ನು "ಒಂದು ವಿಶಾಲ ಮಾನವ ಕುಟುಂಬ" ವಾಗಿ ನಿರ್ಮಿಸಿದ್ದರೆ ದಕ್ಷಿಣ ಆಫ್ರಿಕೆಯ ಬಿಳಿ ಜನಾಂಗಗಳು ವರ್ಣಭೇದದ ಆಧಾರದಿಂದ ಅದನ್ನು ಮೂರು ಬೇರೆ ಬೇರೆ ವಿಭಾಗಗಳಾಗಿ ವಿಂಗಡಿಸಬೇಕೆನ್ನುತ್ತಾರೆ.

೬ ಬರಲಿರುವ ಭೂಮಿ ಮಸೂದೆಯೇ ಬಲು ಕೆಡಕಾಗಿದ್ದರೆ ಮತಾಧಿಕಾರ ಮಸೂದೆ ಅದಕ್ಕಿಂತಲೂ ಕೆಟ್ಟ. ಅದು ಮತಾಧಿಕಾರದ ಅಣಕ; ಅದು ನಮಗೆ ಕೊಡಲಾಗಿರುವ ಕೀಳ್ಮಟ್ಟವನ್ನು ಚುಚ್ಚಿ ನೆನವರಿಕೆ ಮಾಡಿಕೊಡುವಂಥದಿದೆ. ನಮ್ಮೊಳಗಿಂದಲೇ ಪ್ರತಿನಿಧಿಯೊಬ್ಬನನ್ನು ಆರಿಸಿ ಕಳಿಸಲು ಕೂಡ ನಾವು ಯೋಗ್ಯರಲ್ಲವೆಂಬಷ್ಟು ಕೀಳು ಮಟ್ಟದು.

೭. ನಮ್ಮ ವೈಯಕ್ತಿಕ ಮತ್ತು ಸೊತ್ತಿನ ಹಕ್ಕುಗಳು ನಮಗೆ ಪ್ರಿಯವಾಗಿದ್ದರೂ ಅವುಗಳಿಗಾಗಿ ಸಂರಕ್ಷಣೆ ಕೇಳಲು ಅಷ್ಟು ದೂರದಿಂದ ನಾವಿಲ್ಲಿ ಬಂದಿಲ್ಲ. ನಾವು ಹೂಡಿರುವ ಹೋರಾಟ ಸಮಾನ ಸ್ಥಾನಮಾನಕ್ಕಾಗಿ ; ಆದುದರಿಂದ ಅದು ಎಷ್ಟು ಮಟ್ಟಿಗೆ ನಮ್ಮದೋ ಅಷ್ಟೇ ತಮ್ಮದು ಎಂಬುದನ್ನು ಮಾನ್ಯ ವಾಯಿಸರಾಯರು ನಮ್ಮ ಮಾತೃಭೂಮಿಯ ಜನರು ಅರಿತುಕೊಳ್ಳಲೆಂದು ಮತ್ತು ತಮ್ಮ ಕೈಯಿಂದ ಸಾಧ್ಯವಿದ್ದ ಸಹಾಯವನ್ನೆಲ್ಲ ನೀಡಬೇಕೆಂದು ಕೇಳಿಕೊಳ್ಳುವ ಸಲುವಾಗಿಯೆ ನಾವು ಬಂದಿರುವೆವು. ದಕ್ಷಿಣ ಆಫ್ರಿಕೆಯಲ್ಲಿ ಯಾವುದನ್ನು ಮಾಡುವ ಪ್ರಯತ್ನ ನಡೆದಿದೆಯೋ ಅದು ಬ್ರಿಟಿಶರು ಮಾಡಿರುವ ಮತ್ತು ಸ್ವಯಂ ಸ್ಮಟ್ಸರೇ ಮಾಡಿರುವ ಧೀರ ಘೋಷಣೆಗಳ ನಿರಾಕರಣೆಯಾಗಿದೆ.

೮. ಹಿಂದುಸ್ಥಾನದಿಂದ ಬ್ರಿಟಿಶ ಅಧಿಕಾರವನ್ನು ಹಿಂದೆ ತೆಗೆದುಕೊಂಡು ಅದನ್ನು ಆಯ್ಕೆಗೊಂಡ ಹಿಂದೀ ಪ್ರತಿನಿಧಿಗಳ ಕೈಯಲ್ಲಿ ಕೊಡುವ ದಿನ ಸಮೀಪಿಸಿದೆಯೆಂದು ತಿಳಿದು ನಮಗೆ ಸಂತೋಷವಾಗುತ್ತದೆ. ಅಂದ ಮೇಲೆ, ಸಮಾನತೆಯ ಪರವಾಗಿ ನಮಗೆ ನಿಮ್ಮ ಬೆಂಬಲವನ್ನಿತ್ತು ಸಾಧ್ಯವಾದ ಮಟ್ಟಿಗೆ ಅದನ್ನು ನಿಸ್ಸಂದಿಗ್ಧ ರೀತಿಯಿಂದ ಆಚರಣೆಗೆ ತರುವದು ನಿಮ್ಮ (ವಾಯಿಸರಾಯರ) ಇಮ್ಮಡಿ ಮತ್ತು ವಿಶೇಷ ಕರ್ತವ್ಯವಲ್ಲವೆ ?

* * *

೧೦. ಆದುದರಿಂದ ನಾತಾಳ ಹಿಂದೀ ನ್ಯಾಯ ಸಮಿತಿಯವರು ಸೂಚಿಸಿದಂತೆ "ದಕ್ಷಿಣ ಆಫ್ರಿಕೆಯಲ್ಲಿರುವ ಹಿಂದೀಯರಿಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನು" ತೀರ್ಮಾನಿಸುವ ಸಲುವಾಗಿ ಉಭಯ ಸರಕಾರಗಳ ಒಂದು ದುಂಡುಮೇಜಿನ ಪರಿಷತ್ತು ಕೂಡಿಸಲು ಮಾನ್ಯ ವಾಯಿಸರಾಯರು

—೩ ನೇ ಪುಟ ನೋಡಿರಿ

ಇದು ಮೂರನೆ ಮಹಾಯುದ್ಧದ ಬೀಜಾರೋಪಣ: ಏಶಿಯಾಕ್ಕೇ ಆಹ್ವಾನ; ದಕ್ಷಿಣ ಆಫ್ರಿಕೆಯ ವರ್ಣದ್ವೇಷ ಮಸೂದೆಯ ಬಗ್ಗೆ ಮಹಾತ್ಮರ ಅಭಿಪ್ರಾಯ....

....("ಹರಿಜನ" ದಿಂದ)

ದಕ್ಷಿಣ ಆಫ್ರಿಕೆಯ ಬಿಳಿಯನ ಧೋರಣೆಯ ಪ್ರಶ್ನೆಯನ್ನು ಈಚೆಗಿನ ಘಟನಾವಳಿಗಳು ಪರಮೋಚ್ಚಕ್ಕೆ ಏರಿಸಿವೆ. ಅದರಲ್ಲಿ ಜಾಗತಿಕ ಯುದ್ಧದ ಬೀಜ ಹೊರಗೆ ಕಾಣಿಸದಂತೆ ಅಡಕವಾಗಿದೆ. ದಕ್ಷಿಣ ಆಫ್ರಿಕೆಯ ಹಿಂದೀಯರ ಶಿಷ್ಟಮಂಡಳವೊಂದು ಹಿಂದುಸ್ತಾನಕ್ಕೆ ಬರಲು ಕಾರಣವಾದ ದಕ್ಷಿಣ ಆಫ್ರಿಕಾ ಪಾರ್ಲಮೆಂಟಿನಲ್ಲಿ ಮಂಡಿಸಲ್ಪಟ್ಟಿರುವ ಭೂಮಿ ಮತ್ತು ಮತಾಧಿಕಾರ ಮಸೂದೆ ಮೇಲ್ನೋಟಕ್ಕೆ ನಾತಾಳ ಮತ್ತು ಟ್ರಾನ್ಸವಾಲದ ಹಿಂದೀಯರನ್ನಷ್ಟೆ ತೊಂದರೆಗೆ ಒಳಗು ಮಾಡಿದಂತೆ ಕಂಡರೂ ನಿಜವಾಗಿ ಇಡಿ ಏಶಿಯಾಕ್ಕೆ ಮತ್ತು ಅರ್ಥಾಂತರದಿಂದ ನಿಗ್ರೋ ಜನಾಂಗಗಳಿಗೆಲ್ಲ ಒಂದು ಆಹ್ವಾನದಂತಿದೆ. ಈ ವಿಷಯವನ್ನು ಹಿಂದುಸ್ತಾನ ಇಂದಿನ ತನ್ನ ಉದಗ್ರ ಮನೋಭಾವದಲ್ಲಿ ಇನ್ನಾವ ಬಗೆಯಲ್ಲಿಯೂ ಅರ್ಥ ಮಾಡಿಕೊಳ್ಳುವಂತಿಲ್ಲ.

ಪಂಡಿತ ಜವಾಹರಲಾಲರು ಅಪಾದಮಸ್ತಕ ಹಿಂದೀಯರು. ಅಂತರ್‌ರಾಷ್ಟ್ರೀಯತಾವಾದಿಯಾಗಿರುವುದರಿಂದ ಎಲ್ಲ ವಿಷಯಗಳನ್ನು ಕೇವಲ ಸ್ಥಾನಿಕ ದೃಷ್ಟಿಯಿಂದ ನೋಡದೆ ಅಂತರ್ರಾಷ್ಟ್ರೀಯ ದೃಷ್ಟಿಕೋನದಿಂದ ನೋಡಲು ನಮಗೆ ಅವರು ಅಭ್ಯಾಸ ಮಾಡಿಸಿದ್ದಾರೆ. ದೈಹಿಕವಾಗಿಯೂ ಸಾಂಪತ್ತಿಕವಾಗಿಯೂ ದುರ್ಬಲವಾಗಿದ್ದರೂ ನೈತಿಕ ಮತ್ತು ಸಂಖ್ಯಾದೃಷ್ಟಿಯಿಂದ ಬಲಿಷ್ಠವಾಗಿರುವ ಹಿಂದುಸ್ತಾನ, ತನ್ನ ಸ್ವಾತಂತ್ರ್ಯದಿಂದ ಯಾರೊಬ್ಬರಿಗಾಗಲಿ ಯಾವುದೊಂದು ರಾಷ್ಟ್ರಕ್ಕಾಗಲಿ ಅಪಾಯವಾಗಗೊಡುವದಿಲ್ಲವೆಂದೂ ಬದಲಿಗೆ ಜಗತ್ತಿನಲ್ಲೆಲ್ಲಾದರೂ ನಡೆಯುವ ಉದಾತ್ತ ಪ್ರಯತ್ನಗಳಿಗೆ ತನ್ನ ಬೆಂಬಲವುಂಟೆಂದೂ ಉಚ್ಚಸ್ವರದಿಂದ ಸಾರಿದೆ-ಆದುದರಿಂದ ಹಿಂದುಸ್ತಾನವು ದಕ್ಷಿಣಆಫ್ರಿಕಾ ಸರಕಾರದ ಈ ಕಾಯಿದೆ ಕ್ರಮವನ್ನು ತನ್ನ ಜನರಿಗೊಂದು ಆಹ್ವಾನವೆಂಬಂತೆ ಭಾವಿಸಿಕೊಂಡಿದೆ. ಹಿಂದೀಯರ ಸೊತ್ತಿನ ಹಕ್ಕುಗಳಿಗೆ ಮಾತ್ರವಲ್ಲ, ತಮ್ಮ ಮಾನವ ಸ್ಥಾನಮಾನಕ್ಕೆ ಅಪಾಯವುಂಟಾಗಿದೆಯೆಂದು ದ. ಆಫ್ರಿಕೆಯ ಹಿಂದೀಯರು ಭಾವಿಸಿದ್ದಾರೆ ಅವರು. ದಕ್ಷಿಣ ಆಫ್ರಿಕೆಯಲ್ಲಿ ತಾವು ಬದುಕಿದರೆ ಸಾಕೆಂದು ತಿಳಿದುಕೊಂಡಿಲ್ಲ. ಅದಕ್ಕಾಗಿ ಆದರೆ ಅಷ್ಟು ದೂರದಿಂದ ಅವರು ಶಿಷ್ಟಮಂಡಲ ಕಳಿಸಬೇಕಾಗಿದ್ದಿಲ್ಲ. ದಕ್ಷಿಣ ಆಫ್ರಿಕೆಯ ಯುರೋಪಿಯನ್ನರೊಡನೆ ಸಮಾನಸ್ಕಂಧರಾಗಿ ಬಾಳಲು ಅವರು ಬಯಸುತ್ತಾರೆ. ಇಂದು ತಾವು ಹಾಗೆ ಇಲ್ಲವೆಂದು ಅವರು ಬಲ್ಲರು. ಆದರೆ ಅವರು ತಮ್ಮ ಸ್ಥಿತಿ ಕೊಳೆಯದಂತೆ ಮುಂದೆ ಸಾಗಬೇಕಾಗಿದೆ. ಆ ಮುನ್ನಡೆಯಲ್ಲಿ ಸಹಜವಾಗಿ ಹಿಂದುಸ್ತಾನ ಅವರಿಗೆ ಸಹಾಯ ಮಾಡುವದು. ವಸ್ತುತಸ್ತು ಎಲ್ಲ ನೈತಿಕ ತತ್ವಗಳು ಅವರ ಬೆಂಬಲಕ್ಕಿವೆ. ಆದರೂ ಅದರ ಹೊಣೆಯೆಲ್ಲ ಅವರ ಹೆಗಲಿಗೇ ಹೇರಿದ್ದು. ಅವರು ಸತ್ಯಾಗ್ರಹದ ಶಕ್ತಿಯನ್ನು ಪುನಃ ಕಂಡುಕೊಂಡಿದ್ದಾರೆ. ಅದೇ ಅವರ ಸತ್ವದ ಪರಮ ಭಾಂಡಾರ. ಅದಕ್ಕೆ ಕಾಲವಿನ್ನೂ ಕೂಡಿಬಂದಿಲ್ಲ. ಅಂಥ ಕಾಲ ಎಂದೂ ಬರಲಾರದೆಂದೇ ಆಶಿಸೋಣ. ಜಗತ್ತಿನ ಎಲ್ಲ ನೈತಿಕ ಸತ್ವಗಳನ್ನೂ ತಮ್ಮ ಸುತ್ತ ಶೇಖರಿಸಿಕೊಳ್ಳಲು ಅವರು ಯತ್ನಿಸಬೇಕಾಗಿದೆ. ಅವರು ಎಲ್ಲ ಕಳೆಗಳನ್ನು, ಎಲ್ಲ ಆಲಸ್ಯವನ್ನು ಕಿತ್ತೊಗೆದು ನೆಲವನ್ನು ಹಸನುಮಾಡಿಕೊಳ್ಳಬೇಕಾಗಿದೆ. ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಕಾವಲಿಡದಿದ್ದರೆ ಯಾವಾಗಲೂ ಎಲ್ಲೆಲ್ಲಿಯೂ ಎದ್ದೇಳುವ ವೈಯಕ್ತಿಕ ಮಹತ್ವಾಕಾಂಕ್ಷೆಗಳನ್ನೂ ಕತ್ತರಿಸಿ

(೧೩ನೇ ಪುಟ ನೋಡಿರಿ)

ದುಡಿದು ಗಳಿಸಿರಿ; ಜನತೆಯನ್ನು ಸಂಘಟಿಸಿರಿ:

ಭಿಕ್ಷೆಯನ್ನು ಆಶಿಸುವದು ಸೈನಿಕನಿಗೆ ಭೂಷಣವಲ್ಲ: ಅರ್ಝಾದ ಸೈನಿಕರಿಗೆ ಗಾಂಧೀಜಿಯ ಉಪದೇಶ

"ಹರಿಜನ" ದಲ್ಲಿ ಶ್ರೀ ಪ್ಯಾರೇಲಾಲರಿಂದ

ಮೇಜರ ಜನರಲ್ ಶಾಸವಾಜರೂ ಕರ್ನಲ ಸಹಗಲರೂ ಮುಂಬಯಿಯಲ್ಲಿ ಗಾಂಧಿಜೀಯ ವಸತಿಕಾಲದಲ್ಲಿ, ಬಿಡುಗಡೆ ಮಾಡಲ್ಪಟ್ಟ ಅರ್ಝಾದ ಹಿಂದ ಸೈನಿಕರ ಭವಿಷ್ಯದ ಪ್ರಶ್ನೆಯನ್ನು ಅವರೊಡನೆ ಚರ್ಚಿಸುವ ಅನುವು ಮಾಡಿಕೊಂಡರು. ಈ ಸೈನಿಕರು ಅಹಿಂಸಾಮಾರ್ಗದಲ್ಲಿ ರಾಷ್ಟ್ರೀಯ ಸೇವೆಮಾಡಿ ಧನ್ಯರೆನಿಸಲು ಹಾತೊರೆಯುತ್ತಿರುವರೆಂದು ಅವರು ಗಾಂಧೀಜಿಗೆ ಹೇಳಿದರು. ಆದರೆ ಅವರನ್ನು ನಾಗರಿಕ ವ್ಯವಹಾರದಲ್ಲಿ ಯೋಗ್ಯವಾಗಿ ಸೇರಿಸಿಕೊಂಡು ಸರಿಯಾಗಿ ದಾರಿ ತೋರದೆ ಹೋದರೆ, ದುಷ್ಟರು ಅವರನ್ನು ಅಡ್ಡ ಹಾದಿ ಹಿಡಿಸುವ ಸಂಭವವಿದೆ. ಅವರು ಯಾವ ಧ್ಯೇಯವನ್ನು ಅನುಸರಿಸಬೇಕು? ಎಂದು ಕೇಳಿದರು. ಹಿಂದೆ ಮದ್ರಾಸಿನಲ್ಲಿ ಭೆಟ್ಟಿಯಾಗಿದ್ದ ಕೆಲ ಬಿಡುಗಡೆ ಹೊಂದಿದ ಅರ್ಝಾದ ಸೈನಿಕರಿಗೆ ತಾವಿತ್ತಿದ್ದ ಉಪದೇಶವನ್ನೇ ಗಾಂಧೀಜಿ ಈಗಲೂ ಪುನರುಚ್ಚರಿಸಿದರು. ಭಿಕ್ಷೆಯಿಂದ ಜೀವನ ಸಾಗಿಸುವದು ಸೈನಿಕನ ಸ್ವಾಭಿಮಾನ ಗೌರವಗಳಿಗೆ ಕುಂದೆಂದು ಅವರು ಆಗ ಹೇಳಿದ್ದರು. ಪ್ರಾಮಾಣಿಕ ಪರಿಶ್ರಮದಿಂದ ಜೀವಿಕೆಯನ್ನು ಗಳಿಸುವ ಆದರ್ಶವನ್ನು ಅವರು ತಮ್ಮ ಮುಂದಿರಿಸಿಕೊಳ್ಳಬೇಕು. ಅರ್ಝಾದ ಸೈನ್ಯ ಪರಿಹಾರ ನಿಧಿಯೇನೋ ಇದೆ. ಆದರೆ ಅದನ್ನು ಪಡಿಕಾಳು (ಡೋಲ) ಕೊಡಲು ಬಳಸುವದು ತಪ್ಪಾಗುವದು. ದಕ್ಷಿಣ ಆಫ್ರಿಕೆಯಲ್ಲಿ ಸತ್ಯಾಗ್ರಹಿ ಬಂದಿಗಳ ಆಶ್ರಿತರನ್ನು ಟಾಲಸ್ಟಾಯ ಫಾರ್ಮದಲ್ಲಿ ತಂದು ಕೂರಿಸಿ ತಾವು ಅವರಿಗೆ ಪರಿಹಾರವಿತ್ತ ಸಂಗತಿಯನ್ನು ಗಾಂಧಿಜಿ ವಿವರಿಸಿದರು. ಅಲ್ಲಿ ಅವರು (ನಿರಾಶ್ರಿತರು) ಯಥಾನುಶಕ್ತಿ ದುಡಿಯಬೇಕಾಗುತ್ತಿತ್ತು. ಈ ವಿಧಾನದಲ್ಲಿ ಒಂದು ವಿಶೇಷ ಅನುಕೂಲತೆಯುಂಟು. ಅದನ್ನು ಎಷ್ಟು ಹಿರಿದಾಗಿ ಬೆಳೆಸಲೂ ಬರುತ್ತದೆ; ಆದರೂ ಅದು ಅಷ್ಟೊಂದು ತುಟ್ಟಿಯೆಂದಾಗಲಿ ಅವಾಢವ್ಯವೆಂದಾಗಲಿ ಅನಿಸುವದಿಲ್ಲ.

ಅರ್ಝಾದ ಸೈನಿಕರ ನಿಜವಾದ ಪರೀಕ್ಷಾಕಾಲ ಇದೀಗ ಒದಗಿಬರಲಿದೆ ಎಂದು ಗಾಂಧೀಜಿ ಹೇಳಿದರು. ಹೋರಾಟದ ರಂಗದಲ್ಲಿ ಒಂದು ಉದ್ವೇಗದ, ಒಂದು ಅದ್ಭುತರಮ್ಯತೆಯ ವಾತಾವರಣವಿದೆ. ನಾಗರಿಕ ಜೀವನದಲ್ಲಿ ಹಾಗಲ್ಲ ಇಂದು ದೇಶದ ಮುಂದೆ ಬರಗಾಲದ ಭೂತ ಬಂದು ನಿಂತಿದೆ. ರಣರಂಗದಲ್ಲಿ ಯಾವ ಧೈರ್ಯ ಸಾಹಸ, ಅಚಲ ನಿರ್ಧಾರಗಳಿಂದ ಅರ್ಝಾದ ಸೈನಿಕರು ಹೋರಾಡಿದರೋ ಅದೇ ಬಗೆಯಿಂದ ಈ ಬರಗಾಲವನ್ನೆದುರಿಸಿ ಹೋರಾಡಲು ಜನರಿಗೆ ಅವರು ಸಹಾಯವಾದರೆ? ಕೋವಿಯನ್ನು ಹಿರಿಯುವದರಲ್ಲಿ ಯಾವ ಜಾಣ್ಮೆ, ಪರಿಪೂರ್ಣತೆ, ಕೈಚಳಕಗಳನ್ನು ತೋರಿದರೋ ಅದೇ ಜಾಣ್ಮೆ, ಪರಿಪೂರ್ಣತೆ, ಕೈಚಳಕಗಳನ್ನು ಹಾರೆ, ಗುದ್ದಲಿ, ಕುಂಟೆಗಳನ್ನು ಉಪಯೋಗಿಸುವದರಲ್ಲಿಯೂ ತೋರುವರೆ? ಆಹಾರದ ಬೆಳೆ ಹೆಚ್ಚಿಸುವಗೋಸುಗ ಬಾವಿತೋಡುವದು. ಬಂಜರು ನೆಲವನ್ನು ಅಗೆಯುವದು ಮತ್ತು ವಸ್ತ್ರಹೀನರ ಮಾನಮುಚ್ಚುವ ಸಲುವಾಗಿ ರಾಟೆ ತಿರುಗಿಸುವದು ಮತ್ತು ಮಗ್ಗ ಹೊಯ್ಯುವದು ಇಂದಿನ ರಾಷ್ಟ್ರೀಯ ಅವಶ್ಯಕತೆ. ಈ ಕರೆಗೆ ಅವರು ಓಗೊಡುವರೇ? ಅವರಲ್ಲಿ ದೈಹಿಕಸತ್ವ, ಶಿಸ್ತು ಮತ್ತು ಅದಕ್ಕಿಂತಲೂ ಮಹತ್ವದ್ದೆಂದರೆ ಸಂಕುಚಿತ ಜಾತೀಯತೆಯಿಂದ ನಿರ್ಲಿಪ್ತವಾದ ಐಕ್ಯಭಾವನೆಯುಂಟು. ಇದೆಲ್ಲ ಸೇರಿ ಜನತೆಯನ್ನು ಅಹಿಂಸಾತ್ಮಕ ಶಿಸ್ತು ಸಂಘಟನೆಗಳಿಂದ ಒಂದಾಗಿ ಬಿಗಿಯುವದರಲ್ಲಿ ಅವರಿಗೆ ಅದ್ವಿತೀಯ ಅನುಕೂಲ ಪರಿಸ್ಥಿತಿಯುಂಟು.

ಇಚ್ಛೆಯುಳ್ಳ ಮತ್ತು ಯೋಗ್ಯನಾದ ಪ್ರತಿಯೊಬ್ಬ ಅರ್ಝಾದ ಸೈನಿಕನಿಗೆ ವಿಧಾಯಕ ಚಟುವಟಿಕೆಗಳಲ್ಲಿ ಸೇರಿಕೊಳ್ಳುವದು ಸಾಧ್ಯವಿದೆ. ಆ ಕೆಲಸವನ್ನು ಅವರು ಕೈಕೊಂಡರೆ ಅವರಲ್ಲೊಬ್ಬನಾದರೂ ನಿರುದ್ಯೋಗಿಯಾಗಿ ಉಳಿಯಬೇಕಾಗಿಲ್ಲ.

ಫ್ರಾಂವೆಲ್ಲನ ಸೈನ್ಯದ ಉದಾಹರಣೆ

ಅರ್ಝಾದ ಹಿಂದ ಸೈನಿಕರ ಧ್ಯೇಯಗಳನ್ನು ಗಾಂಧೀಜಿ ಈ ಬಗೆಯಾಗಿ ವಿವರಿಸುದದನು ಕೇಳುತ್ತಿರುವಾಗ ಇತಿಹಾಸದಲ್ಲಿ ತನ್ನ ಮುದ್ರೆಯೊತ್ತಿ ಹೋಗಿರುವ ಇನ್ನೊಂದು ರಾಷ್ಟ್ರೀಯ ಸೇನೆಯನ್ನು ಕುರಿತು ಪ್ರಸಿದ್ಧ ಇಂಗ್ಲಿಷ ಇತಿಹಾಸಕಾರನೊಬ್ಬನು ಬರೆದ ಈ ಕೆಳಗಿನ ಮಾತುಗಳು ನೆನಪಿಗೆ ಬರುತ್ತಿದ್ದವು.

ಆ ಮಾತುಗಳು ಕ್ರಾಂವೆಲ್ಲನ ಅಯರ್ನಸಾಯಿಡರಿಗೆ ಸಂಬಂಧಿಸಿದವುಗಳು. "ಈ ವಿವೇಕಿ, ನೀತಿವಾನ್, ಉದ್ಯಮಶೀಲ, ವಿಚಾರಶೀಲ ಮನುಷ್ಯರು ಬಡತನದ ಒತ್ತಡಕ್ಕೊಳಗಾಗಿ ಇಲ್ಲವೆ ಸೋಮಾರಿತನ, ಸ್ವೇಚ್ಛಾಚಾರಗಳ ಲೋಲುಪತೆಯಿಂದ ಅಥವಾ ಸೈನ್ಯಭರ್ತಿಯ ಅಧಿಕಾರಿಗಳ ಮೋಹಜಾಲಕ್ಕೆ ಮನಸೋತು ಆಯುಧ ಧಾರಣ ಮಾಡಿರದೆ, ಧಾರ್ಮಿಕ ಮತ್ತು ರಾಜಕೀಯ ಉತ್ಸಾಹದಿಂದಲೂ ಕೀರ್ತಿ, ಮೇಲ್ಮೆಗಳ ಬಯಕೆಯಿಂದಲೂ ಪ್ರೇರಿತರಾಗಿ ಹಾಗೆ ಮಾಡಿದ್ದರು. ಅವರು ಭಟ್ಟಂಗಿಗಳಾಗಿರದೆ ಇಂಗ್ಲಂಡಿನ ಧರ್ಮ ಸ್ವಾತಂತ್ರ್ಯಗಳ ಸಲುವಾಗಿ ತಮ್ಮ ಜೀವನವನ್ನು ಸ್ವಯಂಪ್ರೇರಣೆಯಿಂದ ಸಂಕಟದಲ್ಲಿ ಕೆಡಹಿದವರಾಗಿದ್ದರು. ತಾವು ಉಳಿಸಿದ ರಾಷ್ಟ್ರಗಳ ಹಿತಸಂರಕ್ಷಣೆಗಾಗಿ ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಕಾಯುವದು ಅವರ ಅಧಿಕಾರ, ಕರ್ತವ್ಯವಾಗಿತ್ತು.

"ಯುದ್ಧದಲ್ಲಿ ಈ ವಿಚಿತ್ರ ಸತ್ವಕ್ಕೆ ಎದುರಾಗುದು ಬೇರೊಂದಿದ್ದಿಲ್ಲ. ಅಷ್ಟೇ ಸುವ್ಯವಸ್ಥೆಯನ್ನು ಕಾಯ್ದುಕೊಂಡ ಮುಂದಾಳುಗಳುಂಟು. ಅಷ್ಟೇ ಉದ್ದಾಮ ಉತ್ಸಾಹದಿಂದ ತಮ್ಮ ಬೆಂಬಲಿಗರನ್ನು ಹುರಿದುಂಬಿಸಿದ ಮುಂದಾಳುಗಳೂ ಬೇರೆ ಉಂಟು. ಆದರೆ ಅತ್ಯಂತ ಕಠೋರವಾದ ಶಿಸ್ತಿನ ಸಂಗಡ ಪರಮ ಉಗ್ರ ಉತ್ಸಾಹವನ್ನು ಕ್ರಾಂವೆಲ್ಲನ ಪಾಳೆಯದಲ್ಲಿ ಮಾತ್ರ ಕಾಣಬಹುದಾಗಿತ್ತು. ಅವನ ಸೈನಿಕರು ಯಂತ್ರಸದೃಶವಾದ ನಿಯತಿಯಿಂದ ಮತ್ತು ಅದೇ ಸಮಯಕ್ಕೆ ಧರ್ಮಯೋಧರ ಉದ್ದಂಡ ಛಲದಿಂದ ಕುದಿಯುತ್ತ ವಿಜಯ ಮಾರ್ಗದಲ್ಲಿ ಮುಂದೊತ್ತಿದರು.

"ಆದರೆ ಕ್ರಾಂವೆಲ್ಲನ ಸೈನ್ಯವನ್ನು ಇತರ ಸೈನ್ಯಗಳಿಂದ ವಿಶಿಷ್ಟವಾಗಿ ಮಾಡಿದ ಗುಣವೆಂದರೆ ಅದರಲ್ಲಿ ಹಬ್ಬಿದ್ದ ಕಠೋರ ನೈತಿಕತೆ ಮತ್ತು ದೇವಭೀರುತ್ವ. ಆ ಅದ್ವಿತೀಯ ಪಾಳೆಯದಲ್ಲಿ ನಿಂದಾವಾಕ್ಯಗಳು ಕೇಳಿಬರುದಿಲ್ಲ, ಮದ್ಯಪಾನ ಜೂಜಾಟಗಳು ಕಾಣಬರುದಿಲ್ಲ. ಅದು ಅಧಿಕಾರ ನಡೆಸುತ್ತಿದ್ದ ದೀರ್ಘ ಅವಧಿಯಲ್ಲಿ ಶಾಂತಿಯುಕ್ತ ನಾಗರಿಕರ ಸೊತ್ತು ಮತ್ತು ಸ್ತ್ರೀಯರ ಮಾನವನ್ನು ಪವಿತ್ರವೆಂದು ಪರಿಗಣಿಸಲಾಗಿತ್ತು."

ಆದರೆ ಅವರ ಪರಮ ವಿಜಯ ಹೋರಾಟದ್ದಲ್ಲ ಹೋರಾಟ ನಿಂತ ಮೇಲಿನದು, ಎಂದು ಅದೇ ಇತಿಹಾಸಕಾರ ಬರೆಯುತ್ತಾನೆ.

"ಸೈನ್ಯವನ್ನೀಗ ವಿಸರ್ಜಿಸಬೇಕಾಗಿತ್ತು. ಯುದ್ಧದ ಅಭ್ಯಾಸ ಬಿದ್ದಿದ್ದ ೫೦ ಸಾವಿರ ಜನರನ್ನು ವಿಶಾಲ ವಿಶ್ವದಲ್ಲಿ ಒಮ್ಮೆಲೇ ಚೆಲ್ಲಿಕೊಡುವದಾಯಿತು. ಈ ಬದಲಾವಣೆಯಿಂದ ಬಹಳ ಅನ್ಯಾಯ ದೌರ್ಜನ್ಯಗಳು ಉಂಟಾದಾವು. ವಿಸರ್ಜಿಸಲ್ಪಟ್ಟ ಸೈನಿಕರು ಓಣಿ ಓಣಿಯಲ್ಲಿ ತಿರುಪೆಯೆತ್ತುತ್ತ ತಿರುಗತೊಡಗಬಹುದು. ಅಥವಾ ಹಸಿವಿನ ಬೇಗೆಯಿಂದ ಅವರು ಲೂಟಿ ಸುಲಿಗೆಗಳಲ್ಲಿ ಪ್ರಸಕ್ತರಾಗಬಹುದು, ಎಂಬ ನಂಬಿಕೆಯುಂಟಾಗಿತ್ತು. ಆದರೆ ಅಂಥ ಪರಿಣಾಮವಾವುದೂ ಆಗಲಿಲ್ಲ. ಕೆಲವೇ ತಿಂಗಳುಗಳ ಅವಧಿಯಲ್ಲಿ ಜಗತ್ತಿನ ಅತ್ಯಂತ ಪ್ರಚಂಡ ಸೈನ್ಯವೊಂದು ಜನರಾಶಿಯಲ್ಲಿ ಸುಳಿವು ಕೂಡ ಹತ್ತದಂತೆ ವಿಲೀನವಾಗಿ ಹೋಯಿತು. ಪ್ರತಿಯೊಂದು ಪ್ರಾಮಾಣಿಕ ಪರಿಶ್ರಮದಲ್ಲಿಯೂ ಈ ತಳ್ಳಿಹಾಕಿದ ಸೈನಿಕರು ಇತರ ಜನರಿಗಿಂತ ಹೆಚ್ಚು ಬೆಳಗಿದರೆಂದೂ ಅವರಲ್ಲಿ ಯಾರೊಬ್ಬನೂ ಕಳ್ಳತನ ದರೋಡೆಗಳಿಗಾಗಿ ನ್ಯಾಯಸ್ಥಾನದ ಮುಂದೆ ನಿಲ್ಲಿಸಲ್ಪಡಲಿಲ್ಲವೆಂದೂ ಯಾರೊಬ್ಬರೂ ಬಿಕ್ಕೆಬೇಡುತ್ತಿದ್ದಿಲ್ಲವೆಂದೂ ಅರಸು ಪಕ್ಷದವರೇ ಒಪ್ಪಿಕೊಂಡಿದ್ದಾರೆ. ಬದಲಿಗೆ ಯಾವನಾದರೊಬ್ಬನು ಬೇಕರ (ರೊಟ್ಟಿ ಮಾರುವವ) ನಾಗಿ ಉಪ್ಪಾರನಾಗಿ ಇಲ್ಲವೆ ಗಾಡಿಯವನಾಗಿ ತನ್ನ ಕಾರ್ಯತತ್ಪರತೆಯಿಂದಾಗಲಿ ವಿವೇಕದಿಂದಾಗಲಿ ಜನರನ್ನು ಆಕರ್ಷಿಸುತ್ತಿದ್ದರೆ ಅವನು ಕ್ರಾಂವೆಲ್ಲನ ಹಳೆಯ ಸೈನಿಕರಲ್ಲೊಬ್ಬನಾಗಿರಬೇಕೆಂದು ತಿಳಿಯುವಂತಾಯಿತು."

ಹಿಂದೀಯರನ್ನು ಶಾಶ್ವತ ನೀಚ ಸ್ಥಿತಿಗೆ ತಳ್ಳುವ ಯತ್ನ

(೧ ನೇ ಪುಟದಿಂದ ಮುಂದರಿದುದು)

ತಮ್ಮ ಪ್ರಭಾವವನ್ನು ಉಪಯೋಗಿಸಬೇಕೆಂದು ಕೇಳುತ್ತೇವೆ ಈ ಪ್ರಯತ್ನವೆಲ್ಲಾದರೂ ದುರ್ದೈವದಿಂದ ನಿಷ್ಫಲವಾದರೆ, ಆಗ, ನಾವು ಇದರ ಜತೆ ಕೊಟ್ಟಿರುವ ಗೊತ್ತುವಳಿಗನುಸಾರವಾಗಿ, ದಕ್ಷಿಣ ಆಫ್ರಿಕೆಯಲ್ಲಿರುವ ಹಿಂದೀ ಹಾಯ ಕಮೀಶನರರ ಕಚೇರಿಯನ್ನು ರದ್ದುಗೊಳಿಸಿ ಆರ್ಥಿಕ ಮತ್ತು ರಾಜಕೀಯ ಪ್ರತೀಕಾರಗಳನ್ನು ಕೈಕೊಳ್ಳಬೇಕೆಂದು ಕೋರುತ್ತೇವೆ. ಇದರಿಂದ ದಕ್ಷಿಣ ಆಫ್ರಿಕಾ ಸರಕಾರಕ್ಕಾಗುವ ಭೌತಿಕ ಹಾನಿ ಅತ್ಯಲ್ಪವೆಂದು ನಮಗೆ ಗೊತ್ತಿಲ್ಲವೆ ಇಲ್ಲ. ಇದರ ವಿರುದ್ಧ ಪ್ರತೀಕಾರೋಪಾಯಗಳು ಬಹು ನಮ್ಮ ತೊಂದರೆಗಳು ಹೆಚ್ಚುವವೆಂದೂ ನಮಗೆ ಗೊತ್ತು. ಆದರೆ ಈ ಪ್ರತೀಕಾರಗಳನ್ನು ಉಪಯೋಗಿಸಿದ್ದರಿಂದಾಗುವ ನೈತಿಕ ಲಾಭದ ಮುಂದೆ ನಮಗೊದಗುವ ಹಾನಿಯನ್ನು ನಾವು ಕ್ಷುಲ್ಲಕಪದಾರ್ಥವೆಂದು ಗಣಿಸುವೆವು.

ಪರಿಶಿಷ್ಟ "ಅ"

೧೮೯೩ ಕ್ಕೆ ಹಿಂದೆ ನಾತಾಳದಲ್ಲಿದ್ದ ಹಿಂದೀಯರು ಪಾರ್ಲಿಮೆಂಟರಿ ಮತ್ತು ನಗರಸಭಾ ಮತಾಧಿಕಾರವನ್ನು ಅನುಭವಿಸುತ್ತಿದ್ದರು. ೧೮೯೩ ರಲ್ಲಿ ಮೊಟ್ಟಮೊದಲು (ಆಗ ಮತದಾರ ಯಾದಿಗಳಲ್ಲಿದ್ದವರನ್ನು ಹೊರತು) ಹಿಂದೀಯರ ಮತಾಧಿಕಾರವನ್ನು ಕಸಿದುಕೊಂಡದ್ದಾಯಿತು. ಆದರೆ ಹಿಂದೀಯರ ಪ್ರತಿಭಟನೆಯನ್ನು ಲಕ್ಷಿಸಿ ಈ ಮತಾಧಿಕಾರ ಕಾಯಿದೆಯನ್ನು ಚಕ್ರವರ್ತಿ ಸರಕಾರ ಕಿತ್ತುಹಾಕಿತು.

೧೮೯೬ ರಲ್ಲಿ ಹಿಂದೀಯರ ಪಾರ್ಲಿಮೆಂಟರಿ ಮತಾಧಿಕಾರವನ್ನು, ಹಿಂದುಸ್ತಾನದಲ್ಲಿ ಅವರಿಗೆ ಆ ಅಧಿಕಾರವಿದ್ದಿಲ್ಲವೆಂಬ ನೆವವನ್ನು ಮುಂದೊಡ್ಡಿ, ಯಶಸ್ವಿಯಾಗಿ ಕಸಿದುಕೊಳ್ಳಲಾಯಿತು ೧೯೨೪ ರಲ್ಲಿ ಅವರ ನಗರಸಭಾ ಮತಾಧಿಕಾರವನ್ನು ಕಸಿದುಕೊಂಡರು. ಪರಿಣಾಮವಾಗಿ ಕೇಂದ್ರ' ಪ್ರಾಂತಿಕ' ನಗರಸಭಾ ಆಡಳಿತಗಳಲ್ಲಿ ಹಿಂದೀಯರಿಗೆ ಯಾವ ವರ್ಚಸ್ಸೂ ಉಳಿಯಲಿಲ್ಲ. ಫಲಸ್ವರೂಪವಾಗಿ ಸ್ಥಳಿಕ ಅಧಿಕಾರಿಗಳು ದರ್ಬಾನ ಮತ್ತು ಇತರ ಸ್ಥಳಗಳಲ್ಲಿ ಹಿಂದೀಯರ ವಸತಿಗಳನ್ನು ತೀರ ದುರ್ಲಕ್ಷಿಸತೊಡಗಿದರು.

ಹಿಂದೀಯರಿಗಾಗಿ ಪ್ರತ್ಯೇಕ ಶಾಲೆಗಳನ್ನು ಏರ್ಪಡಿಸಲಾಗಿದೆ. ಕೆಲವೆಡೆ ಹಿಂದೀಯರಿಗೂ ಆಫ್ರಿಕನ್ನರಿಗೂ ಸೇರಿ ಪ್ರತ್ಯೇಕ ಆಸ್ಪತ್ರೆಗಳಿವೆ ನಾತಾಳ ವಿಶ್ವವಿದ್ಯಾಲಯ ಕಾಲೇಜಿನಲ್ಲಿ ಹಿಂದೀಯರಿಗೆ ಪ್ರವೇಶವಿಲ್ಲ.

ರೇಲ್ವೆ ಗಾಡಿಗಳಲ್ಲಿ ಸಾಮಾನ್ಯವಾಗಿ ಹಿಂದೀಯರು ತಮಗಾಗಿ ಮತ್ತು ಇತರ ಯುರೋಪಿಯನ್ನೇತರಗಾಗಿ ಕಾದಿಟ್ಟ ಡಬ್ಬಿಗಳಲ್ಲಿ ಮಾತ್ರ ಕೂತುಕೊಳ್ಳಬಹುದು, ಅಂಚೆ ತಂತಿ ಕಚೇರಿ, ರೇಲ್ವೆ ತಿಕೀಟ ಅಫೀಸ, ಮತ್ತು ಅಂಥ ಸರಕಾರ ಕಚೇರಿಗಳಲ್ಲಿ ಯುರೋಪಿಯನ್ನೇತರಗಾಗಿ ಬೇರೆಯೆ ಕೌಂಟರುಗಳಿವೆ. ಈ ಬಗೆಯ ತಾರತಮ್ಯ ನ್ಯಾಯಸ್ಥಾನಗಳಲ್ಲಿಯೂ ಆಚರಣೆಯಲ್ಲಿವೆ.

ಸರಕಾರಿ ಮತ್ತು ನಗರ ಸಭಾ ನೌಕರಿಗಳಲ್ಲಿ ಕೀಳು ಕೆಲಸಗಳಲ್ಲಿ ಹೊರತು ಹಿಂದೀಯರಿಗೆ ಸರ್ವಥಾ ಪ್ರವೇಶವಿಲ್ಲವೆನ್ನಬಹುದು. ಆದರೆ ಹಿಂದೀಯರಿಗಾಗಿಯೆ ಇರುವ ಶಾಲೆಗಳಲ್ಲಿ ಹಿಂದೀ ಶಿಕ್ಷಕರಿರುವರು. ಕೆಲವು ನ್ಯಾಯಸ್ಥಾನಗಳಲ್ಲಿಯೂ ಹಿಂದೀ ದ್ವಿಭಾಷಿಗಳಿರುವರು.

ಈಚೀಚೆಗಿನ ವರೆಗೆ ಹಿಂದೀಯರಿಗಿದ್ದ ಕೆಲವೇ ಸೌಕರ್ಯಗಳಲ್ಲಿ ನಗರ ಮತ್ತು ಹಳ್ಳಿ ಭಾಗಗಳಲ್ಲಿ ಭೂಮಿಯನ್ನ ಕೊಂಡುಕೊಳ್ಳುವ ಮತ್ತು ಬೇಕಾದಲ್ಲಿ ವಸತಿ ಮಾಡುವ ಸ್ವಾತಂತ್ರ್ಯವೊಂದಾಗಿತ್ತು. ಆದರೆ ೧೯೪೩ ರ "ಪೆಗಿಂಗ ಕಾಯಿದೆ"ಯಿಂದ ಈ ಸೌಕರ್ಯಕ್ಕೆ ಕೂಡ ಕತ್ತರಿ ಬಂತು. ಫೀಲ್ಡ ಮಾರ್ಶಲ ಸ್ಮಟ್ಸರು ಈಗ ಪುನಃ ನಾತಾಳ ಮತ್ತು ಟ್ರಾನ್ಸವಾಲದಲ್ಲಿಯ ಹಿಂದೀಯರಿಗೆ ಸಂಬಂಧಿಸಿದ ಹೊಸ ಕಾಯಿದೆಗಳನ್ನು ತರುವದಾಗಿ ಪ್ರಕಟಿಸಿದ್ದಾರೆ.

(ಅ) ಮಾರ್ಚ ೩೧, ೧೯೪೬ ಕ್ಕೆ ಅವಧಿ ಮುಗಿಯುವ "ಪೆಗಿಂಗ್ ಕಾಯಿದೆ"ಯ ಬದಲಿಗೆ ಬರುವ ಈ ಹೊಸ ಕಾಯಿದೆಯನ್ವಯ ನಾತಾಳದಲ್ಲಿ ಕೆಲವೊಂದು ವಿಶಿಷ್ಟಪ್ರದೇಶಗಳಲ್ಲಲ್ಲದೆ ಬೇರೆ ಕಡೆ ಹಿಂದೀಯರು ಭೂಮಿಯನ್ನು ಕೊಂಡುಕೊಳ್ಳದಂತೆ ಮತ್ತು ವಸತಿ ಮಾಡದಂತೆ ಪ್ರತಿಬಂಧಿಸಲಾಗಿದೆ.

(ಆ) "ಪೆಗಿಂಗ್ ಕಾಯಿದೆ" ಯ ವ್ಯಾ[illegible] ಕೇವಲ ದರ್ಬಾನಕ್ಕಷ್ಟೇ ಸೀಮಿತವಾಗಿತ್ತು: ಅದು ಹಿಂದೀಯರ ಮತ್ತು ಯುರೋಪಿಯನರ ನಡುವೆ ಸ್ಥಿರ ಆಸ್ತಿಯ ವ್ಯವಹಾರವನ್ನಷ್ಟೆ ಪ್ರತಿಬಂಧಿಸಿತ್ತು. ಆದರೆ ಹೊಸ ಕಾಯಿದೆ ಇಡಿ ನಾತಾಳ ಪ್ರಾಂತಕ್ಕೇ—ಹಳ್ಳಿ ಮತ್ತು ನಗರಗಳಿಗೆ ಸೇರಿಯೆ ಅನ್ವಯಿಸುವದಲ್ಲದೆ ಮತ್ತು ಯುರೋಪಿಯನ್ ಮತ್ತು ಹಿಂದೀಯರ ನಡುವೆ ಮಾತ್ರ ಅಂಥ ವ್ಯವಹಾರವನ್ನು ಸಂಪೂರ್ಣ ಪ್ರತಿಬಂಧಿಸುವದಲ್ಲದೆ, "ಪೆಗಿಂಗ್ ಕಾಯಿದೆ" ಗಿಂತಲೂ ಮುಂದೆ ಹೋಗಿ ಹಿಂದೀಯರ ಮತ್ತು ಹಿಂದೀಯೇತರರ—ಅವರು ಯುರೋಪಿಯನ್, ಕಪ್ಪು, ಬಂಟು, ಚೀನಿ, ಮಲಯ ಅಥವಾ ಇನ್ನಾವ ಹಿಂದೀಯೇತರ ಜನಾಂಗದವರಿರಲಿ—ನಡುವೆ ವ್ಯವಹಾರವನ್ನು ಪ್ರತಿಬಂಧಿಸುತ್ತದೆ.

(ಇ) ಟ್ರಾನ್ಸವಾಲದಲ್ಲಿ ಹೊಸ ಕಾಯಿದೆಯನ್ವಯ ನಗರ, ಪಟ್ಟಣ, ಹಳ್ಳಿಗಳಲ್ಲಿ ಹಿಂದೀಯರ ವಸತಿ ಮತ್ತು ವ್ಯಾಪಾರ ವ್ಯವಹಾರಗಳಿಗೆ ಪ್ರತ್ಯೇಕ ಪ್ರದೇಶಗಳನ್ನು ಗುರುತಿಸಿಡಲಾಗುವದು. ಆ ಮೂಲಕ ಹಿಂದೀಯರ ವ್ಯಾಪಾರ ಚಟುವಟಿಕೆಯನ್ನು ಸಂಪೂರ್ಣವಾಗಿ ಅಲ್ಲದಿದ್ದರೂ ಬಹಳ ಮಟ್ಟಿಗೆ ಆವೇ ಪ್ರದೇಶಗಳಿಗೆ ಸೀಮಿತಗೊಳಿಸಲಾಗುವದು. ಹೀಗೆ ವ್ಯಾಪಾರ ಕೇಂದ್ರಗಳಿಂದ ದೂರ ಕಳಿಸಲ್ಪಟ್ಟು ಈ ವರೆಗೆ ತಾವು ವ್ಯಾಪಾರ ವ್ಯವಹಾರವನ್ನಿಟ್ಟುಕೊಂಡಿರುವ ಬೇರೆ ಎಲ್ಲ ಜನ ಸಮುದಾಯಗಳಿಂದ ಬೇರ್ಪಡಿಸಲ್ಪಟ್ಟು ಹಿಂದೀ ವ್ಯಾಪಾರಿಗಳು ಸರ್ವನಾಶವನ್ನು ಎದುರಿಸುವರು.

ಇದಲ್ಲದೆ ಟ್ರಾನ್ಸವಾಲದಲ್ಲಿ ವ್ಯಾಪಾರ ಪರವಾನಗಿ ಕಾಯಿದೆಗಳು ಹಿಂದೀಯರ ಮೇಲೆ ಬಹಳ ನಿರ್ದಯೆಯಿಂದ ಪ್ರಯೋಗಿಸಲ್ಪಡುತ್ತವೆ ಏಕೆಂದರೆ. ಪರವಾನಗಿ ಮಂಡಲಗಳು ಕಾರಣವನ್ನು ಕೊಡದೆ ಹಿಂದೀಯರಿಗೆ ಪರವಾನಗಿಯನ್ನು ನಿರಾಕರಿಸಲು ಬರುತ್ತದೆ. ಒಬ್ಬನಿಂದ ಇನೊಬ್ಬನಿಗೆ ಪರವಾನಗಿಯನ್ನು ವರ್ಗಾಯಿಸುವದಕ್ಕೂ ಇದೇ ನಿಯಮ ಅನ್ವಯಿಸುತ್ತದೆ.

ನಾತಾಳದಲ್ಲಿ ಕೂಡ, ಪರವಾನಗಿ ಕಾಯಿದೆಗಳೆಲ್ಲ ವರ್ಣಭೇದದ ತಳಹದಿಯ ಮೇಲೆಯೆ ನಿಂತಿದ್ದು ಹಿಂದೀಯರಿಗೆ ಬಹಳ ಪ್ರತಿಕೂಲವಾಗಿ ಪ್ರಯೋಗಿಸಲ್ಪಡುತ್ತವೆ.

(ಈ) ನಾತಾಳ ಮತ್ತು ಟ್ರಾನ್ಸವಾಲದಲ್ಲಿನ ಹಿಂದೀಯರಿಗೆ ಯೂನಿಯನ್ ಶಾಸನ ಸಭೆಯಲ್ಲಿ ಬಂಟು ಮೊದಲಾದ ದಕ್ಷಿಣ ಆಫ್ರಿಕೆಯ ಮೂಲ ನಿವಾಸಿಗಳಂತೆ "ವರ್ಣಭೇದ"ದ ಆಧಾರದಿಂದ ಪ್ರಾತಿನಿಧ್ಯ ದೊರೆಯುವದು. ೧೫೦ ಕ್ಕಿಂತಲೂ ಹೆಚ್ಚಿನ ಸದಸ್ಯರುಳ್ಳ ಶಾಸನ ಸಭೆಯಲ್ಲಿ ಹಿಂದೀ ಸಮಾಜದವರು ಮೂವರು ಯುರೋಪಿಯನ್ ಸದಸ್ಯರನ್ನು ತಮ್ಮ ಪ್ರತಿನಿಧಿಗಳಾಗಿ ಆರಿಸಿ ಕಳಿಸಬೇಕಾಗುವದು.

ಈ ಕ್ರಮಗಳು ಕಾಯಿದೆಯಾದರೆ ೧೯೨೭ ರಲ್ಲಿ ದ. ಆಫ್ರಿಕಾ ಮತ್ತು ಹಿಂದೀ ಸರಕಾರಗಳ ನಡುವೆ ಆದ ಕೇಪಟೌನ ಒಪ್ಪಂದವನ್ನು ಆಗಿಂದಾಗ್ಗೆ ಕೊಟ್ಟ ಆಶ್ವಾಸನಗಳನ್ನೂ ಮುರಿದಂತಾಗುವದು.

ಸೂಚನೆ:— ಈ ಪರಿಶಿಷ್ಟದಲ್ಲಿ ನಾತಾಳ ಮತ್ತು ಟ್ರಾನ್ಸವಾಲದಲ್ಲಿರುವ ಕೆಲವು ಕಾಯಿದೆ ತೊಂದರೆಗಳನ್ನಷ್ಟೇ ಉಲ್ಲೇಖಿಸಲಾಗಿದೆ ಹೊರತು ತೊಂದರೆ, ಉಪದ್ರವ ಮತ್ತು ದೂರುಗಳ ಯಾದಿಯನ್ನು ಪೂರೈಸಲಾಗಿಲ್ಲ. ಪ್ರತಿಯೊಂದು ಜೀವನ ಕ್ಷೇತ್ರದಲ್ಲಿಯೂ ಯುರೋಪಿಯನ್ನರ ವರ್ತನೆಯ ಕಾರಣದಿಂದೊದಗುವ ತೊಂದರೆಗಳು ತೀಕ್ಷ್ಣವಾಗಿದ್ದರೂ ಅವುಗಳ ಉಲ್ಲೇಖವನ್ನು ಉದ್ದೇಶಪೂರ್ವಕವಾಗಿ ಇಲ್ಲಿ ಮಾಡಲಾಗಿಲ್ಲ.

ಕಾಂಗ್ರೆಸ್ಸಿನ ಪ್ರಚಂಡ ವಿಜಯ

ಮುಂಬಯಿ ಶಾಸನಸಭೆಯ ೧೭೫ ಸ್ಥಳಗಳಲ್ಲಿ ಈಗಾಗಲೆ ೧೪೬ ಸ್ಥಳಗಳ ಪರಿಣಾಮ ಸಾರಲ್ಪಟ್ಟಿದೆ. ಈ ೧೪೬ ಸ್ಥಳಗಳಲ್ಲಿ ಕಾಂಗ್ರೆಸ್ಸಿಗೆ ೧೨೫ ಸ್ಥಳಗಳು ದೊರೆತು ಶಾಸನಸಭೆಯಲ್ಲಿ ಕಾಂಗ್ರೆಸ್ಸಿಗೆ ಪ್ರಚಂಡ ಬಹುಮತ ದೊರೆತಿದೆ. ೧೯೩೭ ರಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಕೇವಲ ೮೭ ಸ್ಥಳಗಳು ದೊರೆತು ಮಂತ್ರಿಮಂಡಳ ಸ್ಥಾಪಿತವಾಗಿದ್ದಿತು. ಆದರೆ ಈ ಸಲ ಬೇರೆ ಪಕ್ಷಗಳೆಲ್ಲ ಮಣ್ಣು ಮುಕ್ಕಿ ಕಾಂಗ್ರೆಸ್ಸೇ ಪ್ರಬಲ ಪಕ್ಷವಾಗಿ ಪರಿಣಮಿಸಿದೆ. ಸ್ವತಂತ್ರ, ಬ್ರಾಹ್ಮಣೇತರ, ರ್‍ಯಾಡಿಕಲ ಕಮ್ಯುನಿಸ್ಟ ಮೊದಲಾದ ಪಕ್ಷಗಳೆಲ್ಲ ಮಾಯವಾಗಿವೆ. ಮುಸಲ್ಮಾನ ಸ್ಥಳಗಳ ಹಾಗು ಜವಳಿ ಕೂಲಿಕಾರ ಸಂಘದ ಪರಿಣಾಮ ಪ್ರಸಿದ್ಧವಾಗುವದುಳಿದಿವೆ. ಮುಸಲ್ಮಾನರ ೩೦ ಸ್ಥಳಗಳಲ್ಲಿ ಕಾಂಗ್ರೆಸ್ ಮತ್ತು ರಾಷ್ಟ್ರೀಯ ಪಕ್ಷದ ಮುಸಲ್ಮಾನರು ೧೨ ಸ್ಥಳಗಳಲ್ಲಿ ಹೋರಾಟ ನಡೆಸಿರುವರು ಇವರಲ್ಲಿಯೂ ಕೆಲವು ಜನರು ಆರಿಸಿ ಬರುವರೆಂಬಲ್ಲಿ ಸಂದೇಹವಿಲ್ಲ. ಇಂತು ಕಾಂಗ್ರೆಸ್ಸಿಗೆ ನಿಚ್ಚಳ ಬಹುಮತ ದೊರೆತಿದೆ. ಬಹುಮತ ಪಡೆದ ಪಕ್ಷವೇ ಮಂತ್ರಿಮಂಡಳವನ್ನು ಸ್ಥಾಪಿಸಬೇಕಾದುದು ನ್ಯಾಯ್ಯವಾದುದರಿಂದ ಕಾಂಗ್ರೆಸ್ಸು ಮಂತ್ರಿಮಂಡಳ ರಚಿಸಬಲ್ಲುದು- ಆದರೆ ಈ ಸಲ ಸಾಧ್ಯವಾದರೆ ಎಲ್ಲೆಡೆ ಸಮ್ಮಿಶ್ರ ಸರಕಾರಗಳನ್ನೆ ಸ್ಥಾಪಿಸಬೇಕೆಂದು ಕಾಂಗ್ರೆಸ್ಸು ಬಯಸಿದೆ. ಮುಂಬಯಿ ಪ್ರಾಂತದಲ್ಲಿಯೂ ಮಂತ್ರಿಮಂಡಳ ರಚನೆಯಲ್ಲಿ ಮುಸ್ಲಿಂಲೀಗಿನ ಸಹಕಾರವನ್ನು ಕೋರಬಹುದು. ಮುಸ್ಲಿಂಲೀಗಿನವರು ಒಣ ಪ್ರತಿಷ್ಠೆ ಹೆಮ್ಮೆಗೆ ಬಲಿಬೀಳದೆ ಪ್ರಾಂತದ ಹಿತವನ್ನೆ ಮುಖ್ಯವಾಗಿ ಬಯಸಿ ಕಾಂಗ್ರೆಸ್ಸಿನಗೂಡ ಸಮ್ಮಿಶ್ರ ಸರಕಾರವನ್ನು ರಚಿಸಲು ಮುಂದಾಗಬೇಕೆಂದು ಸೂಚಿಸಬಯಸುತ್ತೇವೆ.

ಮತದಾರರ ಕಾಂಗ್ರೆಸನಿಷ್ಠೆ

ಈ ಚುನಾವಣೆಗಳ ಪರಿಣಾಮವನ್ನು ನೋಡಿದರೆ ಜನಸಾಮಾನ್ಯರಲ್ಲಿ ಎಷ್ಟೊಂದು ಜಾಗ್ರತಿಯಾಗಿದೆಂಬುದು ಸ್ಪಷ್ಟವಾಗುವದು. 'ಹಿಂದುಸ್ತಾನದಿಂದ ಹೊರಡಿರಿ' ಎಂಬ ಘೋಷಣೆಯನ್ನಿಟ್ಟುಕೊಂಡು ಕಾಂಗ್ರೆಸ್ಸು ಈ ಚುನಾವಣೆಯನ್ನು ಹೋರಾಡಿತು. ಸ್ವಾತಂತ್ರ್ಯ ಸಂಪಾದನೆಯೆ ಕಾಂಗ್ರೆಸ್ಸಿನ ಬೀಜಮಂತ್ರ. ಇದನ್ನರಿತುಕೊಂಡೆ ಮತದಾರರು ಕಾಂಗ್ರೆಸ್ಸಿಗೆ ಮತಹಾಕಿ ಪ್ರಚಂಡ ಬಹುಮತದಿಂದ ಕಾಂಗ್ರೆಸ್ಸಿಗರನ್ನು ಆರಿಸಿ ತಂದಿರುವರು. ಜಾತಿ, ಮತ ಪಂಥ, ದುಡ್ಡು, ದೊಡ್ಡಸ್ತನ, ಇರುದು ಬಾವಲಿಗಳನ್ನು ಲೆಕ್ಕಿಸದೆ ಕಾಂಗ್ರೆಸ್ಸಿನ ಕಾರ್ಯಕರ್ತರನ್ನು ಆರಿಸಿ ತಂದು ಕಾಂಗ್ರೆಸ ನಿಷ್ಠೆಯನ್ನು ಮತದಾರರು ವ್ಯಕ್ತಮಾಡಿರುವರು. ನಮ್ಮ ಕರ್ನಾಟಕದಲ್ಲಿಯ ಎಲ್ಲ ೨೨ ಸಾಮಾನ್ಯಸ್ಥಳಗಳು ಕಾಂಗ್ರೆಸ್ಸಿಗೆ ದೊರೆತಿವೆ. ಪ್ರತ್ಯಕ್ಷ ಚಳವಳಿಯಲ್ಲಿ ಕರ್ನಾಟಕ ಅಗ್ರಸ್ಥಾನ ಪಡೆದಂತೆ ಚುನಾವಣೆಯಲ್ಲಿಯೂ ಪಡೆದುದು ಇದರಿಂದ ವ್ಯಕ್ತವಾಗುವದು ಕಳೆದ ೨೫ವರ್ಷಗಳಿಂದ ಬಿಟ್ಟೂ ಬಿಡದೆ ಶಾಸನಸಭೆಯ ಖುರ್ಚಿಯನ್ನಲಂಕರಿಸುತ್ತಿದ್ದ ಸರ್ ಸಿದ್ಧಪ್ಪ ಕಂಬಳಿಯವರಂಥ ಒಂದು ಕಾಲದ ಬ್ರಾಹ್ಮಣೇತರ ಪಕ್ಷದ ಮುಖಂಡರನ್ನು ಮತದಾರರು ಉರುಳಿಸಿದ್ದು ಜಾತ್ಯಂಧರ ಕಣ್ಣಲ್ಲಿ ಅಂಜನ ಹಾಕಿದಂತಾಗಿದೆ. ಸರ್ ಸಿದ್ಧಪ್ಪನವರನ್ನು ಸೋಲಿಸುವದು ಯಾರಿಗೂ ಶಕ್ಯವಿಲ್ಲೆಂದು ಪ್ರತಿಪಾದಿಸುತ್ತಿದ್ದವರ ಸದ್ದು ಅಡಗಿತು. ಅದೇ ರೀತಿ ವಿಜಾಪುರ ದಕ್ಷಿಣದಲ್ಲಿ ಶ್ರೀಮಂತ ಸುಳ್ಳದ ದೇಸಾಯರು ಉರುಳಿದ್ದು ಮತದಾರರ ಕಾಂಗ್ರೆಸನಿಷ್ಠೆಯ ದ್ಯೋತಕವಾಗಿದೆ. ಕಾಂಗ್ರೆಸ್ಸಿನ ಮುಂದೆ ಮತದಾರರಿಗೆ ಯಾವದೂ ಮಹತ್ವವೆನಿಸುವದಿಲ್ಲೆಂಬುದು ಸೂರ್ಯಪ್ರಕಾಶದಷ್ಟು ಸ್ಪಷ್ಟವಾಗಿದೆ. ರಾಣೀಬೆನ್ನೂರ ಸ್ತ್ರೀ ಮತದಾರ ಸಂಘದಿಂದ ಹರಿಜನ ಹೆಣ್ಣುಮಗಳನ್ನು ಪ್ರಚಂಡ ಬಹುಮತದಿಂದ ಆರಿಸಿ ತಂದದ್ದು ಅತ್ಯಂತ ಅಭಿನಂದನೀಯ ಸಂಗತಿಯಾಗಿದೆ. ಕಾಂಗ್ರೆಸ್ಸಿನ ಮೇಲಿದ್ದ ಜನತೆಯ ಪ್ರೇಮವನ್ನು ನೋಡಿದರೆ ಕಾಂಗ್ರೆಸ್ಸಿನ ಸ್ವಾತಂತ್ರ್ಯ ಸಮರದಲ್ಲಿ ಹೋರಾಡಲು ಜನಸಾಮಾನ್ಯರೆಲ್ಲ ಸಿದ್ಧರಿರುವರೆಂಬುದು ಸ್ಪಷ್ಟವಾಗುವದು. ಈ ಪರಿಸ್ಥಿತಿಯಲ್ಲಿ ಬ್ರಿಟಿಶ ಸರಕಾರದವರು ಭಾರತೀಯರಿಗೆ ಅಧಿಕಾರವನ್ನು ಬಿಟ್ಟುಗೊಟ್ಟು ಸ್ವಸ್ಥಾನಕ್ಕೆ ತೆರಳುವದು ಹಿತಕರವಾಗಿದೆ. ಇನ್ನು ಮುಂದೆ ಹಿಂದುಸ್ತಾನದಲ್ಲಿ ಒಡಕು ಹುಟ್ಟಿಸಿ ಆಳುವ ತಮ್ಮ ಧೋರಣವು ಯಶಸ್ವಿಯಾಗದೆಂಬುದನ್ನು ಅವರು ಮನದಟ್ಟು ಮಾಡಿಕೊಳ್ಳಬೇಕು. ಕಾಂಗ್ರೆಸ ಹರಿಜನರೆಲ್ಲ ಆರಿಸಿ ಬಂದದ್ದರಿಂದ ಡಾ. ಅಂಬೇಡಕರರೂ ತಮ್ಮ ಧೋರಣದ ಬಗ್ಗೆ ಪುನರ್ವಿಚಾರಣೆ ಮಾಡಲು ಅವಕಾಶವುಂಟಾಗಿದೆ. ಪರಕೀಯರ ದಾಸ್ಯದಿಂದ ದೇಶವು ಮುಕ್ತವಾಗಬೇಕಾದರೆ ಭಾರತೀಯರೆಲ್ಲ ಒಂದುಗೂಡಿ ಕಾರ್ಯಪ್ರವೃತ್ತರಾಗುವದವಶ್ಯವೆಂದು ಬೇರೆ ಹೇಳಬೇಕಿಲ್ಲ. ಹಾಗಾದರೆ ಪರಕೀಯರು ಇಲ್ಲಿಂದ ಗುಡಚಾಪೆ ಕಟ್ಟುವರೆಂಬುದು ಈ ಚುನಾವಣೆ ಪರಿಣಾಮಗಳಿಂದಲೂ ಸ್ಪಷ್ಟವಾಗುವದು.

ಸಂಪಾದಕೀಯ

ಟೀಕೆ-ಟಿಪ್ಪಣಿಗಳು

ಯುಕ್ತಪ್ರಾಂತ--ಬಿಹಾರಗಳಲ್ಲಿ

ಸಂಯುಕ್ತಪ್ರಾಂತ ಬಿಹಾರಗಳಲ್ಲಿಯೂ ಚುನಾವಣೆಗಳು ಮುಗಿದು ಕಾಂಗ್ರೆಸ್ಸಿಗೆ ಪ್ರಚಂಡ ಬಹುಮತ ದೊರಕಿದೆ. ಸಂಯುಕ್ತ ಪ್ರಾಂತದಲ್ಲಿ ಒಟ್ಟಿಗಿರುವ ೨೨೮ ಸ್ಥಳಗಳಲ್ಲಿ ಕಾಂಗ್ರೆಸ್ಸು ಈಗಾಗಲೆ ೧೫೮ ಸ್ಥಳಗಳನ್ನು ಪಡೆದಿದ್ದು ಇನ್ನು ಹಲವು ಕೂಲಿಕಾರ ಸ್ಥಳಗಳ ಚುನಾವಣೆ ಪರಿಣಾಮ ಹೊರಬೀಳಲಿವೆ. ಕಾಂಗ್ರೆಸ್ಸು ಎಲ್ಲ ಸಾಮಾನ್ಯ ಮತ್ತು ಹರಿಜನ ಸ್ಥಳಗಳನ್ನು ಪಡೆದಿದೆಯಲ್ಲದೆ ಮುಸ್ಲಿಂ ಸ್ಥಳಗಳಲ್ಲಿ ಮೂರು ಸ್ಥಳಗಳನ್ನು ಪಡೆದಿದೆ. ಅಲ್ಲದೆ ೭ ರಾಷ್ಟ್ರೀಯ ಮುಸಲ್ಮಾನರು ಒಬ್ಬ ಅಹರರ ಮತ್ತು ಒಬ್ಬ ಸ್ವತಂತ್ರ ಮುಸಲ್ಮಾನ ಹೀಗೆ ೯ ಜನ ಕಾಂಗ್ರೆಸ್ಸಿಗೆ ಅನುಕೂಲರಿರುವರು. ಹರಿಜನ ಸ್ಥಳಗಳನ್ನೂ ಕಾಂಗ್ರೆಸ್ಸು ಪಡೆದಿದೆ. ಒಟ್ಟಿಗಿರುವ ೬೬ ಮುಸಲ್ಮಾನ ಸ್ಥಳಗಳಲ್ಲಿ ಮುಸ್ಲಿಂಲೀಗು ೫೪ ಸ್ಥಳಗಳನ್ನು ಪಡೆದಿದೆ. ಕಾಂಗ್ರೆಸ ಮತ್ತು ಮುಸ್ಲಿಂಲೀಗ ಇವೆರಡು ಪಕ್ಷಗಳನ್ನು ಬಿಟ್ಟರೆ ಶಾಸನ ಸಭೆಯಲ್ಲಿ ಬೇರೆ ಯಾವ ಪಕ್ಷಕ್ಕೂ ಅವಕಾಶವಿಲ್ಲದಂತಾಗಿದ. ಮುಸ್ಲಿಂಲೀಗು ೫೪ ಸ್ಥಳಗಳನ್ನು ಪಡೆದಿದ್ದರೂ ಲೀಗಕ್ಕೆ ದೊರೆತ ಮತಗಳು ೪೯೫೩೭೪ ಇದ್ದು ಲೀಗೇತರರಿಗೆ ೩೦೯೦೪೯ ಮತಗಳು ಅಂದರೆ ನೂರಕ್ಕೆ ೪೦ ರಷ್ಟು ಮತಗಳು ದೊರೆತಿವೆ. ಯುಕ್ತಪ್ರಾಂತದಲ್ಲಿ ಮುಸಲ್ಮಾನರ ಜನಸಂಖ್ಯೆ ನೂರಕ್ಕೆ ಕೇವಲ ೧೫.೩ ರಷ್ಟಿದ್ದರೂ ೨೨೮ ಸದಸ್ಯರಿದ್ದ ಶಾಸನ ಸಭೆಯಲ್ಲಿ ಅವರಿಗೆ ೬೬ ಸ್ಥಳಗಳನ್ನು ಕೊಡಲಾಗಿದ. ಮುಸ್ಲಿಂಲೀಗಕ್ಕೆ ಕೇವಲ ೬೦ ರಷ್ಟು ಮತಗಳು ಬಿದ್ದದ್ದರಿಂದ ೧೦೦ಕ್ಕೆ ೪೦ ರಷ್ಟು ಮತದಾರರು ಪಾಕಿಸ್ತಾನ ವಿರೋಧಿಗಳಿರುವರೆಂಬುದು ಸ್ಪಷ್ಟವಾಗುವದು. ಬಿಹಾರದಲ್ಲಿ ಮುಸಲ್ಮಾನರ ಜನಸಂಖ್ಯೆ ನೂರಕ್ಕೆ ೧೨.೯೮ ರಷ್ಟಿದ್ದರೂ ೧೫೨ ಸದಸ್ಯರಿದ್ದ ಶಾಸನ ಸಭೆಯಲ್ಲಿ ಅವರಿಗೆ ೪೦ ಸ್ಥಳಗಳು ಅಂದರೆ ನೂರಕ್ಕೆ ೨೬.೩ ರಷ್ಟು ಸ್ಥಳ ಕೊಡಲಾಗಿದೆ. ಬಿಹಾರದಲ್ಲಿ ಕಾಂಗ್ರೆಸ್ಸು ೧೦೩ ಸ್ಥಳಗಳನ್ನು ಪಡೆದಿದ್ದು ಮುಸ್ಲಿಂಲೀಗು ೩೪ ಸ್ಥಳಗಳನ್ನು ಪಡೆದಿದೆ ಲೀಗೇತರರು ಆರು ಸ್ಥಳಗಳನ್ನು ಪಡೆದಿದ್ದಾರೆ. ಕಾಂಗ್ರೆಸ್ಸಿನ ಡಾ. ಸಯ್ಯದ ಮಹಮ್ಮೂದರು ಪ್ರಚಂಡ ಬಹುಮತ ಪಡೆದು ಲೀಗ ಸದಸ್ಯರನ್ನು ರುಳಿಸಿರುವರು. ಇಲ್ಲಿ ಲೀಗಕ್ಕೆ ಅಸಮಾಧಾನವಾಗಿದೆ. ಯುಕ್ತಪ್ರಾಂತ ಬಿಹಾರಗಳೆರಡರಲ್ಲಿಯೂ ಎಲ್ಲ ಸ್ಥಳಗಳನ್ನು ಪಡೆಯುವ ಮಹತ್ವಾಕಾಂಕ್ಷೆಯಿಂದ ಮುಸ್ಲಿಂಲೀಗು ಚುನಾವಣೆಕಣಕ್ಕಿಳಿದಿದ್ದರೂ ಈ ರೀತಿ ಸ್ಥಳಗಳು ತಮ್ಮ ಕೈಬಿಟ್ಟದ್ದರಿಂದ ಅಸಮಾಧಾನಗೊಂಡಿದ್ದು ಸ್ವಾಭಾವಿಕ. ಚುನಾವಣೆಗಳ ಪರಿಣಾಮ ಕಾಂಗ್ರೆಸ್ಸಿಗೆ ಇಂತು ಅನುಕೂಲವಾಗಿದ್ದರೂ ಮಂತ್ರಿಮಂಡಳದಲ್ಲಿ ಲೀಗ ಸದಸ್ಯರನ್ನೂ ಸೇರಿಸಿಕೊಳ್ಳಬೇಕೆಂದು ಕಾಂಗ್ರೆಸ್ಸು ಅಪೇಕ್ಷಿಸಿದೆ. ಮೇಲೆ ಹೇಳಿದಂತೆ ಲೀಗಿನವರು ತಮ್ಮ ಧೋರಣೆಯನ್ನು ಬದಲಿಸಿ ಕಾಂಗ್ರೆಸ್ಸಿನ ಗೂಡ ಮಂತ್ರಿಮಂಡಳದಲ್ಲಿ ಸೇರಿ ಕಾರ್ಯಮಾಡುವದು ಅತ್ಯವಶ್ಯವೆಂದು ಬೇರೆ ಹೇಳಬೇಕಿಲ್ಲ.

ಶಿಕ್ಷಕರ ಸಂಪು

ಜೀವನಕ್ಕೆ ಸಾಕಷ್ಟು ವೇತನ ದೊರೆಯದ್ದರಿಂದ ಮುಂಬಯಿ ಪ್ರಾಂತದಲ್ಲಿಯ ಪ್ರಾಥಮಿಕ ಶಿಕ್ಷಕರು ಸಂಪು ಹೂಡಿದ್ದು ಸರ್ವಶ್ರುತ. ಶಿಕ್ಷಕರ ಸಂಬಳದ ಪ್ರಶ್ನೆಯೇನು ಹೊಸದಲ್ಲ. ಅನೇಕ ವರುಷಗಳಿಂದ ಅವರು ತಮ್ಮ ಸಂಬಳ ಹೆಚ್ಚಿಸಬೇಕೆಂದು ಕೇಳಿಕೊಳ್ಳುತ್ತಿರುವರು. ಸರಕಾರದವರು ಹಲವಾರು ಸಮಿತಿಗಳನ್ನು ನೇಮಿಸಿ ಶಿಕ್ಷಕರ ಸಂಬಳ ಪ್ರಶ್ನೆಯನ್ನು ವಿಚಾರಿಸಿದರೂ ಬರಿ ವರದಿಗಳೆ ಹೊರಬಿದ್ದಿರುವವಲ್ಲದೆ ಶಿಕ್ಷಕರ ಆರ್ಥಿಕ ಪರಿಸ್ಥಿತಿಯೇನು ಸುಧಾರಿಸಿಲ್ಲ. ಅಂತೆಯೆ ಶಿಕ್ಷಕರು ಸಂಪು ಹೂಡುವಂಥ ಪರಿಸ್ಥಿತಿ ಪ್ರಾಪ್ತವಾಯಿತು. ಸರಕಾರದವರು ಆದಷ್ಟು ಬೇಗ ಶಿಕ್ಷಕರ ಈ ಸಂಪಿನ ಸಂಬಂಧದಲ್ಲಿ ವಿಚಾರಮಾಡಿ ಬಗೆಹರಿಸುವದು ಕ್ರಮಪ್ರಾಪ್ತವಾಗಿದೆ. ಹೊಸದಾಗಿ ಸ್ಥಾಪಿತವಾಗಲಿರುವ ಪ್ರಾತಿನಿಧಿಕ ಸರಕಾರವೆ ಆ ಪ್ರಶ್ನೆಯನ್ನು ಬಿಡಿಸಲೆಂದು ಹೊಣೆ ಹಾರಿಸಿಕೊಳ್ಳುವುದು ಯಾವ ರೀತಿಯಿಂದಲೂ ನ್ಯಾಯ್ಯವಲ್ಲ. ಸದ್ಯದ ಸರಕಾರವೇ ಪೋಲೀಸ ಮೊದಲಾದವರ ಸಂಬಳವನ್ನೇರಿಸಲಿಲ್ಲವೆ ? ಬಡ ಶಿಕ್ಷಕರ ಸಂಬಳ ಪ್ರಶ್ನೆಯನ್ನಷ್ಟೇ ಅವರೇಕೆ ಮುಂದೆ ಹಾಕಬೇಕು? ಶಿಕ್ಷಕರ ಈ ಸಂಪು ಅಕಾಲಿಕವಾಗಿದೆಂದು ಮಾನ್ಯ ಮುರಾರಜಿ ದೇಸಾಯರು ಅಭಿಪ್ರಾಯ ವ್ಯಕ್ತಮಾಡಿದ್ದರಿಂದ ಶಿಕ್ಷಕರು ಮತ್ತಷ್ಟು ಗಾಬರಿಗೊಳ್ಳುವದು ಸ್ವಾಭಾವಿಕ. ಈ ಸಂದರ್ಭದಲ್ಲಿ ಮುರಾರಜಿಯವರು ಮುಂದೆ ಮಾಡಿದ ಕಾರಣಗಳು ಯಾರಿಗೂ ಸಮಂಜಸವೆನಿಸವು. ನೆನೆಗುದಿಗೆ ಬಿದ್ದ ಸಂಬಳದ ಪ್ರಶ್ನೆ ಬಿಡಿಸಲು-ಶಿಕ್ಷಕರು ಸಂಪು ಹೂಡಿದರೆ ಅದೆಂತು ಅಕಾಲಿಕ ಮತ್ತು ಅನಾಚಿತವಾಗುವದೋ ತಿಳಿಯದು. ದೇಶದ ಮುಂದೆ ಅನೇಕ ಮಹತ್ವದ ಪ್ರಶ್ನೆಗಳಿರುವುದೇನೋ ನಿಜ ಆದರೆ ಶಿಕ್ಷಕರ ಹೊಟ್ಟೆಯ ಪ್ರಶ್ನೆಯೂ ಅಷ್ಟೇ ಮಹತ್ವದ್ದಲ್ಲವೆ ? ಹಸಿವೆಯನ್ನು ತಡೆಯಿರೆಂದು ಉಪದೇಶಿಸುವದು ಯಾರಿಗೂ ಸಮಂಜಸವೆನಿಸಲಾರದು. ಹಸಿವೆಯು ಕಾಲಾಕಾಲವನ್ನರಿಯದೆಂಬುದು ನಿರ್ವಿವಾದ. ಶಿಕ್ಷಕರಿಗೆ ಜೀವನವೇತನವನ್ನಾದರೂ ಕೊಟ್ಟು ಅವರಿಂದ ಶಿಕ್ಷಣದಂಥ ಪವಿತ್ರ ಕಾರ್ಯಮಾಡಿಸುವದು ಸರಕಾರದ ಕರ್ತವ್ಯವಾಗಿದೆ. ಈ ಪರಿಸ್ಥಿತಿಯಲ್ಲಿ ಸದ್ಯದ ಸರಕಾರವು ಭಾವೀ ಸರಕಾರದ ಮೇಲೆಯೆ ಹೊಣೆಹಾಕ ಸಮಾಧಾನ ಹೊಂದದೆ ಕೂಡಲೆ ಶಿಕ್ಷಕರ ಸಂಬಳವನ್ನು ಹೆಚ್ಚಿಸಿ ಸಂಪನ್ನು ಕೊನೆಗೊಳಿಸಬೇಕು. ಯಾವದೇ ಕಾರಣದಿಂದ ಸದ್ಯದ ಸರಕಾರ ತನ್ನ ಹೊಣೆಯನ್ನು ನಿರ್ವಹಿಸದಿದ್ದರೆ ಬರಲಿರುವ ಪ್ರಜಾಪ್ರತಿನಿಧಿಕ ಸರಕಾರವಾದರೂ ಶಿಕ್ಷಕರ ಸಂಬಳ ಪ್ರಶ್ನೆಯನ್ನು ಕೈಕೊಂಡು ಅವರಿಗೆ ಪರಿಹಾರ ಕೊಟ್ಟು ಶಿಕ್ಷಣ ಕಾರ್ಯ ಹಿಂದಿನಂತೆ ತಡೆಯಿಲ್ಲದೆ ನಡೆಯುವಂತೆ ಮಾಡಬೇಕೆಂದು ಆಗ್ರಹಪಡಿಸುತ್ತೇವೆ.

ಸಿಂಧ ಮಂತ್ರಿಮಂಡಲ

ಸಿಂಧ ಶಾಸನ ಸಭೆಯಲ್ಲಿ ಸಮ್ಮಿಶ್ರ ಪಕ್ಷದ ಬಹುಮತವಿದ್ದರೂ ಗವರ್ನರ ಮುಡಿ ಸಾಹೇಬರು ಮಂತ್ರಿಮಂಡಳ ರಚಿಸಲು ಆ ಪಕ್ಷದ ಧುರೀಣರನ್ನು ಆಮಂತ್ರಿಸದೆ ಲೀಗಿನ ಮಂತ್ರಿಮಂಡಳ ರಚನೆಗೆ ಮನ್ನಣೆ ಕೊಟ್ಟರು. ಅವರ ಬೆಂಬಲದಿಂದ ಸ್ಥಾಪಿತವಾದ ಸಿಂಧಮಂತ್ರಿಮಂಡಳವೀಗ ಯುರೋಪಿಯನ್‌ರ ಬೆಂಬಲದಿಂದಲೆ ಅಧಿಕಾರ ನಡೆಸುತಿದೆ. ಆದರೆ ಮುಂಗಡ ಪತ್ರಿಕೆಯ ಚರ್ಚೆಯ ಕಾಲಕ್ಕೆ ಅಡವಿ ಖಾತೆಯ ಬೇಡಿಕೆಗೆ ಲೀಗಿನ ಮೀರ ಬುಂದೇಲಿಯವರು ವಿರುದ್ಧ ಮತ ಕೊಟ್ಟದ್ದರಿಂದ ಅದು ಬಿದ್ದುಹೋಗಿ ಸರಕಾರಕ್ಕೆ ಮಹತ್ವದ ಸೋಲುಂಟಾಯಿತು. ಇಂಥ ಸಮಯದಲ್ಲಿ ಹೊಸ ಬೇಡಿಕೆಗಳನ್ನು ಮಂಡಿಸಲು ಧೈರ್ಯ ಸಾಲದ ಮುಖ್ಯಮಂತ್ರಿಗಳು ಶಾಸನ ಸಭೆಯನ್ನ ಮುಂದರಿಸಬೇಕೆಂದು ಅಧ್ಯಕ್ಷರಿಗೆ ಬಿನ್ನವಿಸಿಕೊಂಡರು, ಅಂದಾಜಪತ್ರಿಕೆಯ ಚರ್ಚೆಯನ್ನೆ ನಡಿಸಲು ಸರಕಾರ ಪಕ್ಷದವರು ಮುಂದೆ ಬರಲಿಲ್ಲಾದ್ದರಿಂದ ಶಾಸನಸಭೆಯಲ್ಲಿ ಚರ್ಚೆಯ ವಿಷಯಗಳೆ ಉಳಿಯಲಿಲ್ಲ. ಅಧ್ಯಕ್ಷರು ಅನಿಯಮಿತ ಅವಧಿವರೆಗೆ ಅದನ್ನು ಮುಂದರಿಸಿದರು. ನಿಜವಾಗಿ ವಿಚಾರ ಮಾಡಿದರೆ ಮುಖ್ಯ ಮಂತ್ರಿಗಳು ಬೇಡಿಕೆ ನಿರಾಕರಣವನ್ನು ಅವಿಶ್ವಾಸ ಪ್ರದರ್ಶನವೆಂದೇ ತಿಳಿದುಕೊಂಡು ಮಂತ್ರಿಮಂಡಳಕ್ಕೆ ರಾಜೀನಾಮೆ ಕೊಟ್ಟು ಸಮ್ಮಿಶ್ರ ಪಕ್ಷಕ್ಕೆ ಮಂತ್ರಿಮಂಡಳ ರಚಿಸಲು ಅವಕಾಶ ಕಲ್ಪಿಸಿ ಕೊಡಬೇಕಿತ್ತು. ಗವರ್ನರರಾದರೂ ಸರ್ ಗುಲಾಮ ಹುಸೇನರಿಗೆ ಹಾಗೆ ಒತ್ತಾಯ ಪಡಿಸಬೇಕಾಗಿತ್ತು. ಆದರೆ ಸರ್ ಗುಲಾಮ ಹುಸೇನ ಇಲ್ಲವೆ ಸರ್ ಮೂಡಿಯವರು ಈ ನ್ಯಾಯ್ಯ ಮಾರ್ಗವನ್ನು ಅವಲಂಬಿಸದೆ ವಿರುದ್ಧ ಮತ ಕೊಟ್ಟು ಪಕ್ಷ ಬಿಟ್ಟುಹೋದ ಮೀರ ಬುಂದೇಲಿಯವರಿಗೇ ಮತ್ತೊಬ್ಬ ಮಂತ್ರಿಯನ್ನಾಗಿ ಮಾಡಿಕೊಂಡರು! ಇದನ್ನು ನೋಡಿದರೆ ಸರಕಾರದವರೆ ಲಂಚಗುಳಿತನಕ್ಕೆಯೆಂತು ಅವಕಾಶ ಕೊಡಹತ್ತಿರುವರೆಂಬುದು ಸ್ಪಷ್ಟವಾಗುವದು. ಹೀಗೆ ಹೊಸ ಮಂತ್ರಿಯನ್ನು ಮಾಡಿಕೊಂಡ ಕೂಡಲೆ ಬೇಡಿಕೆ ನಿರಾಕೃತವಾದ್ದರಿಂದುಂಟಾದ ಘಟನಾತ್ಮಕ ತೊಡಕು ಬಗೆಹರಿದಂತಾಗಲಿಲ್ಲ. ಸರ್ ಗುಲಾಮರು ರಾಜೀನಾಮೆ ಕೊಟ್ಟು ತಮಗೆ ಬಹುಮತದ ಬೆಂಬಲವಿದೆಂಬದನ್ನು ಸಿದ್ಧಮಾಡಿಕೊಟ್ಟು ಮತ್ತೆ ಹೊಸ ಮಂತ್ರಿಮಂಡಳ ರಚಿಸಬೇಕಿತ್ತು. ಹಾಗೆ ಮಾಡದೆ ವಿರೋಧಿಯನ್ನೆ ಒಡೆಕೊಂಡು ಅವರಿಗೆ ಮಂತ್ರಿಪದ ಕೊಟ್ಟದ್ದು ಅಕ್ರಮವೆಂದೇ ಹೇಳಬೇಕಾಗುವದು. ಹೀಗೆ ವಿರುದ್ಧ ಮತಕೊಡುವವರಿಗೆಲ್ಲ ಮಂತ್ರಿಪದ ಕೊಡುತ್ತ ಹೋದರೆ ಸಿಂಧದಲ್ಲಿ ಲೀಗಪಕ್ಷದವರನ್ನೆಲ್ಲ ಮಂತ್ರಿಗಳನ್ನಾಗಿ ಮಾಡುವ ಅನವಸ್ಥೆ ಪ್ರಾಪ್ತವಾಗಬಹುದು. ಅದೇನೇ ಇದ್ದರೂ ಗವರ್ನರಸಾಹೇಬರ ಮತ್ತು ಸರ್ ಗುಲಾಮಹುಸೇನ ಮಂತ್ರಿಮಂಡಳದ ಅಕ್ರಮಗಳಿಗೆ ತಡೆ ಹಾಕುವದು ಅತ್ಯವಶ್ಯವೆಂದು ಬೇರೆ ಹೇಳಬೇಕಿಲ್ಲ.

ಬರಗಾಲ ಪರಿಹಾರ

ವಿಜಾಪುರ, ಬೆಳಗಾವಿ, ಧಾರವಾಡ ಜಿಲ್ಹೆಗಳಲ್ಲಿಯ ಬರಗಾಲ ಪ್ರದೇಶದಲ್ಲಿ ಪರಿಹಾರ ಕಾರ್ಯವನ್ನು ಸರಕಾರದವರು ಪ್ರಾರಂಭಿಸಿದ್ದಾರೆ. ಈ ಸಲ ಬರಿ ಅನ್ನ ಧಾನ್ಯಗಳ ಕೊರತೆ ಮಾತ್ರ ಆಗಿರದೆ ನೀರಿನ ಅರಬೂ ಇದೆ. ಧಾನ್ಯದ ಕೊರತೆಯಿದ್ದ ಬಳಿಕ ಮೇವಿನ ಕೊರತೆಯೂ ಇದೆಂಬುದನ್ನು ಬೇರೆ ಹೇಳಬೇಕಿಲ್ಲ. ಹೀಗಾಗಿ ಜನರಿಗಷ್ಟೆ ಅಲ್ಲವೆ ದನಕರುಗಳಿಗೂ ಅನ್ನ ನೀರಿನ ಅಭಾವ ಬಹಳ ಕಡೆಗೆ ಉಂಟಾಗಿದೆ. ಸರಕಾರದವರು ಮೊದಲೆ ದಕ್ಷತೆಯಿಂದ ಕಾಳುಗಳನ್ನು ಸಂಗ್ರಹಿಸಿಟ್ಟಿದ್ದರೆ ಇಷ್ಟೊಂದು ತೊಂದರೆಯಾಗುತಿರಲಿಲ್ಲ. ಅನ್ನದ ಆಲಯದಂತಿದ್ದ ಹಿಂದುಸ್ತಾನವಿಂದು ಆಹಾರ ಪದಾರ್ಥಗಳಿಗಾಗಿ ಎರಡನೆಯವರನ್ನು ಅಂಡಲೆಯಬೇಕಾಗಿದೆ. ಈ ಬರಗಾಲ ಪರಿಹಾರ ಕಾರ್ಯ ನಡೆಸುವಾಗಲೂ ಸರಕಾರದವರು ಸ್ವಲ್ಪ ಜಾಣತನವನ್ನುಪಯೋಗಿಸಿ ಮುಂದೆ ಬರಬೀಳದಂತಹ ಶಾಶ್ವತ ಯೋಜನೆಗಳನ್ನು ಕೈಕೊಂಡದ್ದಾದರೆ ಹೆಚ್ಚು ಉಪಯುಕ್ತವಾಗುವದು. ನಿರುಪಯುಕ್ತವೆಂದು ಅನೇಕ ತಜ್ಞರು ಅಭಿಪ್ರಾಯಪಡುತಿರುವ ಅಂಕಡೊಂಕಾದ ಒಡ್ಡಿನ ಯೋಜನೆಗಳಲ್ಲಿಯ ಹೆಚ್ಚು ಹಣ ಹಾಳು ಮಾಡಿ ಬರಗಾಲ ಪರಿಹಾರಕ್ಕಾಗಿ ಲಕ್ಷಗಟ್ಟಲೆ ರೂಪಾಯಿಗಳು ವೆಚ್ಚವಾದವೆಂದು ಹೇಳುವುದಕ್ಕಿಂತ ಶಾಶ್ವತ ಯೋಜನೆಗಳಲ್ಲಿ ಹೆಚ್ಚು ಹಣ ವೆಚ್ಚ ಮಾಡುವದು ಉಚಿತ. ನೀರಿನ ಅರಬು ಇದ್ದಲ್ಲಿ ಮೋಟರಗಳಲ್ಲಿ ಬಂಡಿಗಳಲ್ಲಿ ನೀರು ಹೇರಿಕೊಂಡು ಬಂದು ಜನರಿಗೆ ಪೂರಯಿಸುವ ಯೋಜನೆಯನ್ನು ಕೈಕೊಳ್ಳಲಾಗಿದೆ. ಇದಕ್ಕಾಗಿಯೂ ಸಾವಿರಗಟ್ಟಲೆ ರೂಪಾಯಿಗಳನ್ನು ವೆಚ್ಚ ಮಾಡಲಾಗುತ್ತದೆ. ಕುಡಿಯುವ ನೀರಿನ ಅಭಾವವಿದ್ದಲ್ಲೆಲ್ಲ ಈ ರೀತಿ ನೀರು ಪೂರೈಸುವದು ಅವಶ್ಯವಾಗಿದ್ದರೂ ಮೇಲಿಂದಮೇಲೆ ನೀರಿನ ಕೊರತೆಗೊಳಗಾಗುವ ಪ್ರದೇಶಗಳಲ್ಲಿ ನೀರು ಪೂರೈಕೆಯ ಶಾಶ್ವತ ಯೋಜನೆಯನ್ನು ಮಾಡುವದು ಅಗತ್ಯದ ಸಂಗತಿಯಾಗಿದೆ. ವಿಶೇಷತಃ ವಿಜಾಪುರ ಜಿಲ್ಹೆಯಲ್ಲಂತೂ ನೀರಿಗಾಗಿ ನಾಲ್ಕಾರು ಮೈಲು ಹೋಗಬೇಕಾದ ಹಳ್ಳಿಗಳು ಅನೇಕ ಇರುವವು. ಅಂಥಲ್ಲೆಲ್ಲ ಬೇರೆ ಬಾವಿಗಳನ್ನು ಇಲ್ಲವೆ ಕೆರೆಗಳನ್ನು ಕಡಿಸುವದು ಅತ್ಯವಶ್ಯ. ಒಟ್ಟಾರೆ ಸರಕಾರದವರು ಕೇವಲ ತಾತ್ಪೂರ್ತಿಕ ಯೋಜನೆಗಳಲ್ಲಿಯೇ ಲಕ್ಷಗಟ್ಲೆ ರೂಪಾಯಿಗಳನ್ನು ವೆಚ್ಚ ಮಾಡದೆ ಮೇಲಿಂದಮೇಲೆ ಬರಗಾಲಕ್ಕೆ ಬಲಿಯಾಗುತಿರುವ ಪ್ರದೇಶಗಳಲ್ಲಿ ಶಾಶ್ವತ ಪರಿಹಾರದ ಯೋಜನೆ ಕೈಕೊಳ್ಳುವುದು ಕರ್ತವ್ಯವಾಗಿದೆ. ಸರಕಾರದವರು ಇತ್ತ ಗಮನಿಸುವರೇ?

ಅಂಚೇ ಕಾರ್ಡಿನ ಬೆಲೆ ಅರ್ಧಾಣೆ, ಅಡಿಕೆ, ಕಲ್ಲೆಣ್ಣೆ, ಕಡ್ಡಿಪೆಟ್ಟಿಗೆಗಳ ಮೇಲಿನ ಸುಂಕ ಕಡಿಮೆಯಾಯಿತು; ಕೇಂದ್ರ ಶಾಸನ ಸಭೆಯಲ್ಲಿ ಹಣಕಾಸಿನ ಮಸೂದೆ ಸ್ವೀಕೃತ; ಸರಕಾರಕ್ಕೆ ಮುಸ್ಲಿಂ ಲೀಗಿನ ಬೆಂಬಲ.

ಕೇಂದ್ರ ಶಾಸನ ಸಭೆಯಲ್ಲಿ ಅರ್ಥಸಚಿವರಾದ ಸರ್ ಆರ್ಚಿಬಾಲ್ಡ್ ರೋಲಂಡ್ಸರವರು ಹಣಕಾಸಿನ ಮಸೂದೆಯನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂಬ ಸೂಚನೆಯನ್ನು ೨೬ನೇ ತಾ. ಮಂಡಿಸಿದರು. ಮುಸ್ಲಿಂ ಲೀಗಿನವರು ಹಿಂದಿನ ಪರಂಪರೆಯನ್ನು ಬಿಟ್ಟುಗೊಟ್ಟು ಈ ಸಲ ಸರಕಾರಕ್ಕೆ ಅನುಕೂಲ ಮತ ಕೊಟ್ಟದ್ದರಿಂದ ಅರ್ಥಸಚಿವರ ಮಸೂದೆ ೬೭ ವಿರುದ್ಧ ೫೯ ಮತಗಳಿಂದ ಸ್ವೀಕೃತವಾಯಿತು. ೨೮ ನೇ ತಾರೀಕು ಅದರ ಮೂರನೇ ವಾಚನವೂ ಕೆಲ ತಿದ್ದುಪಡಿಗಳೊಂದಿಗೆ ಸ್ವೀಕೃತವಾಯಿತು.

ಲಾಹೋರಿನಲ್ಲಿ ಬ್ಯಾ. ಜಿನ್ನಾರವರು ಆಯುಶಸ್ವಿಯಾದ್ದರಿಂದ ಕೇಂದ್ರ ಶಾಸನ ಸಭೆಯ ಚರ್ಚೆಯಲ್ಲಿ ತಮ್ಮ ಕೈವಾಡ ನಡೆಸಬೇಕೆಂದು ದಿಲ್ಲಿಗೆ ಬಂದರು. ಕಾಂಗ್ರೆಸ್ಸಿನವರು ಹಾರಿಸಿ ಬಿಡಬೇಕೆಂದು ಮಾಡಿದ್ದ ಹಣಕಾಸಿನ ಮಸೂದೆಗೆ ತಮ್ಮ ವರದಹಸ್ತವನ್ನಿತ್ತು ಬದುಕಿಸಿಕೊಂಡರು. ಕಾಂಗ್ರೆಸ್ಸಿನ ಮೇಲೆ ಸೇಡು ತೀರಿಸಿಕೊಳ್ಳಲು ಅವರು ಹೀಗೆ ಮಾಡಿದರೊ ಏನೋ ತಿಳಿಯದು. ಅಂತೂ ಹಿಂದಿನ ರೂಢಿಯನ್ನು ನಿರಾಕರರಿಸಿ ಮಸೂದೆಗೆ ಬೆಂಬಲ ಕೊಟ್ಟರು.

ಕಾಂಗ್ರೆಸಮತ್ತು ಮುಸ್ಲಿಂಲೀಗಗಳು ಕೂಡಿ ೧೯೩೫ ರಿಂದ ೧೯೩೯ ರ ವರೆಗೆ ಪ್ರತಿಸಲ ಮುಂಗಡ ಪತ್ರಿಕೆಯನ್ನು ಹಾರಿಸಿ ಬಿಟ್ಟಿದ್ದವು. ನಂತರ ೧೯೪೪ ರ ವರೆಗೆ ಕಾಂಗ್ರೆಸ್ಸು ಕೇಂದ್ರ ಶಾಸನ ಸಭೆಗೆ ಬಹಿಷ್ಕಾರ ಹಾಕಿದ್ದಿತು. ಮುಂದೆ ೧೯೪೪ ಮತ್ತು ೪೫ ರಲ್ಲಿ ಮತ್ತೆ ಕಾಂಗ್ರೆಸ ಲೀಗಗಳು ಸೇರಿ ಮುಂಗಡ ಪತ್ರಿಕೆಯನ್ನು ಉರುಳಿಸಿದ್ದವು. ಆದರೆ ಈ ಸಲ ಲೀಗ ಪಕ್ಷವು ಸರಕಾರಕ್ಕೆ ಬೆಂಬಲ ಕೊಟ್ಟದ್ದರಿಂದ ಹಣಕಾಸಿನ ಮಸೂದೆ ೬೩ ವಿರುದ್ಧ ೫೨ ರಿಂದ ಸ್ವೀಕೃತವಾಯಿತು.

ಜನತೆಗೆ ಪರಿಹಾರ

ಮುಸ್ಲಿಂ ಲೀಗಿನವರು ತಮಗೆ ಬೆಂಬಲ ಕೊಡುವರೆಂಬುದು ಮೊದಲೇ ಗೊತ್ತಾಗಿದ್ದರಿಂದ ಅರ್ಥಸಚಿವರು ಇಂದು ಒಳ್ಳೆ ಆಢ್ಯತೆಯಿಂದ ಭಾಷಣ ಮಾಡಿದರು. ಕಾಂಗ್ರೆಸ ಸದಸ್ಯರು ಆಯವ್ಯಯ ಪತ್ರಿಕೆಯ ಮೇಲೆ ಮಾಡಿದ ಟೀಕೆಗೆ ಉತ್ತರ ಕೊಡುವಾಗ ಒಳ್ಳೆ ಆತ್ಮವಿಶ್ವಾಸದಿಂದ ಮಾತಾಡುವಂತೆ ನಟಿಸಿದರು. ಮುಸ್ಲಿಂ ಲೀಗಿನವರನ್ನು ಆಗಾಗ ಪ್ರಶಂಸಿಸದೆ ಇರಲಿಲ್ಲ. ಹೀಗಿದ್ದರೂ ಅವರು ಜನತೆಗೆ ಕೆಲವೊಂದು ಪರಿಹಾರ ಕೊಡಲು ಮುಂದೆಬಂದರು. ಒಂದು ಬಗೆಯಿಂದ ಇದು ಅಭಿನಂದನೀಯವೆಂದು ಹೇಳಬಹುದು. ಹಿಂದುಸ್ತಾನ ಸಿರಕಾರದವರು ಕೊಡಬಯಸಿದ ಪರಿಹಾರಗಳು ಇಂತಿವೆ:

೧) ಇದೇ ಜುಲೈ ೧ ನೇ ತಾರೀಕಿನಿಂದ ಪೋಸ್ಟ ಕಾರ್ಡಿನ ದರವನ್ನು ಮೂರು ದುಡ್ಡಿನಿಂದ ೨ ಬಿಲ್ಲಿಗೆ ಇಳಿಸಲಾಗುವದು. ಇದರಿಂದ ಸರಕಾರಕ್ಕೆ ೧೬೭ ಲಕ್ಷ ರೂ. ಹಾನಿಯಿದೆ.

೨) ಕಲ್ಲೆಣ್ಣೆ ಮೇಲಿನ ಕರವನ್ನು ಮುಂಗಡ ಪತ್ರಿಕೆಯಲ್ಲಿ ಸೂಚಿಸಿದಂತೆ ಒಂದು ಗ್ಯಾಲನಿಗೆ ಮೂರು ಬಿಲ್ಲಿಯಂತೆ ಇಳಿಸದೆ ೬ ಬಿಲ್ಲಿಯಂತೆ ಇಳಿಸಲಾಗುವದು. ಇದರಿಂದ ೧೫೧ ಲಕ್ಷ ರೂ. ಹಾನಿಯಿದೆ

೩) ಬೆಂಕಿಪೆಟ್ಟಿಗೆಯ ದರವನ್ನು ಬೇಗನೆ ಅರ್ಧ ಆಣೆಗೆ ಇಳಿಸಲಾಗುವದು. ಇದರಿಂದ ಸುಮಾರು ೧॥ ಕೋಟಿ ರೂ. ಹಾನಿ.

೪) ಒಂದು ಪೌಂಡಿಗೆ ಎರಡಾಣೆಯಿದ್ದ ಅಡಿಕೆಯ ಸುಂಕವನ್ನು ಆರು ಬಿಲ್ಲಿಗಳಿಗೆ ಇಳಿಸಲಾಗುವದು. ಇದರಿಂದ ೫೫ ಲಕ್ಷ ರೂಪಾಯಿ ಹಾನಿಯಿದೆ.

೫) ಅಡಿಕೆಯ ಬೆಳೆ ಮತ್ತು ಮಾರಾಟದ ಪರಿಸ್ಥಿತಿಯನ್ನು ಸುಧಾರಿಸುವದಕ್ಕಾಗಿ ಕೊಡಲು ಮೂರು ಲಕ್ಷ ರೂಪಾಯಿಗಳ ಹಣವನ್ನು ಐದು ಲಕ್ಷ ರೂಪಾಯಿಗಳಿಗೇರಿಸಲಾಗಿದೆ.

೬) ಕಚ್ಚಾ ಫಿಲ್ಮಗಳ ಮೇಲಿನ ೨ ಬಿಲ್ಲಿಯ ಕರವನ್ನು ೧ ಬಿಲ್ಲಿಗೆ ಇಳಿಸಬಾಗುವದು. ಇದರಿಂದ ೨೫ ಲಕ್ಷ ರೂಪಾಯಿಗಳ ಹಾನಿ.

ಈ ರೀತಿ ಕರಭಾರವನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಲಾಗಿದೆ. ಯಾರು ಏನೇ ಅನ್ನಲಿ ನಾನು ಭಾರತವನ್ನು ಬಿಟ್ಟುಹೋಗುವಾಗ ಪೋಸ್ಟ ಕಾರ್ಡಿನ ಬೆಲೆ ಅರ್ಧ ಆಣೆ ಮಾಡಿದ ಶ್ರೇಯಸ್ಸು ಪಡೆಯ ಬಯಸುತ್ತೇನೆ. ಅಡಿಕೆಯ ಮೇಲಿನ ಕರವನ್ನು ಪೂರ್ಣ ಕಿತ್ತುಹಾಕಿರೆಂದು ಕೇಳಿಕೊಳ್ಳಲಾಗಿದೆ. ಆದರೆ ಇದು ಶಕ್ಯವಿಲ್ಲ. ಅಡಿಕೆ ಅಬಕಾರಿ ಕರಕ್ಕೆ ಯೋಗ್ಯವಾದ ವಸ್ತು. ಉಪ್ಪಿನ ಕರವನ್ನು ಕಿತ್ತಿಹಾಕಿದರೆ ದೊರೆಯಬಹುದಾದ ಕೀರ್ತಿಯನ್ನು ಗಮನಿಸಿದರೆ ನಾನು ಪೋಸ್ಟ ಕಾರ್ಡಿನ ಬೆಲೆ ಅರ್ಧಾಣೆಗೆ ಇಳಿಸಿದ್ದು ಅಷ್ಟೇನು ಮಹತ್ವದ್ದಲ್ಲ. ಉಪ್ಪಿನ ಕರವನ್ನು ಕಿತ್ತಿಹಾಕುವದು ಹೊಣೆಗಾರಿಕೆಯ ಕೆಲಸವಾಗಿದೆ. ಈ ಕರದಿಂದ ಪ್ರತಿವರ್ಷ ಸುಮಾರು ೮—೯ ಕೋಟಿ ರೂಪಾಯಿಗಳ ಆದಾಯವಿದೆ. ಅದನ್ನು ಕಿತ್ತಿಹಾಕಿದರೆ ಬರಿ ಗಿರಾಕಿಗಳಿಗೆ ಲಾಭವಾಗದೆ ನಡುವಿನವರೇ ಅದನ್ನು ತಿಂದುಬಿಡಬಹುದು. ದಿನದಿನಕ್ಕೆ ಹೆಚ್ಚಾಗಿ ಬೆಳೆಯುತ್ತಿರುವ ತಂಬಾಕು ಕರಭಾರ ಸಹಿಸಲು ಯೋಗ್ಯ ವಸ್ತುವಾಗಿದೆ.

ಅಧಿಕ ಲಾಭದ ಕರವನ್ನು ಇಂಗ್ಲಂಡು ಕಳೆದ ಯುದ್ಧದ ನಂತರ ಬಹುಕಾಲ ಇಟ್ಟುಕೊಂಡಿದ್ದರಿಂದ ಆ ರಾಷ್ಟ್ರಕ್ಕೆ ೧೦ ಕೋಟಿ ಪೌಂಡು ಹಾನಿಯಾಯಿತು. ಆದುದರಿಂದ ಅವರು ಈ ಸಲ ಆ ಕರವನ್ನು ಕೂಡಲೆ ಕಿತ್ತುಹಾಕಿದ್ದಾರೆ. ದಾಯಭಾಗ ಕರದಿಂದ ೩೦೦ ಕೋಟಿ ರೂಪಾಯಿ ಆದಾಯವಾಗಬಹುದೆಂದು ದಿವಾಣ ಚಮಣಲಾಲರು ಹೇಳಿದ್ದಾರೆ. ಆದರೆ ಕರ ಪ್ರಾರಂಭಿಸಿದ ಕೂಡಲೆ ಕೇವಲ ೧೦ ಕೋಟಿ ರೂಪಾಯಿಗಳ ಆದಾಯವಾಗುವದೆಂದು ಹೇಳಬಯಸುವೆ. ಅನೇಕರು ಕರ ಕೊಡಲು ತಪ್ಪಿಸುತ್ತಾರೆಂಬದು ನಿಜ. ಆದರೆ ಇದರಿಂದ ೭೦೦ ಕೋಟಿ ರೂಪಾಯಿ ಹಾನಿಯಾಗುತ್ತದೆಂದು ಹೇಳುವದು ಅತಿರಂಜಿತ. ಆದಾಯಕರ ಖಾತೆ ಈ ಬಗ್ಗೆ ಯೋಗ್ಯ ಕ್ರಮ ತೆಗೆದುಕೊಳ್ಳಲಿದೆ.

ಇದು ಸಿರಿವಂತರ ಮುಂಗಡಪತ್ರಿಕೆಯಲ್ಲ ಆದರೆ ಜನಸಾಮಾನ್ಯರ ಹಿತವನ್ನೂ ಇದು ನೋಡುತ್ತಿದೆಂದು ಆತ್ಮಸಮರ್ಥನೆ ಮಾಡಿಕೊಳ್ಳಲು ಅರ್ಥಸಚಿವರು ಪ್ರಯತ್ನಿಸಿದರು. ಪ್ರಾಂತಿಕ ಸರಕಾರಗಳಿಗೆ ಕೊಡಲಾಗಿರುವ ೫೦ ಕೋಟಿ ರೂಪಾಯಿಗಳನ್ನೆಲ್ಲ ಇಂಥ ಯೋಜನೆಗಳಿಗಾಗಿಯೇ ಉಪಯೋಗಿಸಲಾಗುವದು. ಪ್ರಾಂತಗಳೂ ಈ ಬಗ್ಗೆ ೩೦ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಿವೆ. ಜನತೆಯ ಹಿತಕ್ಕಾಗಿ ಇಷ್ಟೊಂದು ಹಣ ಒಂದೇ ವರ್ಷದಲ್ಲಿ ವೆಚ್ಚ ಮಾಡುತಿರುವದು ಭಾರತದ ಇತಿಹಾಸದಲ್ಲಿಯೆ ಇದು ಮೊದಲ ಸಲ.

ಸ್ಟರ್ಲಿಂಗ ಹಣದ ಪ್ರಶ್ನೆಯನ್ನು ಬಗೆ ಹರಿಸುವಾಗ ಇಲ್ಲಿ ಬ್ರಿಟಿಶ್‌ರ ಆಸ್ತಿಯನ್ನು ಬಿಟ್ಟುಗೊಡಬಾರದೆಂದು ಕೆಲವರು ಸೂಚಿಸಿದ್ದಾರೆ. ಈ ಸಮಸ್ಯೆ ಬಗೆಹರಿಸುವಾಗ ಯಾವುದನ್ನೂ ಬಿಟ್ಟುಕೊಡಲಾಗುವದಿಲ್ಲ. ಈ ಪ್ರಶ್ನೆ ಕೂಡಲೆ ಬಗೆಹರಿಯಬೇಕು.

ಸರಕಾರವು ಪೋಲೀಸ ರಾಜ್ಯವಾಗಿ ಉಳಿಯದೆ ಸಮಾಜಸೇವೆಯತ್ತ ತನ್ನ ದೃಷ್ಟಿ ಹೊರಳಿಸಿದೆ. ಕಳೆದ ಒಂದು ವರ್ಷದಿಂದ ಈ ಮಾರ್ಗದಲ್ಲಿ ಪ್ರಯತ್ನ ನಡೆದಿದೆಯೆಂದು ಮುಂತಾಗಿ ಅವರು ಹೇಳಿದರು.

ವಿರೋಧಿಸಲಿಲ್ಲೇಕೆ ?

ಮುಸ್ಲಿಂಲೀಗಿನವರು ಹಣಕಾಸಿನ ಮಸೂದೆಯ ಚರ್ಚೆಗೆ ಬೆಂಬಲ ಕೊಟ್ಟದ್ದೇಕೆ ಎಂಬುದನ್ನು ಸಮರ್ಥನೆ ಮಾಡಿಕೊಳ್ಳುತ್ತ ಲೀಗಿನ ನವಾಬಜಾದಾ ಲಿಯಾಕತ ಅಲ್ಲೀಖಾನರು ಈ ರೀತಿ ಹೇಳಿದರು. ಹಣಕಾಸಿನ ಮಸೂದೆಯ ಚರ್ಚೆಯನ್ನೇ ನಿರಾಕರಿಸಿದರೆ ವಾಯಿಸರಾಯರು ವಿಶೇಷಾಧಿಕಾರದಿಂದ ಅದಕ್ಕೆ ಸಂಜೀವಿನಿ ಕೊಡುವುದರಿಂದ ಈಗಿದ್ದ ಸ್ವರೂಪದಲ್ಲಿಯೆ ಅದು ಪಾಸಾದಂತಾಗುವದು. ಹೀಗೆ ಮಾಡದೆ ಕರಭಾರವೇನಾದರೂ ಕಡಿಮೆಯಾಗುವದೊ ಎಂಬುದನ್ನು ನೋಡುವದಕ್ಕಾಗಿ ಅದರ ಚರ್ಚೆಗೆ ಅನುಕೂಲ ಮತಕೊಟ್ಟದ್ದೇವೆ. ಅಖಂಡ ಹಿಂದುಸ್ತಾನದಿಂದ ಸ್ವಾತಂತ್ರ್ಯ ಸಿಕ್ಕಲಾರದು. ಹಿಂದುಸ್ತಾನವನ್ನು ಹಿಂದುಸ್ತಾನ ಮತ್ತು ಪಾಕಿಸ್ತಾನವೆಂದು ವಿಭಾಗಿಸಿದರೆ ಮಾತ್ರ ಅದು ಸಾಧ್ಯವೆಂದು ಮುಸಲ್ಮಾನರು ಮನಗಂಡಿರುವರು. ಅಖಂಡ ಹಿಂದುಸ್ತಾನದಲ್ಲಿ ಜಾತಿಮತ್ಸರ ಮತ್ತು ಬಡತನಗಳೆ ನನಗೆ ಕಾಣುತ್ತವೆ. ವಿಚ್ಛೇದಿತ ಹಿಂದುಸ್ತಾನದಲ್ಲಿ ಒಕ್ಕಟ್ಟು ಮತ್ತು ಅಭಿವೃದ್ಧಿ ಗೋಚರವಾಗುತ್ತವೆಂದು ಮುಂತಾಗಿ ಹೇಳಿದರು.

ಶರಚ್ಚಂದ್ರರ ಪ್ರತ್ಯುತ್ತರ

ಕಾಂಗ್ರೆಸ್ ನಾಯಕರಾದ ಶರಚ್ಚಂದ್ರರು ನವಾಬಜಾದಾರ ಈ ಭಾಷಣವನ್ನು ಟೀಕಿಸುತ್ತ ಹೀಗೆ ಹೇಳಿದರು. ಮುಸಲ್ಮಾನ, ಶೀಖ, ಬೌದ್ಧ ಅಥವಾ ಜೈನ ಇವರಲ್ಲಿ ಯಾರನ್ನೂ ಹಿಂದೆ ಬಿಟ್ಟು ಕಾಂಗ್ರೆಸ್ಸು ಮುಂದೆ ಹೋಗಬೇಕೆಂದು ಬಯಸಿಲ್ಲೆಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಒಕ್ಕಟ್ಟುಂಟು ಮಾಡಲು ಕಾಂಗ್ರೆಸ್ಸು ಈ ಮೊದಲೇ ಅನೇಕ ಭಗೀರಥ ಪ್ರಯತ್ನ ಮಾಡಿರುತ್ತದೆ ಮತ್ತು ಮುಂದಾದರೂ ಮಾಡುವದು. ನಮಗೆ ಬೇಕಾದುದು ಒಂದುಗೂಡಿದ ಹಿಂದುಸ್ತಾನ ಮತ್ತು ಸ್ವತಂತ್ರ ರಾಜ್ಯಘಟನೆ. ಸಮಸ್ತ ಹಿಂದಿಯರಿಗೂ ಇದೇ ಬೇಕಾಗಿದೆಂದು ನಾನು ನಂಬಿದ್ದೇನೆ. ಇದು ಸಾಧ್ಯವಾದಲ್ಲಿ ಲೀಗದೊಡನೆ ನಾವು ಸರ್ವವಿಧದಲ್ಲಿಯೂ ಸಹಕರಿಸುವೆವು (ನವಾಬಜಾದಾರವರು ನಡುವೆ ಬಾಯಿ ಹಾಕಿ ಪಾಕಿಸ್ತಾನ ಹೊರತು ಉಳಿದುದನ್ನೆಲ್ಲ ನಮಗೆ ಕೊಡುವಿರೇನು?) ಎಂದು ಕೇಳಿದರು. ಪೂರ್ಣ ವಿಚಾರ ಮಾಡಿಯೆ ನಾವು ಹಣಕಾಸಿನ ಮಸೂದೆಯನ್ನು ವಿರೋಧಿಸಲು ನಿರ್ಧರಿಸಿದ್ದೇವೆಂದು ಮುಂತಾಗಿ ಶರಚ್ಚಂದ್ರರು ಹೇಳಿ ಮಾತು ಮುಗಿಸಿದರು. ಅನೇಕ ಸದಸ್ಯರು ಹಣಕಾಸಿನ ಮಸೂದೆಯನ್ನು ಟೀಕಿಸಿ ಅರ್ಥಸಚಿವರ ಕರಭಾರವನ್ನು ಖಂಡಿಸಿದರು.

ಮುಂಬಯಿ ಸರಕಾರದ ಮುಂಗಡ ಪತ್ರಿಕೆ

೩೦ ಕೋಟಿ ೨೦ ಲಕ್ಷ ರೂಪಾಯಿ ಉತ್ಪನ್ನ

ಮುಂಬಯಿ-- ಮುಂಬಯಿ ಗವ್ಹರ್ನರನರರಾದ ಸರ್ ಜಾನ್ ಕಾಲವಿಲ್‌ರವರು ತಾ. ೨೭ ಸಾಯಂಕಾಲ ಸುದ್ದಿಗಾರರ ಸಭೆಯಲ್ಲಿ ೧೯೪೬-೪೭ ನೇ ವರ್ಷದ ಮುಂಗಡ ಪತ್ರಿಕೆಯನ್ನು ಮಂಡಿಸಿ, ಇದನ್ನು ಅಥವಾ ಇದರಲ್ಲಿಯ ಕೆಲವು ಅಂಶಗಳನ್ನು ಹೊಸ ಮಂತ್ರಿಮಂಡಲವು ಅಳವಡಿಸಿಕೊಳ್ಳಬಹುದೆಂಬ ಆಶೆ ವ್ಯಕ್ತ ಮಾಡಿದರು.

೧೯೪೬-೪೭ ರಲ್ಲಿ ೩೮ ಕೋಟಿ ೨೦ ಲಕ್ಷ ರೂ. ಉತ್ಪನ್ನವಾಗಬಹುದು. ಅದರಲ್ಲಿ ೨೦ ಕೋಟಿ ೧೫ ಲಕ್ಷ ರೂ. ವೆಚ್ಚವಾಗಿ ೫ ಲಕ್ಷ ರೂ. ಉಳಿತಾಯವಾಗಬಹುದೆಂದು ಅವರು ತಿಳಿಸಿದರು.

ಮುಂಗಡ ಪತ್ರಿಕೆಯ ಮುಖ್ಯಾಂಶಗಳು ಕೆಳಗಿನಂತಿರುತ್ತವೆ;—

೧೯೩೯-೪೦ ರಲ್ಲಿ ೧೩ ಕೋಟಿ ರೂ. ಇದ್ದ ಉತ್ಪನ್ನವು ೧೯೪೫-೪೬ ರಲ್ಲಿ ೩೨॥ ಕೋಟಿಗೆ ಏರಿತ್ತು. ಅದರಂತೆ ವೆಚ್ಚವು ೧೨॥ ಕೋಟಿಯಿಂದ ೨೬ ಕೋಟಿಗೆ ಏರಿರುತ್ತದೆ. ಇದೇ ಅವಧಿಯಲ್ಲಿ ರೋಖ ಶಿಲ್ಕು ೨॥ ಕೋಟಿ ಇದ್ದುದು ೧೮॥ ಕೋಟಿ ಆಗಿರುತ್ತದೆ.

ಅಧಿಕ ಉತ್ಪನ್ನವು ಕೆಳಗಿನ ಬಾಬುಗಳಿಂದ ಬಂದಿರುವದು:—

ಅಬಕಾರಿ ಉತ್ಪನ್ನವು ಈ ಅವಧಿಯಲ್ಲಿ ೨೦೨ ಲಕ್ಷ ರೂ. ಯಿಂದ ೭೮೯ ಲಕ್ಷಕ್ಕೆ ಏರಿರುವದು.

ಮುಂಬಯಿ ಪ್ರಾಂತಕ್ಕೆ ಕೊಡಲಾಗುತ್ತಿರುವ ಉತ್ಪನ್ನ ಕರದ ಪಾಲು ೫೬ ಲಕ್ಷ ಇದ್ದದು ಈಗ ೪೫೪ ಲಕ್ಷಕ್ಕೆ ಮುಟ್ಟಿರುತ್ತದೆ.

ಜೂಜಿನ ಕರ ೧೨ ಲಕ್ಷದಿಂದ ೯೫ ಲಕ್ಷಕ್ಕೆ ಏರಿರುವದು.

ಮನೋರಂಜನ ಕರ ೧೧ ಲಕ್ಷದಿಂದ ೯೦ ಲಕ್ಷಕ್ಕೆ ಮುಟ್ಟಿರುತ್ತದೆ.

ಅರಣ್ಯ ಖಾತೆಯಿಂದ ಮೊದಲು ೧೨ ಲಕ್ಷ ಉತ್ಪನ್ನ ಬರುತಿದ್ದರೆ ಈಗ ೯೭ ಲಕ್ಷ ಬರುವದು.

ವಿದ್ಯುಚ್ಛಕ್ತಿ ಕರದ ಉತ್ಪನ್ನವು ೨೧ ಲಕ್ಷದಿಂದ ೮೧ ಲಕ್ಷಕ್ಕೆ ಏರಿರುವದು.

ವೆಚ್ಚ

ವೆಚ್ಚದ ಬಾಬುಗಳು ಕೆಳಗಿನಂತಿರುತ್ತವೆ :—

ಈ ೬ ವರ್ಷಗಳ ಅವಧಿಯಲ್ಲಿ ಶಿಕ್ಷಣ ವೆಚ್ಚವು ೨೦೦ ಲಕ್ಷದಿಂದ ೨೭೬ ಲಕ್ಷಕ್ಕೂ, ಔಷಧೋಪಚಾರದ ವೆಚ್ಚ ೪೬ ಲಕ್ಷದಿಂದ ೧೦೨ ಲಕ್ಷಕ್ಕೂ ಸಾರ್ವಜನಿಕ ಆರೋಗ್ಯದ ವೆಚ್ಚ ೨೮ ಲಕ್ಷದಿಂದ ೬೦ ಲಕ್ಷಕ್ಕೂ, ಒಕ್ಕಲತನದ ವೆಚ್ಚ ೧೨೦ ರಿಂದ ೧೮೯ ಲಕ್ಷಕ್ಕೂ ಔದ್ಯೋಗಿಕ ಅಭಿವೃದ್ಧಿಯ ವೆಚ್ಚ ೮ರಿಂದ ೨೧ ಲಕ್ಷಕ್ಕೂ ಚಿಕ್ಕ ಪುಟ್ಟ ನೀರಾವರಿಯ ವೆಚ್ಚ ೮ ರಿಂದ ೩೨ ಲಕ್ಷಕ್ಕೂ ಏರಿರುತ್ತವೆ.

ತುಟ್ಟಿಭತ್ತೆಗಾಗಿ ಪ್ರತಿ ವರ್ಷ ೨॥ ಕೋಟಿ ರೂ. ಖರ್ಚಾಗುವದು.

೧೯೪೬--೪೭

೧೯೪೬--೪೭ ನೆಯ ವರ್ಷದಲ್ಲಿ ವೆಚ್ಚದ ಮುಖ್ಯ ಬಾಬುಗಳು ಕೆಳಗಿನಂತಿರುವವು :—

ಮುಂಬೈ ಮತ್ತು ಪುಣೆ ನಗರಗಳಲ್ಲಿ ಮಕ್ಕಳಿಗೆ ಮತ್ತು ಬಸುರಿಯರಿಗೆ ಸೋವಿಯಲ್ಲಿ ಹಾಲು ಪೂರೈಸುವದಕ್ಕೆ ೧೩೦ ಲಕ್ಷ ರೂ.

ವಿಜಾಪೂರ ಹಾಗೂ ಇನ್ನಿತರ ಸ್ಥಳಗಳಲ್ಲಿ ಒಡ್ಡು ಹಾಕಿಸುವದಕ್ಕೆ ಹಾಗೂ ಒಣ ಬೇಸಾಯಕ್ಕೆ ೭೮ ಲಕ್ಷ ರೂ.

ಅವಸರದ ನೀರಾವರಿ ೩೨ ಲಕ್ಷ ರೂ.

ಯುದ್ಧೋತ್ತರ ಪುನರ್ರಚನೆಗೆ ೧೩೩ ಲಕ್ಷ ರೂ.

ಹೊಸ ವರ್ಷದಲ್ಲಿ ಉತ್ಪನ್ನ ಕರದ ಪಾಲಿನಲ್ಲಿ ೬೧ ಲಕ್ಷ ರೂ, ಅಬಕಾರಿ ಕರದಲ್ಲಿ ೧ ಕೋಟಿ ಮತ್ತು ಅರಣ್ಯ ಉತ್ಪನ್ನದಲ್ಲಿ ೭೮ ಲಕ್ಷ ರೂ. ಕಡಿಮೆ ಆದಾಯವಾಗಬಹುದೆಂದು ಅಂದಾಜ ಮಾಡಲಾಗಿವೆ.

ಹೊಸ ಕರ

ಹೊಸ ವರ್ಷದಲ್ಲಿ ಹೊಸ ಕರಗಳೆಲ್ಲ ಉಳಿಯುವವಲ್ಲದೆ ಮಾರಾಟ ಕರವನ್ನು ಹೊಸದಾಗಿ ಹೇರಲಾಗುವಗು. ಈ ಕರದಿಂದ ವರ್ಷಕ್ಕೆ ೨॥ ಕೋಟಿ ಆದಾಯವಾಗಬಹುದೆಂದು ಅಂದಾಜಿರುವದು. ಆದರೆ ೧೯೪೬-೪೭ ರಲ್ಲಿ ೧೯೪೬ ಜುಲೈ ೧ ರಿಂದ ಇದು ಜಾರಿಯಲ್ಲಿ ಬರುವದೆಂದು ಲೆಕ್ಕಹಾಕಿ ಆ ವರ್ಷ ೮೨॥ ಲಕ್ಷ ರೂ. ಮಾತ್ರ ಉತ್ಪನ್ನವಾಗಬಹುದೆಂದು ಲೆಕ್ಕ ಮಾಡಿರುತ್ತದೆ. ಇದುವರೆಗೆ ಮುಂಬಯಿ ಮತ್ತು ಅಹಮದಾಬಾದದಲ್ಲಿ ಮಾತ್ರ ಜಾರಿಯಲ್ಲಿದ್ದ ನಗರದ ಆಸ್ತಿ ಕರವನ್ನು ಪುಣೆ ನಗರಕ್ಕೂ ಅನ್ವಯಿಸಲಾಗಿದೆ. ಇದರಿಂದ ೪ ಲಕ್ಷ ರೂ. ಆದಾಯ ಬರಬಹುದು.

ವಿವರಗಳು

ಗವ್ಹರನರರು ಅನಂತರ ಮುಂಗಡ ಪತ್ರಿಕೆಯ ಕೆಲವು ವಿವರಗಳನ್ನು ಕೊಟ್ಟರು:—

೧೯೪೬-೪೭ ರಲ್ಲಿ ಶಿಕ್ಷಣಕ್ಕೆ ೨೯೪ ಲಕ್ಷ ರೂ. ತೆಗೆದಿಡಲಾಗಿದೆ. ಅಂದರೆ ಈ ವರ್ಷಕ್ಕಿಂತ ೧೮ ಲಕ್ಷ ರೂ. ಹೆಚ್ಚು ಕೊಟ್ಟಂತಾಯಿತು. ತಾತಾ ವಿಜ್ಞಾನ ಸಂಶೋಧನ ಮಂದಿರಕ್ಕೆ ಈ ಮೊದಲು ೨೫೦೦೦ ರೂ. ಕೊಟ್ಟದ್ದು ಇನ್ನೂ ಸುಮಾರು ೨ ಲಕ್ಷ ರೂ. ಕೊಡಬೇಕೆಂದು ಮಾಡಿದೆ.

ಉರ್ದು ಸಾಹಿತ್ಯ ಸಂಶೋಧನೆಗಾಗಿ ಅಂಜುಮಾನ್-ಈ-ಇಸ್ಲಾಮುದವರಿಗೆ ೧೦೦೦೦ ರೂ. ಕೊಡಲಾಗುವದು. ಅಂಜುಮಾನ್ ಇಸ್ಲಾಮದ

—೧೪ ನೇ ಪುಟ ನೋಡಿರಿ

ಅಂತರ್ ರಾಷ್ಟ್ರೀಯ

ಇರಾಣದ ಪ್ರಶ್ನೆ

ಅಂತರ್‌ರಾಷ್ಟ್ರೀಯ ಭದ್ರತಾಮಂಡಲದ ಎರಡನೆ ಅಧಿವೇಶನ ಮಾರ್ಚ ೨೫ ಕ್ಕೆ ನ್ಯೂಯಾರ್ಕದ (ಅಮೇರಿಕಾ) ಹಂಟರ್ಸ ಕಾಲೇಜದ ಹುಡುಗಿಯರ ವ್ಯಾಯಾಮ ಭವನದಲ್ಲಿ ಪ್ರಾರಂಭವಾದಾಗ ಅದರ ಮುಂದೆ ಬಂದ ಪ್ರಶ್ನೆಗಳಲ್ಲಿ ಮೊದಲನೆಯದೆಂದರೆ, ರಶಿಯಾದ ವಿರುದ್ಧ ಇರಾಣ ಕೊಟ್ಟ ದೂರು. ಮತ್ತೆ ಪ್ರಬಲ ರಾಷ್ಟ್ರವೊಂದರ ವಿರುದ್ಧ ಚಿಕ್ಕ ರಾಷ್ಟ್ರವೊಂದರ ದೂರು ಅದು!

ಇರಾಣದಲ್ಲಿ ೧೯೪೨ ರ ಆಂಗ್ಲೊ-ರಶಿಯನ್-ಇರಾಣಿ ಒಪ್ಪಂದದ ಕರಾರುಗಳನ್ನು ಮುರಿದು ರಶಿಯನ್ ಸೈನ್ಯಗಳು ಮಾರ್ಚ ೨, ೧೯೪೬ ರ ನಂತರವೂ ಉಳಿದುಕೊಂಡದ್ದರ ಮತ್ತು ಇರಾಣದ ಆಂತರಿಕ ವಿಷಯಗಳಲ್ಲಿ ಕೈಹಾಕಿದ್ದರ ವಿರುದ್ಧ ಭದ್ರತಾ ಮಂಡಲಕ್ಕೆ ಇರಾಣ ದೂರು ಕೊಟ್ಟಿತ್ತು. ಭದ್ರತಾ ಮಂಡಲದ ಲಂಡನ ಸಭೆಯಲ್ಲಿಯೇ ರಶಿಯಾದ ವಿರುದ್ಧ ಇರಾಣಿ ಸರಕಾರ ದೂರು ಕೊಟ್ಟಿದ್ದು ಆಗ ಉಭಯ ಪಕ್ಷಗಳು ತಮ್ಮೊಳಗೆ ಚರ್ಚೆಯಿಂದ ಇವನ್ನು ಬಗೆಹರಿಸಿಕೊಂಡು ಪರಿಣಾಮಗಳನ್ನು ಭದ್ರತಾ ಮಂಡಲಕ್ಕೆ ವರದಿ ಮಾಡಬೇಕೆಂದು ನಿರ್ಣಯಿಸಲಾಗಿತ್ತು. ಆಗ ಆಂತರಿಕ ಪ್ರಶ್ನೆಗಳಲ್ಲಿ ಕೈಹಾಕಿದ್ದೊಂದೇ— ಅಝರ ಬೈಜಾನ ಪ್ರಶ್ನೆ —ದೂರಿನ ವಿಷಯವಾಗಿತ್ತು. ಆದರೆ ಈಗ ಒಪ್ಪಂದ ಭಂಗ— ಮತ್ತು ಅದರಿಂದ "ಅಂತರ್ರಾಷ್ಟ್ರೀಯ ಶಾಂತಿಭಂಗ"ದ ಭೀತಿಯೂ ವ್ಯಕ್ತಗೊಳಿಸಲ್ಪಟ್ಟಿದೆ.

ಒತ್ತಾಯದ ದೂರು

ಈ ದೂರಿನ ಸ್ಥಿತಿಗತಿ ಸ್ವಲ್ಪ ವಿಚಿತ್ರವೇ ಆಗಿತ್ತು. ರಶಿಯನ್ ಪಡೆಗಳು ಇರಾಣದಿಂದ ಮಾರ್ಚ ೨ ಕ್ಕೆ ಹಿಂದೆ ಹೋಗಲಿಲ್ಲ ಮಾತ್ರವಲ್ಲ, ಕೆಲವೆಡೆಯಲ್ಲಿ ಮುಂದೊತ್ತಿದ್ದೂ ನಿಜ. ಅಝರ ಬೈಜಾನದಲ್ಲಾದಂತೆ ಕುರ್ದಿಸ್ತಾನದಲ್ಲಿಯೂ ಜನರು ತೆಹರಾನ ಸರಕಾರದ ವಿರುದ್ಧ ಹೋರಾಟ ಹೂಡಿದ್ದು ಮತ್ತು ಅದಕ್ಕೆ ಮಾಸ್ಕೋದ ಪ್ರತ್ಯಕ್ಷ ಬೆಂಬಲವಿತ್ತೆಂಬ ಸಂದೇಹ ಪ್ರಬಲವಾದದ್ದೂ ನಿಜ. ಆದರೂ ತೆಹರಾನ ಸರಕಾರವನ್ನು ಅದರ ಪಾಡಿಗೆ ಬಿಟ್ಟಿದ್ದರೆ ಅದು ಭದ್ರತಾ ಮಂಡಲಕ್ಕೆ ದೂರು ಕೊಡುತ್ತಿತ್ತೊ ಇಲ್ಲವೋ ಸಂಶಯಾಸ್ಪದ. "ರಶಿಯನ್ ಪಕ್ಷಪಾತಿ'' ಮುಖ್ಯಮಂತ್ರಿ ಸುಲ್ತಾನೆಯು ಮಾಸ್ಕೋ ರಾಯಭಾರ ವ್ಯರ್ಥವಾದರೂ ರಶಿಯಾದ ಕೂಡ ಏನಾದರೊಂದು ಒಪ್ಪಂದವಾಗಬಹುದೆಂಬ ಆಶೆಯನ್ನು ಅವನು ಕಟ್ಟಿಕೊಂಡೇ ಇದ್ದನು. ಆದರೆ ಈ ಬಗೆಯಾಗಿ "ದುರ್ಬಲ'' ಧೋರಣ ವಹಿಸುವದು ಬ್ರಿಟನ್—ಅಮೇರಿಕೆಗಳಿಗೆ ಸಹನವಾಗಲಿಲ್ಲ. ಈ ವಿಷಯವನ್ನು ಭದ್ರತಾ ಮಂಡಲದ ಮುಂದೆ ತರಬೇಕೆಂದು ಇರಾಣಕ್ಕೆ ಲಂಡನ ವಾಶಿಂಗ್ಟನಗಳ ಪ್ರಬಲ ಒತ್ತಾಯ ಬರತೊಡಗಿತು. ಕೊನೆಗೊಮ್ಮೆ ಅಮೇರಿಕೆ ಇರಾಣಕ್ಕೆ ಕೊನೆಯಎಚ್ಚರಿಕೆಯನ್ನೇ ಕೊಟ್ಟಿತು. ೨೪ ತಾಸುಗಳೊಳಗಾಗಿ ದೂರುಕೊಡುವದಿದ್ದರೆ ಕೊಡಬೇಕು—ಎಂದಿತು. ಆಗ ಸುಲ್ತಾನೆ ವಿಧಿಯಿಲ್ಲದೆ ದೂರು ಕಳಿಸಿದ. ದೂರು ಕೊಟ್ಟರೆ ಇದನ್ನು "ವೈರದ ಕ್ರಿಯೆ"ಯೆಂದು ಭಾವಿಸುವದೆಂದು ಹಾಕಿದ ಬೆದರಿಕೆ ಫಲಿಸಲಿಲ್ಲ.

ಆಗ ರಶಿಯಾ ತನ್ನ ವಿಲಂಬಕ ಧೋರಣೆಯನ್ನೇ ಕೈಗೆ ತೆಗೆದುಕೊಂಡಿತು. ಎಪ್ರಿಲ ೧೦ ರ ವರೆಗೆ ಈ ಪ್ರಶ್ನೆಯನ್ನು ತೆಗೆದುಕೊಳ್ಳಬಾರದೆಂದು ಅದು ಭದ್ರತಾ ಮಂಡಲಕ್ಕೆ ಬರೆದುಕೊಂಡಿತು ಅದೂ ವ್ಯರ್ಥವಾಯಿತು. ಈ ನಡುವೆ ಇರಾಣ ರಶಿಯಾಗಳಲ್ಲಿ ರಭಸದ ಮಾತುಕತೆಗಳು ಸಾಗಿರಬೇಕು. ಪರಿಣಾಮವಾಗಿ ತಾ ೨೪ ಕ್ಕೆ ರಶಿಯನ್ ಪಡೆಗಳು ಇರಾಣದಿಂದ ಹೊರಟು ಹೋಗತೊಡಗಿವೆಯೆಂದೂ "ಅನಿರೀಕ್ಷಿತವಾದುದೇನೂ ಸಂಭವಿಸದಿದ್ದರೆ" ಐದಾರು ವಾರಗಳಲ್ಲಿ ಇರಾಣದಿಂದ ರಶಿಯನ್ ಪಡೆಗಳು ಪೂರ್ಣ ಹೊರಟು ಹೋಗಬಹುದೆಂದೂ ಮಾಸ್ಕೋದಲ್ಲಿ ಪ್ರಸಿದ್ಧವಾಯಿತು. ಮಾರ್ಶಲ್ ಸ್ಟಾಲಿನ್ನರು ಈ ಸಂಬಂಧದಲ್ಲಿ ಇರಾಣಿ ರಶಿಯನ್ ಸರಕಾರಗಳಲ್ಲಿ "ಒಡಂಬಡಿಕೆ" ಯಾಗಿದೆಯೆಂದು ತಂತಿ ಕಳಿಸಿದರು ಇರಾಣಿ ಮುಖ್ಯಮಂತ್ರಿ ಸುಲ್ತಾನೆ ಇದು ತನ್ನ "ವೈಯಕ್ತಿಕ ವಿಜಯ'' ಎಂದು ಬೆನ್ನು ಚಪ್ಪರಿಸಿಕೊಂಡನು.

ಬೇಕಾಗಿದೆ ವಿವರಣೆ!

ಈ ಘಟನೆಗಳನ್ನು ಅಲಕ್ಷಿಸಿ ಭದ್ರತಾ ಮಂಡಲ ತಾ. ೨೫ ಕ್ಕೆ ಸೇರಿದ್ದು ಇರಾಣಿ ಪ್ರಶ್ನೆಯ ಚರ್ಚೆಯನ್ನು ೨೪ ತಾಸು ಮುಂದೆ ಹಾಕಿತು ತಾ. ೨೬ ಕ್ಕೆ ಸಭೆ ಸೇರಿದಾಗ ಈ ಪ್ರಶ್ನೆ ಒಗೆಹರಿದುದರಿಂದ ಅದನ್ನು ವಿಚಾರಕ್ಕೆ ಎತ್ತಿಕೊಳ್ಳುವದೇ ಅವಶ್ಯವಿಲ್ಲವೆಂದೂ ಕಾರ್ಯಕ್ರಮದಿಂದ ಈ ದೂರನ್ನು ಹೊಡೆದುಹಾಕಬೇಕೆಂದೂ ರಶಿಯನ್ ಪ್ರತಿನಿಧಿ ಗ್ರೋಮಿಕೋ ಕೇಳಿಕೊಂಡನು. ಆದರೆ ಅವನ ಬೇಡಿಕೆಗೆ ಎರಡೇ ಮತಗಳು ದೊರೆತು (ರಶಿಯಾ ಮತ್ತು ಪೋಲಂಡ) ಅದು ಹಾರಿಹೋಯಿತು. ಉಭಯ ಪಕ್ಷಗಳಲ್ಲಿ ನಡೆದ ಮಾತುಕತೆಗಳ ಕಥೆಯನ್ನು ಆಯಾ ಪಕ್ಷಗಳ ಬಾಯಿಯಿಂದ ಕೇಳಿ, ಆ ಮಾತುಕತೆಗಳಿಂದ ಆದ "ಒಡಂಬಡಿಕೆ" ನಿಜವಾಗಿ ತೃಪ್ತಿಕರವಾಗಿದೆಯೋ ಎಂದು ಭದ್ರತಾ ಮಂಡಲ ನೋಡಲಪೇಕ್ಷಿಸುವದೆಂದು ಬ್ರಿಟಿಶ ಅಮೇರಿಕನ್ನರು ಹಿಡಿದ ಛಲಕ್ಕೆ ೯ ಸದಸ್ಯರ ಬೆಂಬಲ ದೊರಕಿತು. ಒಪ್ಪಂದವನ್ನು ರಶಿಯಾ ಮುರಿದುದೇಕೆ? ಈಗ "ಅನಿರೀಕ್ಷಿತವಾದುದೇನೂ ಸಂಭವಿಸದಿದ್ದರೆ" ೫-೬ ವಾರದಲ್ಲಿ ಪೂರ್ಣ ಖಾಲಿ ಮಾಡುವೆವು ಎಂದುದರ ಅರ್ಥವೇನು? ಇತ್ಯಾದಿಯಾಗಿ ವಿವರಣೆಯನ್ನು ಕೇಳಲಾಗಿದೆ. ಈ ಪ್ರಶ್ನೆಯನ್ನು ಇನ್ನಾದರೂ ಎಪ್ರಿಲ ೧೦ ರ ವರೆಗೆ ಮುಂದೆ ಹಾಕಲೇಬೇಕು. ಇಲ್ಲದಿದ್ದರೆ ಇದರ ಚರ್ಚೆಯಲ್ಲಿ ನಾವು ಭಾಗವಹಿಸುವದಿಲ್ಲವೆಂದು ರಶಿಯನ್ ಪ್ರತಿನಿಧಿ ನಿಚ್ಚಳವಾಗಿ ಹೇಳಿಬಿಟ್ಟಿದ್ದಾನೆ.

ಸವಲತ್ತು ಸಿಕ್ಕಿದವೆ?

ಇತ್ತೀಚೆಗೆ ಸೋವಿಯೆಟ್ ಪತ್ರಿಕೆಗಳಲ್ಲಿ ಬರುತ್ತಿದ್ದ ಇರಾಣ ವಿಷಯಕವಾದ ಲೇಖನಗಳಿಂದ ರಶಿಯಾಕ್ಕೆ ಇರಾಣದಲ್ಲಿ ಎಣ್ಣೆಗಣಿ ಸವಲತ್ತುಗಳು ಬೇಕಾಗಿವೆಯೆಂದು ಸ್ಪಷ್ಟವಾಗುತ್ತದೆ. ಈ ಗಣಿಗಳ ಸವಲತ್ತುಗಳನ್ನು ಇರಾಣಿ ಸರಕಾರ ರಶಿಯಾಕ್ಕೆ ಕೊಟ್ಟಿದೆಯೆಂದೂ ಅದೂ ಅಲ್ಲದೆ ಅಝರ ಬೈಜಾನದ ಸ್ವಾಯತ್ತತೆಯನ್ನೂ ಮನ್ನಿಸಿದೆಯೆಂದೂ ನಂಬಲಾಗಿದೆ. ಹಾಗಿದ್ದರೆ ಅಂತರ್ ರಾಷ್ಟ್ರೀಯ ಜನಾಭಿಪ್ರಾಯದಲ್ಲಿ ರಶಿಯಾದ ಹೆಸರಿಗೆ ಬಂದ ಅಪಕೀರ್ತಿಗೆ ಬದಲು ದೊಡ್ಡ ಭೌತಿಕ ಲಾಭ ದೊರಕಿತೆಂದು ಹೇಳಬಹುದು.

ರಶಿಯಾ ಮತ್ತು ರಾಷ್ಟ್ರಸಂಘ

ಇರಾಣದ ಪ್ರಶ್ನೆ ಭದ್ರತಾ ಮಂಡಲದ ಮುಂದೆ ತನ್ನ ಇಚ್ಛೆಗೆ ವಿರುದ್ಧವಾಗಿ ತರಲ್ಪಟ್ಟರೆ ರಶಿಯಾ ಅದನ್ನು ವಿಶೇಷಾಧಿಕಾರ ಉಪಯೋಗಿಸಿ ತಳ್ಳಿಹಾಕಬಹುದು ಅಥವಾ ಯುಕ್ತರಾಷ್ಟ್ರ ಸಂಘದಿಂದ ಹೊರಬಿದ್ದು ಹಳೆಯ ಪ್ರತ್ಯೇಕ ತಾವಾದವನ್ನೆ ಅನುಸರಿಸಬಹುದು, ಎಂಬ ಸಂಶಯಗಳು ವ್ಯಕ್ತಗೊಳಿಸಲ್ಪಟ್ಟಿದ್ದವು. ಆದರೆ ರಾಷ್ಟ್ರಸಂಘದಿಂದ ಹೊರಬೀಳುವ ದಡ್ಡತನ ಮಾಡದೆ ಅದರಿಂದ ಸಾಧ್ಯವಿದ್ದಷ್ಟು ಪ್ರಯೋಜನ ಪಡೆಯುವದೇ ರಶಿಯನ್ ನಾಯಕರ ಉದ್ದೇಶವೆಂಬುದು ಮಾರ್ಶಲ್ ಸ್ಟಾಲಿನ್ನರು ಈಚೆಗೆ ಅಮೇರಿಕನ್ ಪತ್ರಿಕಾಕರ್ತನೊಬ್ಬನ ಪ್ರಶ್ನೆಗಳಿಗಿತ್ತ ಉತ್ತರಗಳಿಂದ ಸ್ಪಷ್ಟವಾಗುತ್ತದೆ. "ಅಂತರ್‌ರಾಷ್ಟ್ರೀಯ ಶಾಂತಿ ಭದ್ರತೆಗಳನ್ನು ರಕ್ಷಿಸುವ ಮಹತ್ವದಸಂಸ್ಥೆ" ಯೆಂದು ಅವರು ಯುಕ್ತರಾಷ್ಟ್ರ ಸಂಘವನ್ನು ಕರೆದಿದ್ದಾರೆ. ಕೆಲವು ರಾಷ್ಟ್ರಗಳು ಹಲವು ರಾಷ್ಟ್ರಗಳ ಮೇಲೆ ಅಧಿಕಾರ ನಡೆಸುವದರ ಬದಲು ಎಲ್ಲ ರಾಷ್ಟ್ರಗಳ ಸಮಾನಿಕತೆಯನ್ನೊಪ್ಪಿಕೊಂಡಿರುವದೇ ಯುಕ್ತರಾಷ್ಟ್ರ ಸಂಘದ ಮಹತ್ವವೆಂದೂ ಅವರು ಸಾರಿದ್ದಾರೆ. ಅನೇಕ ದೇಶಗಳಲ್ಲಿ ಈಗ ಉಂಟಾಗಿರುವ ಹೊಸ ಯುದ್ಧದ ಭಯಕ್ಕೆ ಅನಿಶ್ಚಿತತೆಯ ಬೀಜ ಬಿತ್ತುತ್ತಿರುವ ಕೆಲ ರಾಜಕೀಯ ಗುಂಪುಗಳ ಪ್ರಚಾರವೇ ಕಾರಣವೆಂದು ಅವರ ಅಭಿಪ್ರಾಯ "ಯಾವದೇ ರಾಷ್ಟ್ರಕ್ಕಾಗಲಿ ಅದರ ಸೈನ್ಯಕ್ಕಾಗಲಿ ಯುದ್ಧಬೇಕಾಗಿಲ್ಲವೆಂದು ನನಗೆ ಖಚಿತವಾಗಿದೆ'' ಎನ್ನುತ್ತಾರೆ ಅವರು. ಯುದ್ಧ ಭಯವನ್ನು ಹೊಡೆದೋಡಿಸಬೇಕಾದರೆ ಸರಕಾರಗಳೂ ಜನತೆಯೂ ಯುದ್ಧೋದ್ರೇಕಕ್ಕೆ ಕಾರಣವಾದ ರಾಜಕೀಯ ಗುಂಪುಗಳ ಪ್ರಚಾರಕ್ಕೆ ತಡೆಹಾಕಬೇಕೆಂದು ಅವರ ಹೇಳಿಕೆಯಾಗಿತ್ತು.

ಸ್ಮಟ್ಸರ ಹಟ

ದಕ್ಷಿಣ ಅಫ್ರಿಕೆಯಲ್ಲಿ ಏಶಿಯಾಟಿಕ್ ಜನರನ್ನು ಮುಖ್ಯವಾಗಿ ಹಿಂದೀಯರನ್ನು ಶಾಶ್ವತ ಕೀಳ್ಮೆಗೆ ತಳ್ಳಿಬಿಡುವ ಉದ್ದೇಶದಿಂದ ಹೊರಟ ಜನರಲ್ ಸ್ಮಟ್ಸರ ಭೂಮಿ ಮತ್ತು ಮತಾಧಿಕಾರ ಮಸೂದೆಯ ವಿರುದ್ಧ ಆರ್ಥಿಕ ಪ್ರತೀಕಾರವೆಂದು ಹಿಂದುಸ್ತಾನ ಸರಕಾರ ದಕ್ಷಿಣ ಅಫ್ರಿಕೆಯೊಡನಿದ್ದ ವ್ಯಾಪಾರ ಸಂಬಂಧವನ್ನು ಹರಿದುಕೊಂಡದ್ದರಿಂದ ಜನರಲ್ ಸ್ಮಟ್ಸರ ನೈತಿಕ ಅಂತರಾತ್ಮನಿಗೆ ಯಾವ ಬಗೆಯ ಕಳವಳಿಯೂ ಉಂಟಾಗಿಲ್ಲ. ಅವರು ತಮ್ಮ ವರ್ಣದ್ವೇಷದ ಕಾಯಿದೆಯನ್ನು ಹಟದಿಂದ ಮುಂದೊತ್ತುತ್ತಲೇ ಇರುವರು. ತಮ್ಮ ಈ ಕ್ರಿಯೆಯ ನೈತಿಕ ಸಮರ್ಥನೆಗಾಗಿ ಅವರು ವಿಚಿತ್ರ ವಾದವೊಂದನ್ನು ಮುಂದೊಡ್ಡಿದರು. "ಅನೇಕ ಜಾತಿಭೇದಗಳುಳ್ಳ ಹಿಂದೀಯರಿಗೆ ಈ ಮಸೂದೆಯ ತತ್ವಗಳನ್ನು ನಿಷೇಧಿಸುವ ನಾಲಿಗೆಯುಂಟೆ?" ಎಂದು ಅವರು ದ. ಅಫ್ರಿಕಾ ಶಾಸನ ಸಭೆಯಲ್ಲಿ ಉದ್ಧಟತನದಿಂದ ಹೇಳಿದರು. ದ. ಅಫ್ರಿಕೆಯ ಹಿಂದೀಯರು ತಮ್ಮ ಪಾಲಿಗೆ ಈ ಮಸೂದೆಯನ್ನು ವಿರೋಧಿಸುವ ಭೀಷ್ಮ ಪ್ರತಿಜ್ಞೆ ಮಾಡಿರುವರು. ತಾ. ೨೬ ಕ್ಕೆ ಹಿಂದೀಯರು ನಿಷೇಧಾರ್ಥ ಸಾರ್ವತ್ರಿಕ ಹರತಾಳ ಆಚರಿಸಿ, ಸಭೆ ಮಾಡಿ ಕಾಯಿದೆಯನ್ನು ಕೊನೆತನಕ ವಿರೋಧಿಸುವ ಪಣತೊಟ್ಟರು.

ಇಂಡೋನೇಶಿಯಾದಲ್ಲಿ

ಇಂಡೋನೇಶಿಯನ್ "ಪ್ರಜಾರಾಜ್ಯ"ದ ಧುರೀಣರಿಗೂ ಡಚ್ ಪ್ರತಿನಿಧಿಗಳಿಗೂ ಮಾತುಕತೆ ತಡವರಿಸಿ ತಡವರಿಸಿ ಸಾಗುತಿರುವಾಗ್ಗೆ ತೀವ್ರಗಾಮಿಗಳು ಯಥಾಪ್ರಕಾರ ತಮ್ಮ ಚಟುವಟಿಕೆಗಳನ್ನು ಸಾಗಿಸಿಯೇ ಇರುವರು. ಈ ತಲೆತಿರುಕ ಸತ್ವಗಳನ್ನು ಹಿಡಿತದಲ್ಲಿಡುವದು ಕಠಿನವೇ ಸರಿಯೆಂದು ಮುಖ್ಯಮಂತ್ರಿ ಶಾರಿಯಾರರು ಒಮ್ಮೆ ಹೇಳಿಬಿಟ್ಟರು. ಹಾನಿಕರವಾದ ಈ ಚಟುವಟಿಕೆಗಳನ್ನು ಸರಕಾರ ನಿಷ್ಠುರವಾಗಿ ಹತ್ತಿಕ್ಕುವದೆಂಬ ಬೆದರಿಕೆಯಿಂದ ಬಹಳ ಫಲವಾಗಿಲ್ಲ. ದಕ್ಷಿಣ ಬಡಾಂಗ ಪ್ರದೇಶವನ್ನು ಇಂಡೋನೇಶಿಯನ್ ಸರಕಾರ ಖಾಲಿ ಮಾಡಿ ಬ್ರಿಟಿಶ ಸೈನಿಕರ ಕೈಗೊಪ್ಪಿಸಿದೆ ಡಚ್-ಇಂಡೋನೇಶಿಯನ್ ಮಾತುಕತೆ "ಆಶಾದಾಯಕ"ವಾಗಿದ್ದರೂ ಅದರ ಗತಿ ಬಹಳ ಮಂದವಾಗಿಯೇ ಇದೆ. ಇಂಡೋಚೀನ-ಫ್ರಾನ್ಸಗಳೊಳಗಾದ ಒಪ್ಪಂದದ ಮಾದರಿಯಲ್ಲಿಯೇ ಡಚ್-ಇಂಡೋನೇಶಿಯನ್ ಒಪ್ಪಂದವನ್ನು ಸಿದ್ಧಗೊಳಿಸುವ ಸೂಚನೆಗಳೂ ಬಂದಿವೆಯೆಂದು ಹೇಳಲಾಗಿದೆ.

ಮಂಚೂರಿಯಾದಲ್ಲಿ ತಂಟೆ

ಬಹಳಷ್ಟು ಅಪಕೀರ್ತಿ ಹಬ್ಬಿದ ನಂತರ ರಶಿಯನ್ ಪಡೆಗಳು ಮಂಚೂರಿಯಾದ ಬಹಳ ಭಾಗದಿಂದ ಹೊರಟುಹೋಗಿವೆಯಲ್ಲದೆ ಎಪ್ರಿಲ ಒಳಗೆ ಪೂರ್ಣವಾಗಿ ಖಾಲಿ ಮಾಡಲಾಗುವದೆಂದು ಆಶ್ವಾಸನ ಕೊಡಲಾಗಿದೆ. ಆದರೆ ಅಷ್ಟಕ್ಕೇ ಚೀನದ ಸಂಕಟ ಮುಗಿಯಲಿಲ್ಲ. ರಶಿಯನ್‌ರು ಬಿಟ್ಟುಹೋದ ಭಾಗಗಳ ಸ್ವಾಮಿತ್ವಕ್ಕಾಗಿ ಕೌಮಿಟಾಂಗ ಪಡೆಗಳಿಗೂ ಕಮ್ಯುನಿಸ್ಟ ಪಡೆಗಳಿಗೂ ಒಂದು ಸ್ಪರ್ಧೆಯೇ ಉಂಟಾಗಿದೆ. ಯಾದವೀ ಯುದ್ಧವನ್ನು ನಿಲ್ಲಿಸಿ, ಚೀನವನ್ನು ಏಕೀಕೃತ ಮಾಡಿ, ಕೇಂದ್ರದಲ್ಲಿ ಸರ್ವಪಕ್ಷೀಯ ಸರಕಾರವನ್ನು ಸ್ಥಾಪಿಸಬೇಕೆಂಬದಾಗಿ ಉಭಯ ಪಕ್ಷಗಳಲ್ಲಿ ಒಪ್ಪಂದವಾಗಿರುವದಲ್ಲದೆ ಅಂಥ ಸರಕಾರವನ್ನು ಅಸ್ತಿತ್ವಕ್ಕೆ ತರಲು ಚಿಯಾಂಗರು ಸಿದ್ಧತೆಯನ್ನು ನಡೆಸಿದ್ದರೂ ಅಂತರ್ಯುದ್ಧ ಮಾತ್ರ ಇನ್ನೂ ನಿಂತಿಲ್ಲ. ಮಂಚೂರಿಯದಲ್ಲಿ ಕೌಮಿಂಟಾಂಗ-ಕಮ್ಯುನಿಸ್ಟ ಪಡೆಗಳಲ್ಲಿ ಹೋರಾಟವೇ ಸಾಗಿದೆ. ಇದಲ್ಲದೆ ಚಿಯಾಂಗರು ಚೀನದ ಪ್ರಜಾತಂತ್ರಸಂಘದ ಗೊತ್ತುವಳಿಗಳನ್ನು ಮನ್ನಿಸದಿದ್ದರೆ ಮುಂಬರುವ ರಾಷ್ಟ್ರೀಯ ಪರಿಷತ್ತಿನಲ್ಲಿ ತಾವು ಭಾಗವಹಿಸಲಾರೆವೆಂದು ಕಮ್ಯುನಿಸ್ಟರು ಎಚ್ಚರಿಕೆಯಿತ್ತಿದ್ದಾರೆ.

ಮಲಯದಲ್ಲಿ ನೆಹರು

ಹಲಗಾಲದ ಸಂಶಯದನಂತರ ಪಂಡಿತ ಜವಾಹರಲಾಲರಿಗೆ ಮಲಯಕ್ಕೆ ಹೋಗಲು ಅಪ್ಪಣೆ ದೊರೆಯಿತು. ಅವರು ಸಿಂಗಾಪುರದಲ್ಲಿ ತಾ. ೧೮ ಕ್ಕೆ ವಿಮಾನ ಮೂಲಕ ಇಳಿದಾಗ ಅವರಿಗೆ ಅಪೂರ್ವ ಸ್ವಾಗತ ದೊರೆಯಿತು. ಮಲಯದಲ್ಲಿನ ಹಿಂದೀಯರ ಪರಿಸ್ಥಿತಿಯನ್ನು ಅಭ್ಯಸಿಸಲು ಹೋದ ಅವರನ್ನು ಅಝಾದ ಹಿಂದ ಸರಕಾರದಲ್ಲಿ ಮಂತ್ರಿಗಳಾಗಿದ್ದ ಹಿಂದೀ ಪ್ರಮುಖ ರಾಘವನ್, ಎನ್. ಸಿ. ಗೋಹೊ (ಸ್ವಾತಂತ್ರ್ಯ ಸಂಘದ ಹಿಂದಿನ ಅಧ್ಯಕ್ಷ) ಮೊದಲಾದವರಲ್ಲದೆ ಆಗ್ನೇಯ ಏಶಿಯಾ ಸನ್ನಿಧಿಕೇಂದ್ರದ ಅಡ್ಮಿರಲ್ ಮೌಂಟಬ್ಯಾಟನ್ನರ ಪರವಾಗಿ ಮೇಜರ ಜನರಲ್ ಕಿಮ್ಮಿನ್ಸ, ಮತ್ತು ಇಂಡೋನೇಶಿಯನ್ ಮತ್ತು ಚೀನಸಂಘ ಸಂಸ್ಥೆಗಳ ಪ್ರತಿನಿಧಿಗಳು ಎದುರುಗೊಂಡರು. "ಹಿಂದುಸ್ತಾನದಲ್ಲಿ ಬೇಕಾದಷ್ಟು ಸಂಕಟಗಳಿದ್ದರೂ ವಿದೇಶಗಳಲ್ಲಿರುವ ತನ್ನ ಮಕ್ಕಳುಮರಿಗಳನ್ನು ಭಾರತಮಾತೆ ಮರೆಯುವದಿಲ್ಲ" ಎಂದು ಮಲಯದ ಪೀಡಿತ ಹಿಂದೀಯರಿಗೆ ಅಭಯವಿತ್ತು "ಹಿಂದೀಯರು ತಲೆಯೆತ್ತಿ ನಿಲ್ಲಬೇಕು" ಎಂದು ಬೋಧಿಸಿದರವರು. ಮಲಯದಲ್ಲಿ ಜಪಾನರ ಶರಣಾಗತಿಯ ನಂತರ ಮತ್ತಾವ ಘಟನೆಯೂ ಜನರಲ್ಲಿ ಇಷ್ಟು ಉತ್ಸಾಹವನ್ನುಂಟು ಮಾಡಿಲ್ಲವೆಂದು ರಾಯಟರ ಪ್ರತಿನಿಧಿ, ಪಂಡಿತರ ಆಗಮನವನ್ನು ಕುರಿತು ಬರೆದಿದ್ದಾನೆ. ಅಝಾದ ಸೇನೆಯ ಸ್ತ್ರೀ ಪುರುಷ ಸೈನಿಕರು ಸಮವಸ್ತ್ರದಲ್ಲಿ ಬೀದಿಗಳಲ್ಲಿ ನೆರೆದಿದ್ದರು. ಹಿಂದೀ ವಸತಿಗಳೂ ವ್ಯಾಪಾರ ಸ್ಥಳಗಳೂ ರಾಷ್ಟ್ರೀಯ ಧ್ವಜಗಳಿಂದ ತುಂಬಿಹೋಗಿದ್ದವು. ಹಿಂದೀ ಸ್ವಾತಂತ್ರ್ಯದ ಮಹತ್ವವನ್ನು ನೆಹರೂರವರು ತಮ್ಮ ಸ್ಫೂರ್ತಿಯುಕ್ತ ಶಬ್ದಗಳಲ್ಲಿ ಹೋದಲ್ಲೆಲ್ಲ ಒತ್ತಿಹೇಳಿದರು. "ಹಿಂದುಸ್ತಾನವನ್ನು ಆಳುವವರು ಏಶಿಯಾವನ್ನು ಆಳುತ್ತಾರೆ. ಹಿಂದುಸ್ತಾನ ಸ್ವತಂತ್ರವಾದರೆ ಇಂಡೋನೇಶಿಯಾ ಮೊದಲಾದ ರಾಜ್ಯಗಳ ಸ್ವಾತಂತ್ರ್ಯ ತಂತಾನೆ ಬರುತ್ತದೆ" ಎಂದರವರು. ಮಲಯಕ್ಕೆ ಹಿಂದೀ ಕಾಂಗ್ರೆಸ್ ವೈದ್ಯಕೀಯ ಪಥಕವೊಂದು ಕಳಿಸಲ್ಪಡುವದೆಂದು ಅವರು ಹೇಳಿದ್ದಾರೆ. ಮಲಯದಲ್ಲೆಲ್ಲ ನೆಹರೂ ಅವರು ಸಂಚರಿಸಿದರು.

ಅನ್ನದೇವರು ಬರುವದಿಲ್ಲ?

ಮದ್ರಾಸ ಸರಕಾರದ ಸಲಹೆಗಾರ ಎಸ್. ವಿ. ರಾಮಮೂರ್ತಿಯವರೂ ಹಿಂದೀ ಆಹಾರ ಶಿಷ್ಟಮಂಡಲದ ಮುಂದಾಳು ಸರ್ ರಾಮಸ್ವಾಮಿ ಮುದಲಿಯಾರರೂ ಇತರರೂ ಹಿಂದುಸ್ತಾನದ ಆಹಾರ ಪರಿಸ್ಥಿತಿ, ಮತ್ತು ಅದನ್ನು ಅಂಕೆಗೆ ತರದಿದ್ದರೆ ಆಗಬಹುದಾದ ಅನಾಹುತಗಳನ್ನು ವಾಶಿಂಗ್ಟನದ ಸಂಯುಕ್ತ ಆಹಾರ ಮಂಡಲದ ಮುಂದೆ ದೀನ, ಉದ್ವೇಗಯುಕ್ತ ವಾಣಿಯಿಂದ ಮನದಟ್ಟಾಗುವಂತೆ ಸಾರಿದ್ದರೂ ಹಿಂದೀ ಆಹಾರ ಬೇಡಿಕೆಯ ಬಹುಭಾಗ ಪೂರೈಸಲ್ಪಡುವದೆಂಬ ಆಶೆ ದೂರವಾಗುತ್ತಿದೆ. ಆಹಾರ ಮಂಡಲದ ಸಭೆಯ ಚರ್ಚೆಗಳಿಂದ ಹಿಂದೀಯರಿಗೆ ಈ ವರ್ಷದ ಪೂರ್ವಾರ್ಧಕ್ಕಾಗಿ ಬೇಡಿದ ೨೦ ಲಕ್ಷ ಟನ್ ಮಿಕ್ಕದ ಆಹಾರ ಪೂರೈಕೆಯಲ್ಲಿ ನೂರಕ್ಕೆ ೬೦ ರಷ್ಟು ಅರ್ಥಾತ್ ೧೪ ಲಕ್ಷ ಟನ್ ಗೋದಿ ೧॥ ಲಕ್ಷ ಟನ್ ಅಕ್ಕಿ ಒಡನೆ ದೊರಕಬಹುದೆಂಬ ಆಶೆಯುಂಟಾಗಿತ್ತು. ಆದರೆ ಅಕ್ಕಿಯ ಮಟ್ಟಿಗೆ ೧॥ ಲಕ್ಷ ಟನ್ ದೊರಕಬಹುದಾದರೂ ಗೋದಿಯ ನಂಬಿಕೆಯಿಲ್ಲವೆಂದೂ ಈ ವಿಷಯದಲ್ಲಿ ಇನ್ನೂ ಮಂಡಲದವರು ನಿರ್ಧಾರಕ್ಕೆ ಬಂದಿಲ್ಲವೆಂದೂ ಹಿಂದೀ ಬೇಡಿಕೆಗೆ ಅನೇಕ ಕಡೆಗಳಿಂದ ವಿರೋಧ ಬರಬಹುದೆಂದೂ ಸುದ್ದಿ ಬಂದಿದೆ.

ಮುಂಬಯಿ ಶಾಸನಸಭೆ ಆಯ್ಕೆಯಲ್ಲಿ ಕಾಂಗ್ರೆಸ್ಸಿನ ಅಖಂಡ ವಿಜಯ

೧೭೫ ಸ್ಥಳಗಳಲ್ಲಿ ಈ ವರೆಗೆ ೧೨೪ ಸ್ಥಳ ದೊರೆತವು

ಕರ್ನಾಟಕದ ಎಲ್ಲ ಸಾಮಾನ್ಯ ಸ್ಥಳಗಳು ಕಾಂಗ್ರೆಸ್ಸಿಗೆ

ಮುಂಬಯಿ ಶಾಸನ ಸಭೆಯ ಆಯ್ಕೆ ಮುಗಿದಿದ್ದು ಈ ವರೆಗೆ ಪ್ರಸಿದ್ಧವಾದ ಪರಿಣಾಮಗಳಿಂದ ಒಟ್ಟಿಗಿರುವ ೧೭೫ ಸ್ಥಳಗಳಲ್ಲಿ ಕಾಂಗ್ರೆಸ್ಸಿಗೆ ೧೨೪ ಸ್ಥಳಗಳು ದೊರೆತಿವೆ. ಮುಸಲ್ಮಾನರ ಮತ್ತು ಇನ್ನು ಹಲವು ವಿಶಿಷ್ಟ ಸ್ಥಳಗಳ ಪರಿಣಾಮ ಹೊರಬಿದ್ದಿರುವದಿಲ್ಲ.

ಕರ್ನಾಟಕದಲ್ಲಿರುವ ಎಲ್ಲ ಸಾಮಾನ್ಯ ಸ್ಥಳಗಳು ಕಾಂಗ್ರೆಸ್ಸಿಗೆ ದೊರೆತಿವೆ. ಕಾಂಗ್ರೆಸ್ಸೇತರ ಪಕ್ಷಗಳೆಲ್ಲ ಮಣ್ಣುಮುಕ್ಕಿ ಹೋಗಿವೆ. ಕಾಂಗ್ರೆಸ್ಸಿನ ವಿರುದ್ಧ ನಿಂತಿದ್ದ ೧೧ ಜನರಲ್ಲಿ ಎಲ್ಲರೂ ಪರಾಜಯ ಹೊಂದಿ ೫ ಜನ ಇಡುಗಂಟು ಕಳೆದುಕೊಂಡರು. ಒಟ್ಟಿಗೆ ೨೦ ಸ್ಥಳಗಳಿಗಾಗಿ ದೊರೆತ ೮೪೭೭೫೮ ಮತಗಳಲ್ಲಿ ಕಾಂಗ್ರೆಸ್ಸಿಗೆ ೭೮೧೪೫೪ ಮತ ಮತ್ತು ವಿರೋಧಿಗಳಿಗೆ ೬೬೩೦೪ ಮತ ದೊರೆತಿವೆ. ಅಂದರೆ ಕಾಂಗ್ರೆಸ್ಸಿಗೆ ೯೨.೧೮ ಮತ್ತು ವಿರೋಧಿಗಳಿಗೆ ೭.೮೨ ಮತ ಬಿದ್ದಂತಾಯಿತು.

ಬಹುಕಾಲದಿಂದ ಶಾಸನಸಭೆಯಲ್ಲಿ ತಳವೂರಿದ್ದ ಸರ ಸಿದ್ದಪ್ಪ ಕಂಬಳಿಯವರು ೨೫೯೨೦ ಮತಗಳು ಕಡಮೆ ಬಿದ್ದು ಪರಾಜಯ ಹೊಂದಿದರು. ಅದೇ ರೀತಿ ಸಳ್ಳದ ದೇಸಾಯರು ಪಾಟೀಲ ಶಂಕರಗೌಡರು ಮೊದಲಾದವರು ಉರುಳಿದರು. ರಾಣೀಬೆನ್ನೂರ ಸ್ತ್ರೀ ಮತದಾರ ಸಂಘದಿಂದ ಶ್ರೀಮತಿ ಎಲ್ಲವ್ವ ಸಾಂಬ್ರಾಣಿ ಎಂಬ ಹರಿಜನ ಮಹಿಳೆಯನ್ನು ಆರಿಸಿದ್ದು ವಿಶೇಷವಾಗಿದೆ.

ಚುನಾವಣೆಯಲ್ಲಿ ಆರಿಸಿ ಬಂದವರ ಹೆಸರನ್ನು ಕೆಳಗೆ ಕೊಡಲಾಗಿದೆ.

ಕರ್ನಾಟಕ

ಧಾರವಾಡ ಉತ್ತರ:— ೧) ಟಿ. ಆರ್. ನೇಸ್ವಿ. ೨) ಅಂದಾನೆಪ್ಪ ದೊಡ್ಡಮೇಟಿ ೩) ಕೆ. ಬಿ ಜುಂಜೂರ ೪) ರಾ. ಶ್ರೀ. ಹುಕ್ಕೇರಿಕರ

ಧಾರವಾಡ ದಕ್ಷಿಣ: — ೫) ಕೆ ಎಫ್. ಪಾಟೀಲ ೬) ವಿ. ವಿ. ಪಾಟೀಲ ೭) ಯಲ್ಲವ್ವ ಸಾಂಬ್ರಾಣಿ (ಸ್ತ್ರೀ)

ಬೆಳಗಾವಿ ಉತ್ತರ: — ೮) ಎ. ಬಿ. ಲತ್ತೆ ೯ ಆರ್. ಎ. ಕುಲಕರ್ಣಿ (ಹುಲಗಬಾಳಿ) ೧೦) ಎಂ. ಪಿ. ಪಾಟೀಲ ೧೧) ಬ್ಯಾ. ಮಾನೆ (ಹರಿಜನ)

ಬೆಳಗಾವಿ ದಕ್ಷಿಣ:-- ೧೨) ಎಸ್. ಎನ್ ಅಂಗಡಿ ೧೩) ನಿಂಗಪ್ಪಾ ದಳವಾಯಿ ೧೪ ಸದಾಶಿವ ಕುಟ್ರಿ.

ವಿಜಾಪುರ ಉತ್ತರ:— ೧೫) ಮಗನಲಾಲ ಶಹಾ ೧೬) ಜಿ. ಎಸ್. ಸಜ್ಜನ ೧೭) ಬಾಬು ರಾಮು ಹಜರೆ (ಹರಿಜನ)

ವಿಜಾಪುರ ದಕ್ಷಿಣ:— ೧೮) ಚನಬಸಪ್ಪ ಅಂಬಲಿ ೧೯) ಎಸ್. ಆರ್. ಕಂಠಿ.

ಉತ್ತರ ಕನ್ನಡ:-- ೨೦) ಎಸ್. ಎಸ್. ಶಾಸ್ತ್ರಿ ೨೧) ಸ. ಪ ಗಾಂವಕಾರ ೨೨) ಆರ್. ಎಂ. ಪ್ರಭು

ಮಹಾರಾಷ್ಟ್ರ

ಪುಣೆ ನಗರ-- ೨೩) ರಾ. ಬ. ಘೋರಪಡೆ ೨೪) ಸೌ. ಸುಮತೀಬಾಯಿ ಗೋರೆ (ಸ್ತ್ರೀ).

ಪುಣೆ ಜಿಲ್ಹಾ ಪೂರ್ವ-- ೨೫) ಡಾ. ಬಾಬಿ ಲಾಗು ೨೬) ಬಾಬೂರಾವ ಗಾಯಕವಾಡ ೨೭) ಮಾಧವರಾವ ವೆಮಾಣೆ

ಪುಣೆ ಪಶ್ಚಿಮ-- ೨೮) ಜಿ. ಎಸ್. ಖಿರಾ ೨೯) ಪೋಪಟಲಾಲ ಶಹಾ ೩೦) ಬಾಪೂಸಾಹೇಬ ಗುಪ್ತೆ

ಸಾತಾರಾ ದಕ್ಷಿಣ-- ೩೧) ಯಶವಂತರಾವ ಚವ್ಹಾಣ ೩೨) ವೆಂಕಟರಾವ ಪವಾರ ೩೩) ಬಾಬೂರಾವ ಗೋಖಲೆ ೩೪) ಕೆ. ಡಿ ಪಾಟೀಲ

ಸಾತಾರಾ ಉತ್ತರ-- ೩೫) ಪಾಪಸೆ ೩೬) ಬುವಾ ಗೋಸಾವಿ ೩೭) ಬಾಬಾಸಾಹೇಬ ಶಿಂದೆ ೩೮) ಗೌರೀಹರ ಸಿಂಹಾಸನೆ.

ರತ್ನಾಗಿರಿ ಉತ್ತರ-- ೩೯) ಶಿ. ಲ. ಕರಂದೀಕರ (ಹಿಂದೂ ಮಹಾಸಭಾ) ೪೦) ಪೇಜೆ, ೪೧) ಆರ್. ಎಂ. ಶಿಂದೆ ೪೨) ಖಡೇಕರ

ರತ್ನಾಗಿರಿ ದಕ್ಷಿಣ-- ೪೩) ನೋರೋಪಂತ ಜೋಶಿ ೪೪) ಸುಭೇದಾರ ೪೫) ಸಾವಂತ ೪೬) ಮಹಾಜನ.

ಕುಲಾಬಾ ಜಿಲ್ಹಾ— ೪೭ ಭಾವೂ ಸಾಹೇಬ ರಾವುತ ೪೮) ನಾನಾಸಾಹೇಬ ಕುಂಟೆ ೪೯) ಡಾವಾರ ೫೦) ತಳೆಗಾಂವಕರ

ಸೊಲ್ಲಾಪುರ ನಗರ— ೫೦) ಡಾ. ಅಂತ್ರೊಳೀಕರ.

ಸೊಲ್ಲಾಪುರ ಈಶಾನ್ಯ— ೫೧) ಟಿ. ಎಸ್. ಜಾಧವ ೫೨) ಎಸ್. ಬಿ. ಧುಮ್ಮಾ ೫೩) ಭಿಂಗಾರದಿವೆ

ಸೊಲ್ಲಾಪುರ ನೈಋತ್ಯ— ೫೪) ಬಾಬುರಾವ ಜೋಶಿ ೫೫) ಕಾಡಳೆ

ಪೂರ್ವಖಾನದೇಶ (ಪೂರ್ವ)- ೫೬) ನೇ. ಗ. ಪಾನೆ ೫೭) ದೇಶಮುಖ ೫೮) ರಾಣೆ ೫೯) ಕಲ್ಯಾಣಿ.

ಪೂರ್ವಖಾನದೇಶ (ಪಶ್ಚಿಮ) — ೬೦) ಮಾಧವ ಪಾಟೀಲ ೬೧) ಬಿರ್ಲಾ ೬೨) ಪಾಟೀಲ ೬೩) ಹ. ವಿ. ಪಾಟಸಕರ

ಪಶ್ಚಿಮ ಖಾನದೇಶ (ಪೂರ್ವ)— ೬೪) ನವಲ ಅ ಪಾಟೀಲ ೬೫) ಶಾಲಿಗ್ರಾಮ ಶೇಟ ಭಾರತಿಯಾ ೬೬) ಬ್ಯಾ. ತು. ಸಾ ವೋರೆ

ಪಶ್ಚಿಮ ಖಾನದೇಶ (ಪಶ್ಚಿಮ)— ೬೭) ಭಾಗೀ. ಚೌಧರಿ ೬೮) ಜ ಗ. ನಾಟವದಕರ

ಅಹಮದನಗರ (ಉತ್ತರ)— ೬೯) ಲ. ಮಾ. ಪಾಟೀಲ ೭೦) ಗಿರಮೆ ೭೧) ಗರುಡ ೭೨) ದೇಶಮುಖ

ನಗರ (ದಕ್ಷಿಣ) — ೭೩) ಫಿರೋದಿಯಾ ೭೪) ಭಾಸಕರ ೭೫) ನಲಾವಡೆ

ಠಾಣೆ ದಕ್ಷಿಣ— ೭೬) ಜಿ. ಎನ್. ಪಾಟೀಲ ೭೭ ಪಿ. ವಿ. ಪರಾಂಜಪೆ ೭೮) ಆರ್. ಎಸ್. ಗವಳಿ

ಠಾಣೆ ಉತ್ತರ-- ೭೯) ಜಿ ಡಿ. ವರ್ತಕ ೮೦) ಎಂ. ಜಿ. ಸಂಖೆ ೮೧) ವಿ. ವಿ. ಕೀರ್ತನೆ

ನಾಶಿಕ ಪಶ್ಚಿಮ--- ೮೨) ಎ. ಡಿ. ರಣಖಾಂಬೆ (ಹರಿಜನ) ೮೩) ಜಿ ಎಚ್ ದೇಶಪಾಂಡೆ ೮೪) ವಿ. ಎನ್. ನಾಯಕ ೮೫) ಬಿ. ಆರ್. ಜಾಧವ.

ನಾಶಿಕ ಪೂರ್ವ-- ೮೬) ಎಸ್. ಆರ್. ಪಾಟೀಲ ೮೭) ಡಿ. ಎಂ, ಬೀಡಕರ ೮೮) ಎಂ. ಎಲ್. ಜಾಧವ

ಮುಂಬಯಿ

ಮುಂಬಯಿ ನಗರ-- ೮೯) ಎಸ್. ಎಲ್. ಶಿಲಮ ೯೦) ಬಿ. ಎ ಖಿನುಜಿ ೯೧) ಎಚ್. ಆರ್ ಪಾರಡೀವಾಲಾ ಮುಂಬಯಿ ನಗರ (ಬಾಯ ಖಳಾ) ೯೨) ಎನ್. ಎಸ್. ಕಾಜರೋಳಕರ ೯೩) ಡಾ ಗಿಲ್ಡರ ೯೪) ಡಾ. ಜೀವರಾಜ ಮೇಥಾ

ಮುಂಬಯಿನಗರ (ಉಪನಗರ) ೯೫) ಎನ್ ಎಸ್ ಸೇನಗಾಂವಕರ ೯೬) ಡಿ. ಎನ್. ವಾಂದ್ರೇಕರ ೯೭) ವೈಕುಂಠಲಾಲ ಮೆಹತಾ.

ಗುಜರಾಥ

ಅಹಮ್ಮದಾಬಾದ ಜಿಲ್ಹಾ ೯೮) ಛೋಟೆಭಾಯಿ ೯೯) ಜೀ. ವಾ ಭಾಈ ಪಾಟೀಲ ೧೦೦) ರಣಛೋಡಭಾಈ ಪಟೇಲ.

ಅಹಮ್ಮದಾಬಾದನಗರ ೧೦೧) ಛೋಗಿಲಾಲ ಲಾಲಾ ೧೦೨) ಹರಿಪ್ರಸಾದ ದೇಸಾಯಿ

ಸುರತಜಿಲ್ಹಾ ೧೦೩) ಲಲ್ಲೂಭಾಯಿ ಭಾಕನಜಿ ಪಟೇಲ ೧೦೪) ಮುರಾರಜಿ ಆರ್ ದೇಸಾಯಿ ೧೦೫) ಮುರಾರಭಾಈ ಕೌವಸಜಿ ಪಟೇಲ ೧೦೬) ದೇವಜಿಭಾಯಿ ಛಿಕಾಭಾಯಿ ೧೦೭) ಛೋಟುಭಾಯಿ ಮಾರ್ಫಲಿಯಾ (ಸುರತ ಗ್ರಾಮಗಳು)

ಭಡೋಚ—೧೦೮) ಶಿವಶಂಕರಭಟ್ಟ ೧೦೯) ದಿನಕರರಾವ ದೇಸಾಯಿ

ಪಂಚಮಹಾಲ- ೧೧೦) ವ ಮರ ಎಸ್ ಮುಕಾದಮ ೧೧೧) ಮಣಿಕಲಾಲ ಗಾಂಧಿ ೧೧೨) ಲಕ್ಷ್ಮೀದಾಸ ಶ್ರೀಕಾಂತ.

ಆಯಾ ಪಕ್ಷಗಳ ಬಲಾಬಲ

ಕಾಂಗ್ರೆಸ್ಸು ೧೨೪ (ಇವರಲ್ಲಿ ಸಾಮಾನ್ಯ ೧೧೫, ಸ್ತ್ರೀ ೫, ಹಿಂದೀ ವಣಿಕ ಸಂಘ ೧, ಈಸ್ಟ ಇಂಡಿಯಾ ಆಲೆ ಸಂಘ, ೧ ಅಹಮದಾಬಾದ ಗಿರಣಿ ಒಡೆಯರ ಸಂಘ , ಪಶ್ಚಿಮ ಖಾನದೇಶ ಬಿಲ್ಲರ ಸ್ಥಳ ೧, ಮತ್ತು ಹಿಂದೀ ಕ್ರಿಶ್ಚನ್ ೨)

ಮುಸ್ಲಿಂಲೀಗ ೬
ಯುರೋಪಿಯನ್ ೬
ಸ್ವತಂತ್ರ ೩
ಆಂಗ್ಲೋ ಇಂಡಿಯನ್ ೨
ಕಮ್ಯುನಿಸ್ಟ ೨
ರ್ಯಾಡಿಕಲ್ ೧
ಹಿಂದೂ ಮಹಾಸಭಾ ೧

ಇನ್ನುಳಿದ ಸ್ಥಳಗಳ ಪರಿಣಾಮ ಜಾಹೀರಾಗಲಿವೆ.

೧೧೩) ಡಾ. ಅಲ್ಬನ್ ಡಿಸೌಜಾ ೧೧೪) ಪಿ. ಬಿ ಗಿಲೆಪ್ಸಿ ೧೧೫) ಚಕ್ರನಾರಾಯಣ (ಕಾಂಗ್ರೆಸ) ೧೧೬) ಈ. ಪಿ. ಕೊಯಿಲೊ (ಕಾಂಗ್ರೆಸ)

ಈ ಮೊದಲು ಅವಿರೋಧ ೨೯ ಜನ ಆರಿಸಿ ಬಂದಿದ್ದಾರೆ. ಇನ್ನೂ ೩೦ ಸ್ಥಳಗಳ ಆಯ್ಕೆಯ ಪರಿಣಾಮ ಸಾರುವದಿದೆ.

ಅವಿಚಾರ

“ಜನತೆಯು ಅವೇಶ ಉಕ್ಕುತ್ತ ನಡೆದಂತೆ ಸೈನಿಕರ ಗುಂಡಗಿರಿ ಪಾಶವೀವೃತ್ತಿಯನ್ನು ತಾಳುತ್ತ ನಡೆದಿದೆಂಬುದು ನಿಮಗೆ ಗೊತ್ತಿದ್ದ ಸಂಗತಿ. ಜನಸಾಮಾನ್ಯರ ಹಚ್ಚುಚ್ಚಾರವನ್ನು ನೀವು ಖಂಡಿಸಿದ್ದಿರಿ. ಆದರೆ ಸೈನಿಕರ ಪಾಶವೀ ಕೃತ್ಯದ ಬಗ್ಗೆ ಚಕಾರ ಶಬ್ದ ತೆಗೆದಿಲ್ಲ.”

ಹೀಗೊಬ್ಬರು ಬರೆಯುತ್ತಾರೆ. ಇದಕ್ಕೆ ಅವಿಚಾರವೆಂದು ನಾನು ಕರೆಯುತ್ತೇನೆ. ಪ್ರಜೆಗಳಿಗೆ ಅತ್ಯಾಚಾರ ಮಾಡುವ ಅಧಿಕಾರವಿಲ್ಲ, ಆದರೆ ಸೈನಿಕರು ಮೂರ್ಖರ ಪ್ರತೀಕ. ಇಡೀ ಸೈನ್ಯಖಾತೆಯನ್ನೆ ತೆಗಳುತಿರುವಾಗ ಅವರ ಹುಚ್ಚಾಟಿಕೆಯನ್ನು ನಿಂದಿಸುವದರಲ್ಲಿ ಅರ್ಥವಿಲ್ಲ. ಸರಕಾರವನ್ನೆಚ್ಚರಿಸಲು ಸೈನಿಕರ ವೃತ್ತಿಯನ್ನು ಟೀಕಿಸಬೇಕಾಗುತ್ತದೆ. ಆದರೆ ಪ್ರತಿಯೊಂದು ಸಕಾಲದಲ್ಲಿ ಆಗಬೇಕಾಗುತ್ತದೆ. ಜನತೆಯು ಹಿಂಸಾಚರಣೆಯನ್ನು ಖಂಡಿಸುವಾಗ ಅದಕ್ಕೆ ಅವಕಾಶವಿಲ್ಲ.

ಸತ್ಯಾಗ್ರಹಿ ಸೇನಾಪತಿ ಏನು ಮಾಡಬಲ್ಲನು? ತನ್ನ ಸೇನೆಯನ್ನು ಅವನು ಸುಧಾರಿಸಿಕೊಳ್ಳಬೇಕೋ ಇಲ್ಲವೆ ವಿರೋಧಿಗಳದೊ? ತನ್ನ ಸೇನೆಯನ್ನು ಸುಧಾರಿಸಿಕೊಂಡರೆ ವಿರೋಧಿಗಳ ಬಲ ಗುಂದುತ್ತದೆ. ಬಹಳ ಕಾಲದ ವರೆಗೆ ಹೀಗೆಯೇ ನಡೆದದ್ದಾದರೆ ವಿರೋಧಿಗಳು ತಾವಾಗಿಯೆ ಸುಧಾರಿಸಿಕೊಳ್ಳುವರು. ಮೇಲಿನ ಟೀಕೆ ನನ್ನ ಹೊರತು ಎರಡನೆಯವರ ಮೇಲೆ ಮಾಡಲ್ಪಡುವದಿಲ್ಲ. ಏಕೆಂದರೆ ಅವರೆಲ್ಲ ಈ ಮೊದಲೆ ಸೈನಿಕರ ಅತ್ಯಾಚಾರವನ್ನು ಖಂಡಿಸಿರುವರು. ಅವರ ಕೃತಿಯನ್ನು ನಿರ್ಣಯಿಸಲು ನಮ್ಮ ಹತ್ತರ ಇನ್ನೂ ಸಾಕಷ್ಟು ಆಧಾರಗಳಿಲ್ಲೆಂದು ನನ್ನ ಅಭಿಪ್ರಾಯ. ಅದು ಸಿದ್ಧವಾಗಹತ್ತಿದೆ. ಆದರೆ ಜನರೆಲ್ಲ ಅಂತರ್ಮುಖರಾಗಿ ತಮ್ಮ ದೋಷಗಳನ್ನು ತಿಳಿದುಕೊಳ್ಳಲಿಕ್ಕೆ ಬೇಕು. ಯಾರಾದರೂ ಎರಡನೆಯವರ ದೋಷಗಳನ್ನೇ ಹುಡುಕುತ್ತ ನಡೆದರೆ ತಿಳಿಯದಲೆ ತಾವೂ ಅದೇ ತಪ್ಪು ಮಾಡುವ ಸಂಭವವುಂಟು. ಹಾಗಾದರೆ ಇದ್ದಲಿ ಮಸಿಗೆ ಬುದ್ಧಿಹೇಳಿದಂತಾಗುವದು.

ಮುಂಬಯಿ ಮೋ. ಕ. ಗಾಂಧಿ
೧೫—೩—೪೬

(ಹರಿಜನಬಂಧುವಿನಿಂದ)

ಪ್ರತಿವರ್ಷದಂತೆ ಈ ವರ್ಷವೂ ಮಿರಜಿ ಶ್ರೀ ಅಂಬಾಬಾಯಿ ತಾಲೀಮ ಸಂಸ್ಥೆಯ ಪರವಾಗಿ ವಿವಿಧ ಶಾರೀರಿಕ ಪಂದ್ಯಾಟಗಳು ಮೇ ತಿಂಗಳು ಎರಡನೇ ವಾರದಲ್ಲಿ ಜರಗುವವು. ಈ ಸಲ ಹೆಚ್ಚು ಉತ್ಸಾಹದಿಂದ ಈ ಆಟಗಳನ್ನು ಏರ್ಪಡಿಸಲಾಗುವವು. ಇದರಲ್ಲಿ ಭಾಗವಹಿಸುವವರು ಕಾರ್ಯದರ್ಶಿಗಳೊಡನೆ ಪತ್ರವ್ಯವಹಾರ ಮಾಡಬೇಕು.

ಕರ್ನಾಟಕಕ್ಕೆ ಸ್ವತಂತ್ರ ಬಾನುಲಿ

ಶಾಸನ ಸಭೆಯಲ್ಲಿ ಪ್ರಶ್ನೋತ್ತರ

ಹೊಸದಿಲ್ಲಿ— ಬಾನುಲಿಯಲ್ಲಿ ಕನ್ನಡ ಭಾಷಾಸ್ಥಾನವನ್ನು ಕುರಿತು ಶ್ರೀ ಕರಮರಕರರು ಕೇಳಿದ ಪ್ರಶ್ನೆಗಳಿಗೆ ತಾ. ೧೩ ದಿವಸ ಸರ್ ಅಕಬರ ಹೈದರಿಯವರು ಕೇಂದ್ರ ಶಾಸನ ಸಭೆಯಲ್ಲಿ ಈ ಕೆಳಗಿನಂತೆ ಉತ್ತರವನ್ನು ಕೊಟ್ಟರು.

ಪ್ರಶ್ನೆ— ನ್ಯೂ ದಿಲ್ಲಿ ಸ್ಟೇಶನಿನ ಕಾರ್ಯಕ್ರಮದಲ್ಲಿ ಕನ್ನಡ ಭಾಷೆಗೆ ಏನಾದರೂ ಸ್ಥಾನ ಕೊಡಲ್ಪಟ್ಟದೆಯೂ?

ಉ- ಇಲ್ಲ.

ಪ್ರಶ್ನೆ— ಆ ರೀತಿ ಸ್ಥಾನ ಕಲ್ಪಿಸಿಕೊಡಬೇಕೆಂದು ಸರಕಾರದವರು ಯೋಜಿಸಿರುವರೋ?

ಉ-- ಇಲ್ಲ

ಪ್ರಶ್ನೆ— ಮದ್ರಾಸ ಮತ್ತು ಮುಂಬಯಿ ಸ್ಟೇಶನಗಳಲ್ಲಿ ಕನ್ನಡ ಭಾಷೆಗೆ ಎಷ್ಟು ವೇಳೆ ಕೊಡಲಾಗಿದೆ ಮತ್ತು ಆ ವೇಳೆಯನ್ನು ಹೆಚ್ಚಿಸಲು ಯಾವ ಉಪಾಯಗಳು ಕೈಕೊಳ್ಳಲ್ಪಟ್ಟವೆ?

ಉ— ಸದ್ಯಕ್ಕೆ ಈ ಕೆಳಗಿನಂತೆ ವೇಳೆಯನ್ನು ಕೊಡಲಾಗಿದೆ

(೧) ಮದ್ರಾಸು ತಿಂಗಳಿಗೆ ೩೦ ಮಿನೀಟು ಸಂಗೀತ (೨) ಮುಂಬಯಿ ತಿಂಗಳಿಗೆ ೨೦ ಮಿನೀಟು ಸಂಗೀತ ಮತ್ತು ೩೦ ಮಿನೀಟು ಶಾಲೆಯ ಬಾಲಕರಿಗಾಗಿ ಮಾತುಗಳು.

ಮೇಲ್ಕಾಣಿಸಿದ ವೇಳೆಯನ್ನು ಹೆಚ್ಚಿಸುವದನ್ನು ಹಿಂದುಸ್ತಾನ ಸರಕಾರದವರು ವಿಚಾರಿಸುತ್ತಿರುವರು.

ಪ್ರಶ್ನೆ— ಕನ್ನಡನಾಡಿಗಾಗಿ ಒಂದು ಸ್ವತಂತ್ರವಾದ ಆಕಾಶವಾಣಿ ಕೇಂದ್ರವನ್ನು ಸ್ಥಾಪಿಸುವ ಪ್ರಶ್ನೆಯನ್ನು ಸರಕಾರದವರು ವಿಚಾರಿಸುತ್ತಲಿರುವರೊ?

ಉತ್ತರ— ಹೌದು; ವಿಚಾರಿಸುತ್ತಲಿರುವರು.

ಧಾರವಾಡ ಜಿಲ್ಹೆಯ ಬರಗಾಲ ಪರಿಸ್ಥಿತಿ

ಕಲೆಕ್ಟರರ ಹೇಳಿಕೆ

೧೯ ನೇ ತಾರೀಖಿನ ದಿವಸ ಜಿಲ್ಹಾ ಕಲೆಕ್ಟರರು ಸುದ್ದಿಗಾರರ ಸಭೆಯಲ್ಲಿ ಜಿಲ್ಲೆಯ ಆಹಾರ ಪರಿಸ್ಥಿತಿಯನ್ನು ವಿವರಿಸಿದರು. ಧಾರವಾಡ ಜಿಲ್ಹೆ ಯಾವಾಗಲೂ ಉಳಿಕೆ ಪ್ರದೇಶವಾಗಿದ್ದರೂ ಈ ವರ್ಷ ಕೊರತೆಯ ಭಾಗವಾಗಿದೆ. ಈ ವರ್ಷ ಜಿಲ್ಹೆಯಲ್ಲಿ ೨ ಲಕ್ಷ ಚೀಲ ಧಾನ್ಯಗಳ ಕೊರತೆಯಾಗುತ್ತದೆ. ಮಾರ್ಚ ೧ ನೇ ತಾರೀಕಿಗೆ ಜಿಲ್ಹೆಯಲ್ಲಿ ಎಲ್ಲ ತರದ ಕಾಳು ಕೂಡಿ ಎರಡು ಲಕ್ಷ ಚೀಲ ಕಾಳುಗಳಿರುತ್ತವೆ. ಧಾನ್ಯ ವಸೂಲಿಯಿಂದ ಒಂದು ಲಕ್ಷ ಚೀಲ ಬರಬಹುದು. ಹೀಗೆ ೩ ಲಕ್ಷ ಚೀಲ ಕಾಳು ನಮ್ಮಲ್ಲಿದ್ದರೆ ಮುಂದಿನ ಸುಗ್ಗಿ ಬರವ ವರೆಗೆ ೫ ಲಕ್ಷ ಚೀಲ ಕಾಳು ಬೇಕಾಗುವವು. ಆದುದರಿಂದ ಎರಡು ಲಕ್ಷ ಚೀಲ ಕಾಳು ಕಡಮೆ ಬಿದ್ದಂತಾಗಿವೆ ಇಷ್ಟು ಕಾಳು ಪೂರೈಸಲು ಸರಕಾರಕ್ಕೆ ಕೇಳಿದೆ ಆದರೆ ಅವರಿಂದ ಯಾವದೇ ಬಗೆಯ ಉತ್ತರ ಬಂದಿಲ್ಲ. ಹಳ್ಳಿಗಳಲ್ಲಿ ೧೫ ದಿನಕ್ಕೆ ತಲಾ ಅರ್ಧ ಶೇರು ಧಾನ್ಯ ಕೊಡುತ್ತಿದ್ದು ಅದನ್ನು ಸ್ವಲ್ಪ ಹೆಚ್ಚಿಸಬೇಕೆಂದು ಮಾಡಿದೆ. ಕಡಿಮೆ ಬಿದ್ದ ಧಾನ್ಯವನ್ನು ಅಲಸಂದಿ, ಹೆಸರು ಮೊದಲಾದವುಗಳಿಂದ ತುಂಬಿಕೊಳ್ಳಬೇಕೆಂದು ಕಲೆಕ್ಟರರು ಹೇಳಿದರು. ಹಿಟ್ಟು ಕಾಳು ಕಡಮೆ ಇದ್ದುದರಿಂದ ಶೀದಾ ಪ್ರಮಾಣವನ್ನು ೩೦ ತೊಲಿಗೆ ಇಳಿಸಲಾಗಿದೆ.

ರಾಯಚೂರ ತಾಲೂಕಿನಲ್ಲಿ ಹಳ್ಳಿಗರು ಹೊಟ್ಟೆಗೆ ಕಾಳಿಲ್ಲದೆ ಕಾಲಹಾಕುತ್ತಿರುವಾಗ ಲೆವಿ ವಸೂಲಿಯು ಜೋರಿನಿಂದ ಸಾಗಿದೆ. ಇದರಿಂದ ಜನ ಗಾಬರಿಗೊಂಡಿದ್ದಾರೆ. ಈ ಸಂಬಂಧದಲ್ಲಿ ಆಗುವ ಅನ್ಯಾಯಗಳ ಪರಿಮಾರ್ಜನೆಗಾಗಿ ಪ್ರಜಾಹಿತಸಂಘದವರು ಪ್ರಯತ್ನಿಸುತ್ತಿರುವರು.

ಕರ್ಮವೀರ

ಹರಿಜನ ಪುರವಣಿ

ಬಂಡವಳಗಾರಿಕೆ ಮತ್ತು ಮುಷ್ಕರ

ಕೂಲಿಕಾರರು ಮುಷ್ಕರ ಹೂಡಿದಾಗ ಬಂಡವಳಗಾರರು ಹೇಗೆ ವರ್ತಿಸಬೇಕು? ಈ ಪ್ರಶ್ನೆ ಎಲ್ಲೆಲ್ಲಿಯೂ ಕೇಳಲ್ಪಡುತಿದೆ. ಅದಕ್ಕೆ ಸದ್ಯ ಸ್ಥಿತಿಯಲ್ಲಿ ಬಹಳ ಮಹತ್ವವೂ ಇದೆ. ದಂಡ ನೀತಿ—ಅಥವಾ "ಅಮೇರಿಕನ್" ಎಂದು ಹೆಸರು ಅಥವಾ ಅಡ್ಡ ಹೆಸರು ಪಡೆದ ಪದ್ಧತಿ-ಒಂದು ಉಪಾಯ. ಕೂಲಿಕಾರರನ್ನು ಸಂಘಟಿತ ಗುಂಡಾಗಿರಿಯಿಂದ ಹತ್ತಿಕ್ಕುವ ಹಾದಿ ಅದು. ಇನ್ನೊಂದು ಹಾದಿ, ನ್ಯಾಯ ಧರ್ಮದ ಹಾದಿಯೆಂದರೆ, ಪ್ರತಿಯೊಂದು ಮುಷ್ಕರವನ್ನೂ ಅದರದರ ಯೋಗ್ಯತಾನುಸಾರ ಪರಿಶೀಲಿಸಿ ಕೂಲಿಕಾರರಿಗೆ ಅವರ ಪಾಲು ಕೊಡುವದು—ಅವರ ಪಾಲೆಂದರೆ ಬಂಡವಳಗಾರನು ಕೂಲಿಕಾರರ ಪಾಲೆಂದು ಭಾವಿಸಿದುದಲ್ಲ; ಸ್ವತಃ ಕೂಲಿಕಾರರೇ ತಮ್ಮ ಪಾಲೆಂದು ಒಪ್ಪಿಕೊಳ್ಳಬಹುದಾದ ಮತ್ತು ಸಾರ್ವಜನಿಕ ಅಭಿಪ್ರಾಯ ನ್ಯಾಯವೆಂದು ಅಂಗೀಕರಿಸಬಹುದಾದ ಪಾಲು.

ಒಂದು ಮೂಲ ಪ್ರಶ್ನೆ ನ್ಯಾಯವಾಗಿ ಉದ್ಭವಿಸಬಹುದು: ಯಾವುದೊಂದು ಸುಸಂಘಟಿತ ವ್ಯಾಪಾರ ಸಂಸ್ಥೆಯಲ್ಲಿ ಮುಷ್ಕರ ಆಗಬೇಕಾದರೂ ಏಕೆ? ಬಂಡವಳಗಾರ—-ಕೂಲಿಕಾರರಲ್ಲಿ ಪರಿಪೂರ್ಣ ಸಾಮರಸ್ಯವಿದ್ದಲ್ಲಿ, ಪರಸ್ಪರ ಗೌರವವಿದ್ದಲ್ಲಿ ಮತ್ತು ಸಮಾನಿಕತೆಯನ್ನು ಉಭಯತರೂ ಅಂಗೀಕರಿಸಿದಲ್ಲಿ ಮುಷ್ಕರಗಳಿಗೆ ಅವಕಾಶವೇ ಇರಬಾರದು. ಅತ್ಯಂತ ನಿಯಮಯುಕ್ತ ಸಂಸ್ಥೆಗಳಲ್ಲಿ ಕೂಡ ಒಮ್ಮೊಮ್ಮೆ ಒಡೆಯ—ಆಳುಗಳ ನಡುವೆ ಭಿನ್ನಾಭಿಪ್ರಾಯವುಂಟಾಗುವ ಸಂಭವವಿರುವದರಿಂದ ಎರಡೂ ಪಕ್ಷಗಳಲ್ಲಿ ಮಧ್ಯಸ್ಥಿಕೆ ಮಾಡುವ ಪದ್ಧತಿಯೊಂದನ್ನು ಸ್ಥಾಪಿಸಿ ಆ ಮೂಲಕ ಎರಡೂ ಕಡೆಯವರು ಮಧ್ಯಸ್ಥರ ನಿರ್ಣಯವನ್ನು ಪರಿಪೂರ್ಣ ಪ್ರಾಮಾಣಿಕತೆಯಿಂದ ಪಾಲಿಸುವಂತಾಗಬಾರದೇಕೆ ?

ಆದರೆ ನಾವು ವಿದ್ಯಮಾನಗಳನ್ನು ಇದ್ದಕಿದ್ದಂತೆ ಪರಿಶೀಲಿಸಬೇಕಲ್ಲದೆ ಇರಬೇಕಾದಂತೆ ಅಲ್ಲ. ಕಾಲ ಹೋದಂತೆಲ್ಲ ಕೂಲಿಕಾರ ಜಗತ್ತು ತನ್ನ ಬೇಡಿಕೆಗಳನ್ನು ಛಲದಿಂದ ಮುಂದೊಡ್ಡತೊಡಗಿದೆ. ಆ ಬೇಡಿಕೆಗಳು ದಿನದಿನಕ್ಕೆ ಹೆಚ್ಚುತ್ತಿವೆ. ಅವುಗಳನ್ನು ಸಾಧಿಸಿಕೊಳ್ಳುವದಕ್ಕೆ ಅದು ಹಿಂಸಾಪಥವನ್ನು ಅನುಸರಿಸಲು ಕೂಡ ಹಿಂಜರಿಯುವದಿಲ್ಲ. ಬೇಡಿಕೆಗಳನ್ನು ಸಾಧಿಸುವ ಹೊಸ ಉಪಾಯಗಳನ್ನೂ ಈಗ ಪ್ರಯೋಗಿಸಲಾಗುತ್ತಿದೆ. ಒಡೆಯರ ಸೊತ್ತುಗಳಿಗೆ ಹಾನಿ ಮಾಡಲು, ಯಂತ್ರಗಳ ಕೀಲು ತಪ್ಪಿಸಿಬಿಡಲು, ಮುಷ್ಕರದಲ್ಲಿ ಸೇರಲೊಲ್ಲದ ವೃದ್ಧ ಸ್ತ್ರೀ ಪುರುಷರನ್ನು ಪೀಡಿಸಲು ಮತ್ತು "ಕರಿಗಾಲಿ"ನವರನ್ನು ಬಲಾತ್ಕಾರದಿಂದ ಹೊರದೂಡಲು ಕೂಡ ಕೂಲಿಕಾರರು ಹಿಂದೆಮುಂದೆ ನೋಡುವದಿಲ್ಲ. ಇಂಥ ಸ್ಥಿತಿಯಲ್ಲಿ ಒಡೆಯರು ಹೇಗೆ ವರ್ತಿಸಬೇಕು?

ನನ್ನನ್ನು ಕೇಳಿದರೆ, ಒಡೆಯರೂ ಆಳುಗಳೂ ಸಮಾನ ಪಾಲುಗಾರರು—ಆಳುಗಳೇ ಹೆಚ್ಚಿನವರೆಂದು ಒಪ್ಪಿಕೊಳ್ಳದಿದ್ದರೂ. ಆದರೆ ಇಂದಿನ ವಿದ್ಯಮಾನ ತದ್ವಿರುದ್ಧವಾಗಿದೆ. ಒಡೆಯರು ಬುದ್ಧಿಶಕ್ತಿಯನ್ನು ತಮ್ಮ ಗುತ್ತಿಗೆಯಾಗಿ ಮಾಡಿಕೊಂಡಿದ್ದಾರೆ. ಬಂಡವಲದ ಕೇಂದ್ರೀಕರಣದ ಕಾರಣದಿಂದ ಅವರಿಗೆ ಹೆಚ್ಚಿನ ಅನುಕೂಲ ದೊರೆಯುತ್ತದೆ. ಅದನ್ನು ಹೇಗೆ ಬಳಸಿಕೊಳ್ಳಬೇಕೆಂದೂ ಅವರಿಗೆ-ಗೊತ್ತು. ಒಂದು ಬಿಡಿ ರೂಪಾಯಿಗೆ ಇರುವ ಸತ್ವ ಬಹಳ ಕಡಿಮೆ. ಆದರೆ ಹಣ ಒಗ್ಗೂಡಿ ಬಂಡವಳವಾದಾಗ ಆ ಒಗ್ಗೂಟಕ್ಕೆ ಅದರಲ್ಲಿರುವ ಒಟ್ಟು ಬಿಡಿ ರೂಪಾಯಿಗಳ ಶಕ್ತಿಯ ಮೊತ್ತಕ್ಕಿಂತ ಎಷ್ಟೋ ಪಾಲು ಹೆಚ್ಚಿನ ಸತ್ವ ದೊರಕುತ್ತದೆ. ಒಂದು ಕೋಟಿ ನೀರ ಬಿಂದುಗಳು ಬೇರೆಬೇರೆಯಾಗಿದ್ದಾಗ ಅವುಗಳು ಉಪೇಕ್ಷಣೀಯವಾಗಿರಬಹುದು. ಆದರೆ ಅವು ಒಂದುಗೂಡಿದಾಗ ದೊಡ್ಡ ಹಡಗುಪಡೆಯನ್ನು ಎದೆಯ ಮೇಲೆ ಹೊತ್ತ ಸಮುದ್ರವಾಗುತ್ತವೆ. ಹಿಂದುಸ್ತಾನದಲ್ಲಿ ಬಂಡವಳಗಾರರು ಸಾಕಷ್ಟು ಸುಸಂಘಟಿತರಾಗಿದ್ದಾರೆ. ಆದರೆ ಅನೇಕ ಕೂಲಿಕಾರ ಸಂಘಗಳೂ ಅವುಗಳ ಸಂಯುಕ್ತ ಮಂಡಲವೂ ಇದ್ದರೂ ಕೂಲಿಕಾರರು ಇನ್ನೂ ಹೆಚ್ಚುಕಡಿಮೆ ಚಲ್ಲಾಪಿಲ್ಲಿಯಾಗೇ ಇರುವರು. ಆದುದರಿಂದ ನಿಜವಾದ ಒಗ್ಗೂಟದಿಂದ ದೊರೆಯುವ ಶಕ್ತಿ ಅವರಿಗೆ ಸಿಕ್ಕಿಲ್ಲ. ಅಲ್ಲದೆ ಅವರಲ್ಲಿ ವಿಚಾರಶಕ್ತಿಯೂ ಕಡಿಮೆ—ಏಕೆಂದರೆ ವ್ಯಕ್ತಿವ್ಯಕ್ತಿಗಳ ಕೂಲಿಕಾರ ಸಂಘ ಸಂಘಗಳ ಹೋರಾಟ ಅವರಲ್ಲಿ ಪ್ರಚುರವಾಗಿದೆ. ವಿಚಾರಶಕ್ತಿಯ ಕೊರತೆಯ ಫಲವಾಗಿ ಸ್ವಾರ್ಥಸಾಧಕರೂ ಯಾವುದಕ್ಕೂ ಹೇಸದ ಜನರೂ ಅವರನ್ನು ಶೋಷಣಮಾಡಿ ಉಪದ್ರವಗಳನ್ನು ಉಂಟುಮಾಡುವ ವರೆಗೂ ಹೋಗುತ್ತಾರೆ. ಅಹಿಂಸೆಯ ಒಳಗುಟ್ಟನ್ನರಿಯದ ಅವರಿಗೆ ಅದಕ್ಕಿಂತ ಹೆಚ್ಚು ಗೊತ್ತಿಲ್ಲ. ಒಟ್ಟಿನ ಮೇಲೆ ಸಂಕಟಕ್ಕೀಡಾಗುವವರು ಕೂಲಿಕಾರರು. ಕೂಲಿಕಾರರು ಅಹಿಂಸೆಯ ಶಕ್ತಿಯನ್ನು ಅರಿತುಕೊಂಡರೆ, ಕೆಲವೇ ಜನ ಬಂಡವಳಗಾರರ ಜಡಲೋಹದ ಶಕ್ತಿಯನ್ನು ಕೂಲಿಕಾರರ ಒಗ್ಗೂಟದ ಶಕ್ತಿ ಬೇಕಾದಾಗ ಮೀರಿಸಬಲ್ಲದು.

ಆದುದರಿಂದ ನಾನು ಒಡೆಯರಿಗೆ ಕೊಡುವ ಸಲಹೆಯಿಷ್ಟೆ: ತಾವು ನಿರ್ಮಿಸಿದವೆಂದು ಬಂಡವಳಗಾರರು ಹಚ್ಚಿಕೊಂಡಿರುವ ಸಂಸ್ಥೆಗಳ ನಿಜವಾದ ಒಡೆಯರು ಕೂಲಿಕಾರರೆಂದು ಸ್ವೇಚ್ಛೆಯಿಂದ ಅವರು ಒಪ್ಪಿಕೊಳ್ಳಬೇಕು. ಕೂಲಿಕಾರರಲ್ಲಿ ಸುಪ್ತಾವಸ್ಥೆಯಲ್ಲಿರುವ ವಿಚಾರ ಶಕ್ತಿಯನ್ನು ಮುಂದೆ ತರಬಲ್ಲ ಶುದ್ಧ ಶಿಕ್ಷಣವನ್ನು ಅವರಿಗೆ ಒದಗಿಸಿಕೊಡುವದು ತಮ್ಮ ಕರ್ತವ್ಯವೆಂದು ಬಂಡವಳಗಾರರು ತಿಳಿದುಕೊಳ್ಳಬೇಕು. ಮತ್ತು ಕೂಲಿಕಾರರ ಈ ಒಗ್ಗೂಟದಿಂದ ನಿರ್ಮಿತವಾಗುವ ಸತ್ವವನ್ನು ಅವರು ಆನಂದದಿಂದ ಸ್ವಾಗತಿಸಿ ಬೆಳೆಸಬೇಕು.

ಈ ಉದಾತ್ತ ಕಾರ್ಯವನ್ನು ಒಡೆಯರು ಒಂದೇ ದಿನದಲ್ಲಿ ಸಾಧಿಸಲಾರರು. ಅಷ್ಟರ ವರೆಗೆ ತಮ್ಮ ಕಾರಖಾನೆಗಳಲ್ಲಿ ಕೂಲಿಕಾರರು ಹೂಡಿರುವ ಮುಷ್ಕರದಿಂದ ಸರ್ವನಾಶವನ್ನು ಎದುರಿಸಿರುವವರು ಮಾಡಬೇಕೇನು? ಅಂಥ ಒಡೆಯರು ಆ ಸಂಸ್ಥೆಯ ಪೂರ್ಣ ನಿಯಂತ್ರಣವನ್ನು ತಕ್ಷಣ ಮುಷ್ಕರಕಾರರಿಗೆ ಬಿಟ್ಟುಕೊಡಲು ಸಿದ್ಧರಾಗಬೇಕೆಂದು ಸಲಹೆ ಕೊಡಲು ನಾನು ಲೇಶವೂ ಹಿಂಜರಿಯುವದಿಲ್ಲ. ಏಕೆಂದರೆ ಆ ಸಂಸ್ಥೆ ಒಡೆಯರದೆಷ್ಟೋ ಅಷ್ಟೇ ಕೂಲಿಕಾರರದೂ ಆಗಿದೆ. ಒಡೆಯರು ಸಿಟ್ಟಿಗೆದ್ದು ದಿಗ್ಗನೆದ್ದು ಹೊರಟು ಹೋಗದೆ, ತಾವು ಮಾಡುತಿರುವದು ಸರಿಯಾದುದೆಂಬ ಅರಿವಿನಿಂದ ಹೊರಟುಹೋಗಬೇಕು. ತಮ್ಮ ಸೌಹಾರ್ದವನ್ನು ತೋರಿಸುವ ಸಲುವಾಗಿ ಅವರು ಕೂಲಿಕಾರರಿಗೆ ತಮ್ಮ ಯಂತ್ರಜ್ಞರ ಮತ್ತು ಕುಶಲ ಕೆಲಸಗಾರರ ಸಹಾಯವನ್ನೂ ಕೊಡಮಾಡಬೇಕು. ಇದರಿಂದ ತಮಗೇನೂ ಹಾನಿಯಾಗಿಲ್ಲವೆಂದು ಒಡೆಯರಿಗೆ ಕೊನೆಗೆ ಅರಿವಾಗುವದು. ಅವರ ಈ ಯೋಗ್ಯ ಕ್ರಮದಿಂದ ವಿರೋಧಿಗಳ ವಿರೋಧವಳಿದು ಅವರಿಗೆ ತಮ್ಮ ಕೂಲಿಕಾರರ ಹರಕೆ ದೊರೆಯುವದು. ಅವರು ತಮ್ಮ ಬಂಡವಳದ ಯೋಗ್ಯ ಉಪಯೋಗ ಮಾಡಿದಂತಾಗುವದು. ಇಂಥ ಕ್ರಿಯೆ ಉದಾರ ಕ್ರಿಯೆಯೆಂದು ನಾನು ಭಾವಿಸಲಾರೆ. ಇದು ಬಂಡವಳಗಾರರಿಂದ ತಮ್ಮ ಬಂಡವಳದ ವಿಚಾರಪೂರ್ಣ ಉಪಯೋಗವೆಂದೂ ತಮ್ಮ ಕೂಲಿಕಾರರನ್ನು ಗೌರವಾರ್ಹ ಪಾಲುಗಾರರಾಗಿ ಮಾಡಿಕೊಳ್ಳಲು ಅವಶ್ಯವಾದ ಪ್ರಾಮಾಣಿಕ ವ್ಯವಹಾರವೆಂದೂ ನಾನು ಹೇಳುವೆ.

ಉರುಳಿ, ಮೋ. ಕ. ಗಾಂಧಿ

೨೩—೩—೪೬

ಗಾಂಧೀಜಿಯ ಸಮಷ್ಟಿವಾದ

ತಮ್ಮ ಕಮ್ಯುನಿಸ್ಟ (ಸಮಷ್ಟಿವಾದಿ) ಮತ್ತು ಸಾಮ್ಯವಾದಿ ಗೆಳೆಯರೊಂದಿಗೆ ಮಾತನಾಡುವಾಗ ಎಷ್ಟೋ ಸಾರೆ ಗಾಂಧೀಜಿ ಅವರಿಗಿಂತ ತಾವೇ ದೊಡ್ಡ ಸಾಮ್ಯವಾದಿ ಅಥವಾ ಸಮಷ್ಟಿವಾದಿಯೆಂದು ಹೇಳಿಕೊಂಡದ್ದುಂಟು- ಅವರಿಬ್ಬರ (ಗಾಂಧೀಜಿ ಮತ್ತು ಗೆಳೆಯರ) ಗುರಿಯೂ ಒಂದೇ. ಆದರೆ ಸಾಧನ ಮತ್ತು ತಂತ್ರ ಇವುಗಳ ವಿಷಯದಲ್ಲಿ ಮೂಲಭೂತ ಭೇದವುಂಟು. ಸಮಾಜದ ಸ್ವರೂಪವನ್ನು ಹಿಂಸೆ ಮತ್ತು ಅಸತ್ಯದಿಂದ ಪರಿವರ್ತಿಸುವದು ಗಾಂಧೀಜಿಗೆ ಒಗ್ಗುವದಿಲ್ಲ. ಏಕೆಂದರೆ ಅದರಿಂದ ಹಿಂದುಸ್ತಾನದ ಮೂಕ ಜನಕೋಟಿಯ ಕಲ್ಯಾಣವಾಗುವಂತಿಲ್ಲವೆಂದು ಅವರಿಗೆ ಗೊತ್ತಿದೆ. ಆಗಾಖಾನ ಅರಮನೆಯಲ್ಲಿ ಬಂದಿಯಾಗಿದ್ದಾಗ ಗಾಂಧೀಜಿ ಸಮಷ್ಟಿವಾದಿ ಸಾಹಿತ್ಯವನ್ನು ಅಭ್ಯಸಿಸಿದರು. ಅವರ ಬುದ್ಧಿ ವೈಜ್ಞಾನಿಕ ಪ್ರವೃತ್ತಿಯದು. ಆದುದರಿಂದ ಗೆಳೆಯರೊಡನೆ ಸಂಭಾಷಣೆಗಳಿಂದ ಅಥವಾ ಎಂದಾದರೊಮ್ಮೆ ಓದಿದ್ದರಿಂದ ಗಳಿಸಿದ ಸಮಷ್ಟಿವಾದ ಸಾಮ್ಯವಾದಗಳ ಪರಿಜ್ಞಾನದಿಂದ ಅವರಿಗೆ ತೃಪ್ತಿಯಾಗಿರಲಿಲ್ಲ. "ಡಾಸ್ ಕ್ಯಾಪಿಟಲ್" ಪುಸ್ತಕವನ್ನು ಅವರು ಓದಿದರು. ಅಂತೆಯೆ ಮಾರ್ಕ್ಸನ ಇತರ ಕೆಲವು ಗ್ರಂಥಗಳನ್ನೂ ಎಂಜಲ್ಸ, ಲೆನಿನ್, ಸ್ಟಾಲಿನ್ನರ ಕೃತಿಗಳನ್ನೂ ಅವರು ಓದಿದರು. ಚೀನದಲ್ಲಿರುವ ಕಮ್ಯುನಿಸ್ಟರ ಸಂಬಂಧದಲ್ಲಿಯೂ ಅವರು ಕೆಲ ಪುಸ್ತಕಗಳನ್ನೋದಿದರು. ಇದೆಲ್ಲದರ ಕೊನೆಗೆ ತಮ್ಮ ಕಲ್ಪನೆಯ ಸಮಷ್ಟಿವಾದ ಮಾತ್ರವೇ ಸಂಕಷ್ಟಕ್ಕೀಡಾದ ಮಾನವ ಕೋಟಿಗೆ ಸಮಾಧಾನವನ್ನು ತರಬಲ್ಲದೆಂಬದು ಅವರಿಗೆ.ಎಂದಿಗಿಂತಲೂ ಹೆಚ್ಚು ಖಚಿತವಾಯಿತು-ಅವರ ಆಶ್ರಮದಲ್ಲಿಯೂ ಅವರ ನಿರ್ದೇಶ, ಸ್ಫೂರ್ತಿಗಳಿಂದ ನಡೆಯುತ್ತಿರುವ ಸಂಸ್ಥೆಗಳಲ್ಲಿಯೂ ಮುಖ್ಯ ಸೂತ್ರವಿದು: "ಪ್ರತಿಯೊಬ್ಬನಿಂದಲೂ ಅವನ ಶಕ್ತ್ಯನುಸಾರ ಪಡೆದು ಪ್ರತಿಯೊಬ್ಬರಿಗೂ ಅವನ ಅವಶ್ಯಕತಾನುಸಾರ ಕೊಡುವದು." ಈ ಪ್ರಕಾರ ಅವರ ಆಶ್ರಮಗಳೆಂದರೇ ಸಮಷ್ಟಿವಾದದ ಪ್ರಯೋಗ ಭೂಮಿಗಳು. ಮಾತ್ರ, ಅಹಿಂಸೆಯ ತಳಹದಿಯಲ್ಲಿ, ಹಿಂದೀ ಗ್ರಾಮಗಳ ಸನ್ನಿವೇಶದಲ್ಲಿ. ಸೇವಾಗ್ರಾಮದಲ್ಲಿನ ನಿವಾಸಿಗಳು ಹಳ್ಳಿಗರ ಕೃಪೆಯಿಂದಲೇ ಅಲ್ಲಿದ್ದಾರೆಂಬ ತತ್ವವನ್ನು ಅಲ್ಲಿ ಅನುಸರಿಸಲಾಗುತ್ತಿದೆ. ಯಾರೋ ಒಬ್ಬ ಜಗಳಗಂಟನು ತನಗೆ ಯಾವ ಹಕ್ಕಿಲ್ಲದಿದ್ದರೂ ಕೆಲ ಆಶ್ರಮ ವೃಕ್ಷಗಳನ್ನು ಉರುವಲಿಗಾಗಿ ಕಡಿದನು. ಇನ್ನೊಬ್ಬನು ತನ್ನ ಹೊಲದ ಮೂಲಕ ಆಶ್ರಮಕ್ಕೆ ಹೋಗುವ ದಾರಿಯ ಹಕ್ಕಿನ ಮೇಲೆ, ಅದಕ್ಕಾಗಿ ತಾನು ಮೊದಲೇ ಪರಿಹಾರವನ್ನು ಪಡೆದಿದ್ದರೂ,-ಅತಿಕ್ರಮಣ ಮಾಡಿದನು. ಆದರೆ ಯಾವ ಕಾಯಿದೆ ಮೂಲಕ ಪರಿಹಾರಕ್ಕೂ ಪ್ರಯತ್ನಮಾಡಲ್ಪಡಲಿಲ್ಲ. ಬದಲಿಗೆ ಒಂದು ಪ್ರಕಟನೆ ಹೊರಡಿಸಲಾಯಿತು-ಆಶ್ರಮವಾಸಿಗಳು ಹಳ್ಳಿಗರ ಸೇವೆಗಾಗಿಯೆ ಅಲ್ಲಿರುವರು. ಅವರಿಗೆ ಸೇವೆ ಬೇಡವೆಂದಾದರೆ ಆಶ್ರಮವಾಸಿಗಳು ಬೇರೆ ಕಡೆ ಹೊರಟು ಹೋಗುವರು, ಎಂದು. ಕೊನೆಗೆ ಕೀಟಲೆಗಾರರನ್ನು ಅವರ ಗ್ರಾಮಬಂಧುಗಳು ಮನವೊಲಿಸಿ ನ್ಯಾಯವಾಗಿ ನಡೆದುಕೊಳ್ಳುವಂತೆ ಮಾಡಿದರು. ಸಾಬರಮತಿ ಆಶ್ರಮದಲ್ಲಿ ಸ್ತ್ರೀ-ಆಶ್ರಮವಾಸಿಗಳು ತಮ್ಮ ಮನೆವಾರ್ತೆಯ ಅಡಿಗೆ ಮನೆಗಳನ್ನೆಲ್ಲ ಸಾಮೂಹಿಕ ಅಡಿಗೆ ಮನೆಯಲ್ಲಿ ಸೇರಿಸಿಬಿಟ್ಟು ಅದನು ಸಾಗಿಸಿಕೊಂಡು ಹೋದರು; ಮಾತ್ರವಲ್ಲ, ತಮ್ಮ ಕುಟುಂಬಕ್ಕೆ ಸೇರದ ಮಕ್ಕಳನ್ನು ಕುಟುಂಬದಲ್ಲಿ ಸೇರಿಸಿಕೊಂಡು ಸಲಹುವದಕ್ಕೂ ತಮ್ಮ ಮಕ್ಕಳು ಮರಿಗಳನ್ನು ಇತರರ ಪಾಲನೆಗೆ ಬಿಟ್ಟು ಬಿಡುವದಕ್ಕೂ ಅವರನ್ನು ಮನವೊಲಿಸಲಾಗಿತ್ತು. ಅಡ್ಡ ಗೋಡೆಗಳನ್ನು ಕಿತ್ತುಹಾಕಿ ಹೆಂಗಸರನ್ನು ವಿಮೋಚನೆಗೊಳಿಸಿದರೂ ಕೌಟುಂಬಿಕ ಜೀವನದ ವಿಘಟನೆಯಾಗದಂತೆ ನೋಡುವ ಒಂದು ಪ್ರಯೋಗವಾಗಿತ್ತು ಅದು—ಅದೊಂದು ಅರಾಜಕತೆಯಿಲ್ಲದ ಕ್ರಾಂತಿಯೇ ಆಗಿತ್ತು. ೧೦೦ ಕ್ಕೂ ಹೆಚ್ಚು ಜನರ ಹೊಟ್ಟೆ ಹೊರೆಯುತ್ತಿರುವ ತಾಲಿಮೀ ಸಂಘದ ಸಾಮೂಹಿಕ ಅಡಿಗೆಮನೆಯಲ್ಲಿ ಉಂಡ ನಂತರ ಒಬ್ಬ ಗೆಳೆಯರು ವಿನೋದದಲ್ಲಿ ಹೇಳಿದಂತೆ "ಗಾಂಧೀಜಿ ಇದನ್ನು "ರಸೋದಾ" (ಅಡಿಗೆ ಮನೆ)ಯೆಂದು ಕರೆಯುತ್ತಾರೆ; ಅದು ಬಹಳ ಸರ್ವಸಾಧಾರಣವೆಂದು ಅನಿಸುತ್ತದೆ; ಕಮ್ಯೂನಿಸ್ಟರಾದರೆ ಅದನ್ನು "ಕಮ್ಯೂನ್" (ಸಮಷ್ಟಿ) ಎಂದು ಕರೆಯುತಿದ್ದರು ಮತ್ತು ಎಲ್ಲರೂ ಅದರಿಂದ ಆಕೃಷ್ಟರಾಗುತಿದ್ದರು."

ಆರ್ಥಿಕ ಸಮಾನಿಕತೆಯ ಅರ್ಥ

"ಆರ್ಥಿಕ ಸಮಾನಿಕತೆಯೆಂದರೆ ನಿಮ್ಮ ಅರ್ಥವೇನು?" ಎಂದು ಗಾಂಧೀಜಿಯನ್ನು ಅವರ ಮದ್ರಾಸ್ ಸಂಚಾರದ ಸಮಯ ಜರಗಿದ ವಿಧಾಯಕ ಕಾರ್ಯಕರ್ತರ ಸಮ್ಮೇಲನದಲ್ಲಿ ಕೇಳಲಾಯಿತು. "ಮತ್ತು ನೀವು ಕಲ್ಪಿಸಿದ ಶಾಸನಬದ್ಧ ವಿಶ್ವಸ್ತಿಕೆಯೆಂದರೇನು?"

ಪ್ರತಿಯೊಬ್ಬನಿಗೂ ಅಷ್ಟೇ ಹಣ ದೊರೆಯಬೇಕೆಂದು ತಮ್ಮ ಕಲ್ಪನೆಯ ಆರ್ಥಿಕ ಸಮಾನತೆಯ ಅರ್ಥವಲ್ಲವೆಂದು ಗಾಂಧೀಜಿ ಉತ್ತರಿಸಿದರು. ಪ್ರತಿಯೊಬ್ಬನ ಅಥವಾ ಒಬ್ಬಳ ಅವಶ್ಯಕತೆಗೆ ಸಾಗುವಷ್ಟು ಅವರವರಿಗೆ ದೊರೆಯಬೇಕೆಂದಿಷ್ಟೆ ಅದರ ಅರ್ಥ. ಉದಾಹರಣೆಗಾಗಿ ಗಾಂಧೀಜಿಗೆ ಚಳಿಗಾಲದಲ್ಲಿ ಎರಡು ಶಾಲುಗಳು ಬೇಕಾಗುತ್ತವೆ. ಆದರೆ ಅವರ ಮೊಮ್ಮಗನಾದ ಮತ್ತು ಮಗನಂತೆಯೇ ಇರುವ ಕನು ಗಾಂಧಿಗೆ ಒಂದು ಬೆಚ್ಚನ್ನ ಬಟ್ಟೆಯೂ ಬೇಕಾಗುವದಿಲ್ಲ. ಗಾಂಧೀಜಿಗೆ ಆಡಿನ ಹಾಲು, ಕಿತ್ತಳೆ ಮತ್ತು ಇತರ ಹಣ್ಣುಗಳು ಬೇಕಾಗುವವು. ಕನೂಗೆ ಸಾಧಾರಣ ಆಹಾರವೇ ಸಾಗುತ್ತದೆ. ಕನುವನ್ನು ಕಂಡು ಗಾಂಧೀಜಿಗೆ ಅಸೂಯೆಯೆನಿಸುತ್ತದೆ. ಆದರೆ ಫಲವೇನು? ಕನೂ ಯುವಕ, ಅವರು ೭೬ ವರ್ಷದ ಮುದುಕ. ಅವರ ತಿಂಗಳ ಆಹಾರದ ವೆಚ್ಚ ಕನೂನ ವೆಚ್ಚಕ್ಕಿಂತ ಎಷ್ಟೋ ಹೆಚ್ಚು. ಆದರೆ ಅದರಿಂದ ಅವರಿಬ್ಬರಲ್ಲಿ ಆರ್ಥಿಕ ವಿಷಮತೆಯಿದೆಯೆಂದು ಅರ್ಥವಲ್ಲ. ಆನೆಗೆ ಇರುವೆಗಿಂತ ಸಾವಿರಪಾಲು ಆಹಾರ ಬೇಕಾಗುತ್ತದೆ. ಆದರೆ ಅದು ಅವೆರಡರಲ್ಲಿ ಸಮಾನತೆಯಿಲ್ಲವೆಂದು ಸಿದ್ಧಮಾಡುವದಿಲ್ಲ. ಆದುದರಿಂದ ಆರ್ಥಿಕ ಸಮಾನತೆಯ ನಿಜವಾದ ಅರ್ಥವೆಂದರೆ "ಪ್ರತಿಯೊಬ್ಬಗೂ ಅವನ ಅವಶ್ಯಕತಾನುಸಾರ'' ಎಂಬುದೇ. ಮಾರ್ಕ್ಸನ ವ್ಯಾಖ್ಯಾನವೂ ಅದೇ. ಒಂಟಿಗನೊಬ್ಬನು ಹೆಂಡತಿ ಮತ್ತು ನಾಲ್ಕು ಮಕ್ಕಳುಳ್ಳ ಇನ್ನೊಬ್ಬನಷ್ಟೆ ಬೇಡಿದರೆ ಅದು ಆರ್ಥಿಕ ಅಸಮಾನತೆಯ ಭಂಗ.

"ಉಚ್ಚ ವರ್ಗದವರಿಗೂ ಸಾಮಾನ್ಯ ಜನರಿಗೂ ಮತ್ತು ಅರಸರಿಗೂ ರಿಕ್ತರಿಗೂ ಇರುವ ಕಣ್ಣಿಗೆ ಒತ್ತುವ ತಾರತಮ್ಯವನ್ನು ನ್ಯಾಯವೆಂದು ಸಾಧಿಸಲು ಇವರಿಗೆ ಅವರಿಗಿಂತ ಹೆಚ್ಚು ಬೇಕಾಗುವದೆಂಬ ವಾದವನ್ನು ಮಾತ್ರ ಯಾರೂ ಹೂಡದಿರಲಿ. ಅದು ಸೋಮಾರಿಯ ಕುತರ್ಕವಾದೀತು. ನನ್ನ ತತ್ವಕ್ಕೆ ಅದು ವಿರುದ್ಧವಾದುದು'' ಎಂದು ಗಾಂಧೀಜಿ ಮುಂದರಿಸಿದರು. "ಬಡವರಿಗೂ ಬಲ್ಲಿದರಿಗೂ ಇಂದು ಇರುವ ತಾರತಮ್ಯವನ್ನು ಕಂಡು

—೧೦ನೇ ಪುಟ ನೋಡಿರಿ

ಪ್ರಶ್ನೆ—ಪೆಟ್ಟಿಗೆ

ಪ್ರಶ್ನೆ— ಸ್ಥಳಿಕ ಕಾಂಗ್ರೆಸ್ ಸಮಿತಿಗಳು ಪರಿಣಾಮಕಾರಕವಾದ ರೀತಿಯಲ್ಲಿ ಕಾರ್ಯ ಮಾಡಲು ನಿರಾಕರಿಸಿದರೆ ಏನು ಮಾಡಬೇಕು ?

ಉತ್ತರ— ನಿಜ ಕಾಂಗ್ರೆಸ್‌ನಿಷ್ಠ ವ್ಯಕ್ತಿಯು ಇಂಥ ಪರಿಸ್ಥಿತಿಯಲ್ಲಿ ಕೇವಲ ಸೇವಾಭಾವನೆಯಿಂದ ತಾನೊಬ್ಬನೆ ಇಲ್ಲವೆ ಬೇರೆಯವರೊಡನೆ ಸಹಕರಿಸಿ ಕಾರ್ಯಮಾಡಿ ಅದರ ಶ್ರೇಯಸ್ಸನ್ನೆಲ್ಲ ಕಾಂಗ್ರೆಸ್ ಸಂಸ್ಥೆಗೆ ಕೊಡತಕ್ಕದ್ದು. ಅನೇಕ ಜನರು ಹೀಗೆಯೆ ನಡೆಯುತ್ತ ಹೋದರೆ ಕಾಂಗ್ರೆಸ್ ಸಂಸ್ಥೆ ದಿನದಿನಕ್ಕೆ ಅಭಿವೃದ್ಧಿಹೊಂದುತ್ತ ಹೋಗುವದು. ಆಲಸಿಗ ಕಾರ್ಯಕರ್ತರು ನಾಚಿಕೆಯಿಂದ ಪರಿಣಾಮಕಾರಕವಾದ ರೀತಿಯಲ್ಲಿ ಕಾರ್ಯಮಾಡಹತ್ತುವರು. ಕಾಂಗ್ರೆಸ್ ಸಂಸ್ಥೆ ಯಾವಾಗಲೂ ನಿರ್ದುಷ್ಟ ಮತ್ತು ಸುಸಂಘಟಿತ ಉಳಿಯುವದು. 'ಸೇವಾಭಾವನೆಯಿಂದ' ಎಂಬ ವಾಕ್ಯಾರ್ಥವು ಅತ್ಯಂತ ಮಹತ್ವದ್ದು. ದಂಭಕ್ಕಾಗಿ ಮಾಡಿದ ಕೆಲಸ ಪರಿಣಾಮಕಾರಕವಾದರೂ ಆಕ್ರಮಣಶೀಲನಿಗೆ ಕದಾಚಿತ ಅದರ ಶ್ರೇಯಸ್ಸು ಮುಟ್ಟಬಹುದು. ಇದರಿಂದ ಕಾಂಗ್ರೆಸ್ಸಿಗೆ ಹಾನಿ. ಕೊನೆಗೆ ಆ ಆಕ್ರಮಣಶೀಲನೂ ಹಾನಿಗೊಳಗಾಗುವನೆಂಬದನ್ನು ಒತ್ತಿ ಹೇಳಬೇಕಿಲ್ಲ.

ಪ್ರಶ್ನೆ... ತನ್ನ ಕಾರ್ಯಕ್ಷೇತ್ರವಲ್ಲದ ಪ್ರದೇಶದಲ್ಲಿ ಇಂಥದೊಂದು ಪರಿಸ್ಥಿತಿ ಕಾಂಗ್ರೆಸ್ಸಿಗನನ್ನೆದುರಿಸಿದರೆ ಅವನು ಯಾವ ರೀತಿ ಕೆಲಸ ಮಾಡಬೇಕು ?

ಉತ್ತರ— ಕಾರ್ಯಕ್ಷೇತ್ರದ ವಿಭಾಗ ಮಾಡಿಕೊಟ್ಟದ್ದು ಕೇವಲ ದುರ್ಬಲರಿಗಾಗಿ ಮಾತ್ರ. ಪ್ರಬಲ ಕಾಂಗ್ರೆಸ್ಸಿಗನು ಇಡೀ ಹಿಂದುಸ್ತಾನವನ್ನೆ ಕಾರ್ಯಕ್ಷೇತ್ರವನ್ನಾಗಿಟ್ಟುಕೊಳ್ಳಬಹುದಾಗಿದೆ. ಅವನ ಆವಶ್ಯಕತೆಯಿದ್ದ ಕ್ಷೇತ್ರದಲ್ಲಿ ಪ್ರತಿಸಲ ಅವನನ್ನು ಕಾಣಬಹುದು. ಆಗಂತುಕ ಇಲ್ಲವೆ ಆಕ್ರಮಕನೆಂದು ಯಾರೂ ಭಾವಿಸದಿರುವದು ಸ್ವಾಭಾವಿಕ. ಸೇವಾಭಾವನೆಗೆ ಎಲ್ಲಿಯೂ ಪ್ರಾಶಸ್ತ್ಯವಿದೆ. ತನ್ನ ಕಾರ್ಯಕ್ಷೇತ್ರವಲ್ಲದ ಪ್ರದೇಶದಲ್ಲಿ ಯಾವನೊಬ್ಬ ಕಾರ್ಯಕರ್ತ ಹೋದನೆಂದು ತಿಳಿಯುವಾ. ಅಲ್ಲಿ ಇಬ್ಬರುಗಳಲ್ಲಿ ಬಡಿದಾಟ ನಡೆದಿದ್ದರೆ, ಅವನು ತನ್ನ ಜೀವಕ್ಕೆ ಗಂಡಾಂತರದ ಪ್ರಸಂಗವಿದ್ದರೂ ಲೆಕ್ಕಿಸದೆ ಮುನ್ನುಗ್ಗಿ ಅವರಿಬ್ಬರ ಕಲಹವನ್ನು ತೀರಿಸಬೇಕು. ಈ ಗೊಂದಲ ತನ್ನ ಕಾರ್ಯಕ್ಷೇತ್ರದಲ್ಲಿ ನಡೆದಿಲ್ಲೆಂಬ ಕಾರಣದಿಂದ ಅವನು ಆ ಜಗಳ ಬಗೆಹರಿಸಲು ಮುಂದೆ ಬಾರದಿರುವದು ಉಪಹಾಸ್ಯವಾಗಿದೆಯಲ್ಲದೆ ಹೇಡಿತನದ ಲಕ್ಷಣವೂ ಆಗಿದೆ.

ಪ್ರಶ್ನೆ— ಹೊಟ್ಟೆಪಾಡಿಗಾಗಿ ದುಡಿಯುವ ಕಾಂಗ್ರೆಸ್ ಕಾರ್ಯಕರ್ತನು ಪಾರ್ಲಮೆಂಟರಿ ಚಟುವಟಿಕೆಗಳನ್ನು ಮಾಡುವಾಗಲೆ ಕಾಂಗ್ರೆಸ್ಸಿನ ಸಂಘಟನ ಮತ್ತು ರಚನಾತ್ಮಕ ಕಾರ್ಯ ಮಾಡಬಲ್ಲನಷ್ಟೆ ?

ಉತ್ತರ— ಒಂದೇ ಕಾಲಕ್ಕೆ ಎಲ್ಲ ವಿಷಯಗಳನ್ನು ಪರಿಣಾಮಕಾರಕ ಮಾಡುವ ಆಧುನಿಕ 'ಭೀಮ' ಅವನಾಗಬೇಕು. ಯೋಗ್ಯ ತರಬೇತಿ ಹೊಂದಿದ ಕಾರ್ಯಕರ್ತರು ಮತ್ತು ಕಾರಕೂನರ ಸಹಾಯದಿಂದ ಒಬ್ಬನೇ ಇವೆಲ್ಲ ಖಾತೆಗಳ ವ್ಯವಸ್ಥೆ ನೋಡುವದು ಶಕ್ಯವಿದೆಂದು ನನಗನಿಸುತ್ತದೆ. ಆದರೆ ಈ ಪ್ರಶ್ನೆಯು ಮುನ್ನೆ ಸಂಪೂರ್ಣ ಬೇರೆ ಬಗೆಯಾಗಿದೆ. ಶ್ರಮವಿಭಾಗ ಅವಶ್ಯ. ಒಬ್ಬನೆ ಎಲ್ಲವನ್ನು ಮಾಡುವದು ಯಾವಾಗಲೂ ಅನಿಷ್ಟ ಮತ್ತು ಸಂಸ್ಥೆಯ ಪ್ರಗತಿಗೆ ಪ್ರತಿಬಂಧಕ. ಬ್ರಿಟನ್‌ದಲ್ಲಿಯ ಅರಸೊತ್ತಿಗೆ ವೈಯಕ್ತಿಕವಲ್ಲ 'ಅರಸನು ಮೃತನಾಗಿರುವನು, ಅರಸನು ಚಿರಾಯುವಾಗಲಿ' ಅಂತೆಯೆ ಅರಸನು ಅಪರಾಧ ಮಾಡಲಾರನೆಂಬ ನಾಣ್ಣುಡಿ. ಅರಸನು ವ್ಯಕ್ತಿಶಃ ದುರ್ಜನನಿರಬಹುದು, ಆದರೆ ಅರಸೊತ್ತಿಗೆಯಲ್ಲಿ ಮೂರ್ತಿಮಂತನಾದಾಗ ಅವನು ಪರಿಪೂರ್ಣನಾಗುವನು. ಈ ಪರಿಪೂರ್ಣ ಶಬ್ದದ ಅರ್ಥವು ಆಯಾ ಸನ್ನಾಹಕ್ಕನುಗುಣವಾದುದಿದೆ. ಪ್ರಾರಂಭದಲ್ಲಿ ಅಧಿಕಾರದಲ್ಲಿನ ಮನುಷ್ಯ ಎಷ್ಟೇ ಅಯೋಗ್ಯನಿದ್ದರೂ ಯಾವನೇ ಪ್ರಗತಿಪರ ಸಂಸ್ಥೆಯಲ್ಲಿ ಅವನು ಯಾವಾಗಲೂ ಶ್ರೇಷ್ಠದರ್ಜೆಯಲ್ಲುಳಿಯುವನು. ಅವನು ಸಂಸ್ಥೆಗೇ ಪ್ರಥಮ ಸ್ಥಾನ ಕೊಡಬೇಕಲ್ಲದೆ ತನ್ನ ವ್ಯಕ್ತಿತ್ವಕ್ಕಲ್ಲ. ದುರ್ಜನರ ಮೂಲಕ ಕಾರ್ಯವನ್ನು ಸಂಘಟಿಸಿದ್ದಾದರೆ ಆ ಸಂಘಕ್ಕೆ ಯಾವಾಗಲೂ ದುರ್ಜನರೆ ಅಧ್ವರ್ಯುಗಳಾಗಿ ಲಭಿಸುವರು.

ಪ್ರಶ್ನೆ— ೧೯೪೨ ನೇ ಅಗಸ್ಟ ಚಳವಳಿಯು ಸಾರ್ವಜನಿಕರ ಮನಸ್ಸಿನಲ್ಲಿ ಬದಲಾವಣೆಯನ್ನುಂಟುಮಾಡಿದೆ. ದಿನಾಚರಣೆ ಮುಂತಾದ ಸಂಬಂಧದಲ್ಲಿ ಅವರು ಕಾಂಗ್ರೆಸ್ಸಿನ ಆಜ್ಞೆಯ ದಾರಿಯನ್ನೇ ನೋಡುವದಿಲ್ಲ ಸ್ವಯಂಸ್ಫೂರ್ತಿಯಿಂದ ನಡೆಸುವರು ಇಂಥ ಪ್ರಸಂಗಗಳ ಲಾಭವನ್ನು ಉಳಿದ ಪಕ್ಷಗಳು ತೆಗೆದುಕೊಂಡು ಅದರ ಜತೆ ತಮ್ಮ ಕಾರ್ಯಕ್ರಮವನ್ನೂ ಕೂಡಿಸುವರು. ಆದರೆ ಅಧಿಕೃತ ಕಾಂಗ್ರೆಸ್ ಸಮಿತಿಗಳು ಮಾತ್ರ ಏನೂ ಮಾಡದೆ ನಿಷ್ಕ್ರಿಯ ಉಳಿಯುವವು. ಅಲ್ಲದೆ ಕಾಂಗ್ರೆಸ್ ವರ್ಕಿಂಗ್ ಕಮೀಟಿಯವರು ಹಾಕಿಕೊಟ್ಟ ಕಾರ್ಯಕ್ರಮ ಮತ್ತು ಧೋರಣವನ್ನು ಪ್ರಾಂತಿಕ ಸಮಿತಿಗಳು ಅನೇಕ ಸಲ ಅಕ್ಷರಶಃ ಪಾಲಿಸದಿದ್ದುದು ಇಲ್ಲವೆ ಅರೆಮನಸ್ಸಿನಿಂದ ಆಚರಿಸಿದ್ದು ಕಂಡುಬಂದುದುಂಟು. ಅಧಿಕೃತವಾಗಿ ತಮಗೆ ಸೂಚನೆ ಬರುವ ವರೆಗೆ ಉಪಸಮಿತಿ ಮುಂತಾದವುಗಳನ್ನು ಸ್ಥಾಪಿಸಿಕೊಂಡು ಕಾರ್ಯಮಾಡಲು ಕೆಲ ಸಮಿತಿಗಳು ಒಪ್ಪುವದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಕಾಂಗ್ರೆಸ್ಸಿಗನು ಏನು ಮಾಡತಕ್ಕದ್ದು.

ಉತ್ತರ— ಇದೊಳ್ಳೆ ಪ್ರಶ್ನೆ. ೧೯೪೨ ನೇ ಅಗಸ್ಟದಿಂದ ಕಾಂಗ್ರೆಸ್ಸಿಗನು ತಮ್ಮಷ್ಟಕ್ಕೆ ತಾವೆ ಕಾರ್ಯಮಾಡಲು ಕಲಿತಿದ್ದರೆ, ಅದು ಅತ್ಯಂತ ಸಂತೋಷದ ಸಂಗತಿ. ಆದರೆ ಅದರಲ್ಲಿ ನನ್ನ ನಂಬಿಕೆ ಇಲ್ಲ. ತಮ್ಮಷ್ಟಕ್ಕೆ ತಾವೇ ವಿಚಾರ ಮಾಡುವವರೇ ಆ ರೀತಿ ಕಾರ್ಯಮಾಡಬಲ್ಲರು. ಹಾಗೆ ಮಾಡುವಾಗ ಅವರು ತಪ್ಪು ಮಾಡಿದರೂ ಏದೆಗುಂದುವದಿಲ್ಲ. ಮಗು ನಡೆಯಲು ಕಲಿಯುವಾಗ ಅನೇಕ ಸಲ ತಪ್ಪು ಹೆಜ್ಜೆ ಇಡುತ್ತದೆ. ತಾನಾಗಿಯೆ ಬರುವ ಯಾವದಾದರೊಂದು ಕಾರ್ಯಕ್ರಮದಲ್ಲಿ ಯಾವನಾದರೂ ಭಾಗವಹಿಸಿದರೆ ಆ ಪ್ರಯತ್ನವು ಸ್ವಸ್ಫೂರ್ತಿಯಿಂದ ಬಂದುದಾಗಲಿಲ್ಲ ಇಲ್ಲವೆ ವೈಯಕ್ತಿಕವೂ ಉಳಿಯಲಾರದು. ಕಾಂಗ್ರೆಸ ಸಂಸ್ಥೆಯು ಕಾರ್ಯಕ್ಕೆ ವ್ಯವಸ್ಥೆಯು ಬಂದು ಸಲಹೆ ಸೂಚನೆಗಳನ್ನು ಕೊಡವ ಪರಿಸ್ಥಿತಿಯಿಲ್ಲದಾಗ ಪ್ರತಿಯೊಬ್ಬ ಕಾಂಗ್ರೆಸ್ಸಿಗ ತನಗೆ ಸಮರ್ಪಕ ರೀತಿಯಲ್ಲಿ ಕಾರ್ಯಮಾಡಬಹುದೆಂಬುದು ಅಗಸ್ಟ ಗೊತ್ತುವಳಿಯ ತಿರುಳು. ಎರಡನೆಯ ಮನುಷ್ಯನ ಇಲ್ಲವೆ ಗುಂಪಿನ ಅಥವಾ ಪಕ್ಷದ ಅಟ್ಟದ ಕೈಗೊಂಬೆಯಾಗುವವನಕ್ಕೂ ಮೇಲೆ ವಿವರಿಸಿದ್ದಕ್ಕೂ ಬಹಳ ವ್ಯತ್ಯಾಸವಿದೆ.

ಕಾಂಗ್ರೆಸ್ಸಿಗ ಸ್ವತಂತ್ರ ರೀತಿಯಿಂದ ವಿಚಾರ ಮಾಡಿ ಕಾರ್ಯಮಾಡಬೇಕೆಂಬ ಪಾಠವನ್ನು ೧೯೪೨ ನೇ ಚಳವಳಿ ಕಲಿಸಲಿಲ್ಲೆಂಬುದು ಪ್ರಶ್ನೆಯ ಎರಡನೆ ಭಾಗದಿಂದ ಗೊತ್ತಾಗುವದು. ಆ ಪಾಠವನ್ನು ಅವರು ನಿಜವಾಗಿ ಮತ್ತು ಚೆನ್ನಾಗಿ ಕಲಿತಿದ್ದರೆ ಕಾಂಗ್ರೆಸ್ ವರ್ಕಿಂಗ್ ಕಮೀಟಿಯವರು ಹಾಕಿಕೊಟ್ಟ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಮತ್ತು ಅಂತಃಕರಣಪೂರ್ವಕವಾಗಿ ಆಚರಿಸುತ್ತಿದ್ದರು. ಇಡೀ ಸಂಸ್ಥೆ ಒಟ್ಟಾರೆ ಕೂಡಿಕೊಂಡು ಒಬ್ಬ ಮನುಷ್ಯನಂತೆ ಕಾರ್ಯಮಾಡುವಂತೆ ಪ್ರಾಂತಿಕ ಸಮಿತಿ ಮತ್ತು ಉಳಿದೆಲ್ಲ ಘಟಕಗಳು ಸ್ವಸ್ಫೂರ್ತಿಯಿಂದ ಬೆಂಬಲ ಕೊಡುತ್ತಿದ್ದವು. ೧೯೪೨ ರಲ್ಲಿ ನಾನು ಹೀಗೆಯೇ ಅಪೇಕ್ಷಿಸಿದೆ. ಅದು ಹಾಗೆ ಪರಿಪೂರ್ತಿ ಹೊಂದಲಿಲ್ಲೆಂಬುದು ಇತಿಹಾಸದ ವಿಷಯವಾಗಿದೆ. ಸರಕಾರದವರು ಎಷ್ಟೇ ಛಲಸಿದರೂ ಜನರು ನಿಷ್ಕ್ರಿಯರಾಗದೆ ಹೇಗಾದರೂ ಕಾರ್ಯತತ್ಪರರಾಗಿದ್ದರೆಂಬುದು ಅವರಿಗೆ ಭೂಷಣಪ್ರದವಾಗಿದೆ. ಆ ಗೊತ್ತುವಳಿಯಲ್ಲಿ ಸ್ಪಷ್ಟವಾಗಿ ಹೇಳಿದಂತೆ ಅವರು ಅಹಿಂಸಾ ಧೋರಣವನ್ನು ಸಂಪೂರ್ಣವಾಗಿ ಅನುಸರಿಸಿದ್ದರೆ ಅವರಿಗೆ ಅದೆಷ್ಟು ಹೆಚ್ಚು ಭೂಷಣವಾಗುತ್ತಿತ್ತು ! ನನ್ನ ವಾದಸರಣಿ ಸರಿಯಿದ್ದರೆ, ನನೆಯುವನ ಕೃತಿಯತ್ತ ಗಮನಿಸದೆ ಪ್ರತಿಯೊಬ್ಬ ಸುಜ್ಞ ಕಾಂಗ್ರೆಸ್ಸಿಗ ವರ್ಕಿಂಗ ಕಮೀಟಿಯ ಗೊತ್ತುವಳಿಗಳನ್ನು ನಿಷ್ಠೆಯಿಂದ ಪಾಲಿಸಬೇಕೆಂದು ಸಿದ್ಧವಾಗುವದು. ಹಾಗಾದರೆ ಸಂಸ್ಥೆಯು ಪ್ರಯತ್ನವಿಲ್ಲದೆ ಅದು ನಿರ್ವೀರ್ಯವಾಗುವದು ಅಪರಿಣಾಮಕಾರಕವಾಗುವದು. ಆ ಸಂಸ್ಥೆಯ ಪ್ರತಿಯೊಬ್ಬ ವ್ಯಕ್ತಿ ತನ್ನ ಸಂಸ್ಥೆಯ ಚಟುವಟಿಕೆಗಳಿಗೆ ತನ್ನನ್ನೆ ಹೊಣೆಗಾರನನ್ನಾಗಿ ಭಾವಿಸುವನು ಅನಂತರ ಸಾವಕಾಶವಾಗಿ ಅದನ್ನು ಸಂವರ್ಧಿಸುವನು.

ಪ್ರಶ್ನೆ— ಪ್ರತ್ಯಪ್ರತ್ಯೇಕವಾಗಿ ಹೂಡಲ್ಪಡುವ ವಿಕೀರ್ಣ ಸಂಪುಗಳಿಗೆ ಕಾಂಗ್ರೆಸ್ಸು ಬೆಂಬಲ ಕೊಡಲಾರದು. ಈ ಪರಿಸ್ಥಿತಿಯಲ್ಲಿ ಕಾಂಗ್ರೆಸ್ಸಿಗರು ಮತ್ತು ಸಾರ್ವಜನಿಕರು ಅವನ್ನು ಕೊನೆಗೊಳಿಸಲು ಯಾವ ಮಾರ್ಗವನ್ನನುಸರಿಸಬೇಕು ?

ಉತ್ತರ— ಕಾಂಗ್ರೆಸ್ ಸಂಸ್ಥೆ ಪರಿಪೂರ್ಣ ಸಂಸ್ಥೆಯಾಗಿದ್ದರೆ ಇಂಥ ವಿಕೀರ್ಣ ಸಂಪುಗಳು ಹೂಡಲ್ಪಡುತ್ತಲೆ ಇಲ್ಲ. ತನ್ನ ಕಕ್ಷೆಯಲ್ಲಿ ಬರುವ ಪ್ರತಿಯೊಂದು ನ್ಯಾಯ್ಯ ಸಂಪಿನ ಹೊಣೆ ಹೊರುವದು ಜನತಾಪ್ರಾತಿನಿಧಿಕ ಸಂಸ್ಥೆಯ ಕರ್ತವ್ಯವಾಗಿದ್ದರಿಂದ ಉಳಿದ ಯಾವದೆ ಬಗೆಯ ಸಂಪು ನ್ಯಾಯ್ಯವಾಗಲಾರದು. ಆದರೆ ದುರ್ದೈವದಿಂದ ಇಂದು ಕಾಂಗ್ರೆಸ್ಸು ಎಷ್ಟೇ ಪ್ರಬಲ ಸಂಸ್ಥೆಯಾಗಿದ್ದರೂ ಆ ಪರಿಪೂರ್ಣಾವಸ್ಥೆಯನ್ನು ಮುಟ್ಟಿರವದಿಲ್ಲ. ಆದರೆ ಪಕ್ಷ ವ್ಯಕ್ತಿಗಳನ್ನು ಲೆಕ್ಕಿಸದೆ ಪ್ರತಿಯೊಂದು ಸಂಪಿನ ಗುಣಾವಗುಣಗಳನ್ನು ಲಕ್ಷಿಸಿಯೆ ಅವುಗಳ ನ್ಯಾಯಾನ್ಯಾಯತೆಯನ್ನು ನಿರ್ಣಯಿಸಬೇಕು. ಸಂಪು ನ್ಯಾಯ್ಯವಾಗಿಲ್ಲೆಂದು ಸಿದ್ಧವಾದ ಕೂಡಲೆ ಕಾಂಗ್ರೆಸ್ಸು ಮತ್ತು ಸಾರ್ವಜನಿಕರು ಘಂಟಾಘೋಷವಾಗಿ ಅದನ್ನು ನಿಷೇಧಿಸಬೇಕು. ಇದರ ಸ್ವಾಭಾವಿಕ ಪರಿಣಾಮವೆಂದರೆ ಸಂಪುಗಾರರು ಸಂಪು ಬಿಟ್ಟು ಮತ್ತೆ ಕೆಲಸಕ್ಕೆ ಹೋಗುವರು. ಸಂಪು ನ್ಯಾಯ್ಯವಾಗಿದ್ದರೆ ಯಾವ ಸಂಘದ ವಿರುದ್ಧ ಸಂಪು ಹೂಡಲಾಗಿದೆಯೊ ಆ ಸಂಘವನ್ನು ನಿಃಸಂದಿಗ್ಧ ಶಬ್ದಗಳಲ್ಲಿ ನಿಷೇಧಿಸಲಿಕ್ಕೆ ಬೇಕು. ಅಶ್ಲೀಲಾರ್ಹ ರೀತಿಯಿಂದ ಇಲ್ಲವೆ ಕುಲಕಂಟಕರನ್ನು ಒಡೆದುಕೊಂಡು ಸಂಪುಗಾರರನ್ನು ಶರಣಾಗತರಾಗುವಂತೆ ಒತ್ತಾಯ ಪಡಿಸಿದ್ದಾದರೆ ಅದನ್ನು ನಿಷೇಧಿಸಲಿಕ್ಕೆ ಬೇಕು.

ಉರುಳಿ ಮೋ. ಕ. ಗಾಂಧಿ

೨೯—೩—೧೯೪೬

ಮತ್ತೊಂದು ಭಾರವೇಕೆ?

'ಈ ವೃದ್ಧಾಪ್ಯದಲ್ಲಿ ನಿಸರ್ಗೋಪಚಾರಕ್ಕೆ ನಾನು ಎಳಸಿದ್ದೇಕೆ?' ಅನೇಕರು ಈ ಪ್ರಶ್ನೆಯನ್ನು ನನಗೆ ಕೇಳುತ್ತಾರೆ ಈಗಾಗಲೇ ನನಗೆ ಕೈತುಂಬ ಕೆಲಸವಿರಲಿಲ್ಲವೆ? ಹೊಸ ಹೊಣೆ ಹೊತ್ತುಕೊಳ್ಳದಷ್ಟು ವೃದ್ಧನಾದಾಗಿರುವದಿಲ್ಲವೆ? ಈಗಾಗಲೇ ಇದ್ದ ಭಾರ ಸಾಲದೆ ಹೊಸ ಭಾರವನ್ನು ನಾನು ಹೊರಬೇಕೆಂದು ಯಾರಾದರೂ ಅಪೇಕ್ಷಿಸುವರೆ? ಇವೆಲ್ಲ ಉಚಿತ ಪ್ರಶ್ನೆಗಳಾಗಿವೆ ಇವುಗಳ ಬಗ್ಗೆ ನಾನು ಯೋಗ್ಯ ರೀತಿಯಿಂದ ವಿಚಾರ ಮಾಡಲಿಕ್ಕೆ ಬೇಕು. ಆದರೆ ಇವೆಲ್ಲ ನನ್ನಲ್ಲಿ ಪ್ರತಿಧ್ವನಿಸುವದಿಲ್ಲ. ತದ್ವಿರುದ್ಧವಾಗಿ ಸಣ್ಣದೊಂದು ಅಂತರ್ಧ್ವನಿಯು ಹೀಗೆ ಹೇಳುತ್ತದೆ 'ಎರಡನೆಯವರ ಮಾತುಗಳಿಂದ ತಲೆ ಏಕೆ ಕೆಡಿಸಿಕೊಳ್ಳುವಿ? ಡಾ. ದಿನಶಾ ಮೆಹ್ತಾರಂಥ ಗೆಳೆಯರನ್ನು ನಾನು ನಿನಗೆ ಕೊಟ್ಟಿರುವೆನು. ಅವರು ನಿನ್ನನ್ನು ಬಲ್ಲರು, ನೀನು ಅವರನ್ನು ಬಲ್ಲೆ. ಕಳೆದ ಐವತ್ತು ವರ್ಷಗಳಿಗಿಂತ ಹೆಚ್ಚು ಕಾಲ ನಿಸರ್ಗೋಪಚಾರವನ್ನು ಅಭಿರುಚಿಯಿಂದ ಅನುಸರಿಸುತ್ತ ಬಂದ ನಿನಗೆ ನಿನ್ನ ಶಕ್ತಿಯಲ್ಲಿ ಆತ್ಮವಿಶ್ವಾಸವಿದೆ. ನೀನೀಗ ಹಿಂದ ಸರಿದು ಅದರ ಉಪಯೋಗ ಮಾಡಿಕೊಳ್ಳದಿದ್ದರೆ ನೀನೊಬ್ಬ ಕಳ್ಳನಂತಾಗುವಿ. ಅದು ನಿನಗೆ ಸರಿಹೋಗದು. ಈಶಾವಾಸ್ಯೋಪನಿಷತ್ತಿನ ಮೊದಲನೆಯ ಶ್ಲೋಕವನ್ನು ಸ್ಮರಿಸಿ ಸರ್ವಾರ್ಪಣ ಮಾಡಿ ನನಗೆ ಶರಣಾಗತನಾಗು. ನಿಜವಾಗಿ ನಿನ್ನದೆಂಬುದು ಯಾವದೂ ಇಲ್ಲ. ಕೆಲವೊಂದು ವಸ್ತು ನಿನ್ನದು ಎಂದು ನೀನು ಭಾವಿಸಿರುವಿ. ಆದರೆ ಅದೆಲ್ಲ ನನ್ನ ಸ್ವಂತ. ಉಳಿದ ನನ್ನ ಮಕ್ಕಳಿಗೂ ಅದನ್ನು ಸಮರ್ಪಿಸು. ಅನಾಸಕ್ತಿಯಿಂದ ನೀನು ಇದನ್ನೆಲ್ಲ ಮಾಡುತ್ತ ನಡೆದರೆ ನಿನ್ನ ಉಳಿದ ಕಾರ್ಯಕ್ಕೆ ಯಾವ ರೀತಿಯಿಂದಲೂ ವ್ಯತ್ಯಯ ಬರುವದಿಲ್ಲ. ನೂರಿಪ್ಪತ್ತೈದು ವರ್ಷ ಬದುಕಬೇಕೆಂದು ನೀನು ಬಯಸಿರುವಿ. ಅದನ್ನು ಪರಿಪೂರ್ತಿಗೊಳಿಸುವದು ಇಲ್ಲವೆ ಬಿಡುವುದು ನಿನಗೆ ಸಂಬಂಧಿಸಿದ್ದಲ್ಲ. ಜ್ಞಾನಪೂರ್ವಕವಾಗಿ ಕರ್ಮವನ್ನಾಚರಿಸುತ್ತ ನಡೆಯುವದಷ್ಟೆ ನಿನ್ನ ಕರ್ತವ್ಯ. ಅನವಶ್ಯಕವಾಗಿ ವಿವಂಚನೆಗೊಳಗಾಗಬೇಡ' ಇವೆಲ್ಲ ವಿಚಾರದಿಂದ ನನಗೆ ಸಮಾಧಾನವಾಗುತ್ತದೆ. ಈ ಹಳ್ಳಿಯಲ್ಲಿ ನಾನಿರುವದು ಇದು ಮೂರನೆಯ ದಿನ. ಸಹಾಯಕ್ಕೆಂದು ಬರುತ್ತಿರುವ ರೋಗಿಗಳ ಸಂಖ್ಯೆ ದಿನಾಲು ಹೆಚ್ಚುತ್ತಿದೆ. ಅವರಿಗೆ ಸಂತೋಷವಾಗಿದೆ, ಅವರ ಸೇವೆಯಲ್ಲಿ

ಕಾಂಗ್ರೆಸ್ಸಿಗರ ಔದಾಸೀನ್ಯ

ಪ್ರಶ್ನೆ— ನೆಲ್ಲೂರಲ್ಲಿ ಹರಿಜನರಿಗಾಗಿ ಒಂದು ಮಂದಿರವನ್ನು ಸ್ಥಾಪಿಸುವ ವಿಷಯದಲ್ಲಿ ನೀವೇ ಅಭಿಪ್ರಾಯ ವ್ಯಕ್ತಮಾಡಿದ್ದಕ್ಕಾಗಿ ಸಂತೋಷ. ಅನೇಕ ಜನ ಕಾಂಗ್ರೆಸ್ಸಿಗರು ಇದರಿಂದ ಕಣ್ಣು ತೆಗೆಯಬಹುದು. ಚುನಾವಣೆಯಲ್ಲಿ ಕಾಂಗ್ರೆಸ ವಿಜಯದ ಮೇಲೆ ವಿಪರೀತ ಪರಿಣಾಮವಾಗಬಹುದೆಂದು ಅಸ್ಪೃಶ್ಯರ ಮಂದಿರ ಪ್ರವೇಶಕ್ಕೆ ಕಾಂಗ್ರೆಸ್ಸಿಗರು ಒಪ್ಪಿಗೆ ತೋರಿಸಲಿಲ್ಲೆಂದು ಕಾರಣ ಹೇಳಲಾಗುತ್ತದೆ.

ಸಾಮಾನ್ಯವಾಗಿ ಎಲ್ಲರ ಅಭಿಪ್ರಾಯ ಹೀಗೆಯೇ ಇದ್ದರೆ ಕಾಂಗ್ರೆಸ್ಸಿಗೆ ಇದು ಲಾಂಛನಾಸ್ಪದ. ಕಾಂಗ್ರೆಸ್ಸನಂಥ ಹಿಂದುಸ್ತಾನ ವ್ಯಾಪಕ ಲೋಕಪ್ರಿಯ ಪ್ರಜಾಪ್ರಭುತ್ವ ಸಂಸ್ಥೆ ಅಸ್ಪೃಶ್ಯತೆಯನ್ನು ಸಮೂಲ ನಾಶ ಮಾಡಬೇಕೆಂಬ ತನ್ನ ಧೋರಣೆಗೆ (ಅದು ಧ್ಯೇಯವೆಂದು ಒಪ್ಪದಿದ್ದರೂ) ವಿರುದ್ಧವಾಗಿ ನಡೆಯಲಾರದು. ೧೯೧೫ ರಲ್ಲಿ ನಾನು ಹಿಂದುಸ್ತಾನಕ್ಕೆ ಬಂದಂದಿನಿಂದ ಕಾಂಗ್ರೆಸ್ಸಿನೊಡನೆ ಇದ್ದ ನನ್ನ ನಿಕಟ ಸಂಬಂಧದಿಂದ ಹೇಳಬಹುದಾದರೆ ಕಾಂಗ್ರೆಸ್ಸು ತನ್ನ ಮುಖ್ಯ ಉದ್ದೇಶಕ್ಕನುಸಾರವಾಗಿ ನಡೆದಾಗೆಲ್ಲ ಅದು ಹೆಚ್ಚೆಚ್ಚು ಲೋಕಪ್ರಿಯವಾಗುತ್ತ ನಡೆದದ್ದು ನನಗೆ ಕಂಡುಬಂದಿದೆ. ಎಂಥ ಗಂಡಾಂತರ ಪ್ರಸಂಗ ಬಂದರೂ ಪ್ರಜಾಪ್ರಭುತ್ವ ಸಂಸ್ಥೆ ನ್ಯಾಯವನ್ನು ಪಾಲಿಸುವ ಧೈರ್ಯ ತಾಳಲಿಕ್ಕೆ ಬೇಕು. ಜನತೆಯ ಅಶಕ್ತತೆಯ ಬಗ್ಗೆ ವಿಚಾರ ಮಾಡುತ್ತ ಕೂಡ್ರುವವನು ತಾನು ಅಧೋಗತಿಗೆ ಇಳಿಯುವನಲ್ಲದೆ ಜನರನ್ನೂ ಅಧೋಗತಿಗೆ ನೂಕುವನು. ಆದರಿಂದ ಪ್ರಜಾಪ್ರಭುತ್ವದ ಸ್ಥಾಪನೆಯಾಗದೆ ಜನಜಂಗುಳಿಯ ಆಳಿಕೆಗೆ ಅವಕಾಶವುಂಟಾಗುವದು. ಪ್ರಜಾಪ್ರಭುತ್ವ ಮತ್ತು ಜನಜಂಗುಳಿಯ ಆಳಿಕೆಯನ್ನು ಬೇರ್ಪಡಿಸುವ ರೇಷೆ ಬಹಳ ಸೂಕ್ಷ್ಮವಾಗಿದ್ದರೂ ಗಟ್ಟಿ ಹಾಗು ಉಕ್ಕಿಗಿಂತ ಅಭೇದ್ಯವಾಗಿರುವದು. ಒಂದು ಜೀವನಕ್ಕೆ ಮತ್ತು ಪ್ರಗತಿಗೆ ಸಾಧನವಾಗಿದ್ದರೆ ಎರಡನೆಯದು ನೇರವಾಗಿ ಮರಣಕ್ಕೆ ಸಾಧಕ. ಕೊನೆಗೆ ಪೃಥಕ್ಕರಿಸಿ ನೋಡುವಾಗ ನಮ್ಮ ಅಪಜಯಕ್ಕೆ ಅಂತಃಕಾರಣಗಳನ್ನೆ ಹುಡುಕಬೆ ಕಲ್ಲದೆ ಬಾಹ್ಯ ಕಾರಣಗಳನ್ನಲ್ಲೆಂಬುದು ಗೊತ್ತಾಗುತ್ತದೆ. ಜನಾಂಗವೆಂದು ನಾವು ಸಂಶಯಾತೀತ ಮತ್ತು ಪ್ರಲೋಭನಾತೀತರಾಗಿದ್ದರೆ ಜಗತ್ತಿನಲ್ಲಿಯ ಸಾಮ್ರಾಜ್ಯಗಳೆಲ್ಲ ಒಟ್ಟುಗೂಡಿದರೂ ನಮ್ಮನ್ನು ಮಣಿಸುತರಲಿಲ್ಲ. ಇದೊಂದು ನೀರಸ ವಚನವೆಂದು ಯಾರೂ ಭಾವಿಸಕೂಡದು. ಮೂಲಭೂತ ಸಂಗತಿಗಳನ್ನು ನಾವು ತಿಳಿದುಕೊಂಡರೆ, ಅಂತರ್ಬಾಹ್ಯ ಅಡಚಣಿಗಳನ್ನೆಲ್ಲ ನಾವು ಸಹನಶೀಲತೆಯಿಂದ ಎದುರಿಸಬಲ್ಲೆವು. ತತ್ವಚ್ಯುತರಾಗುವದಕ್ಕಿಂತ ಚುನಾವಣೆಗಳಲ್ಲಿ ಪರಾಜಯ ಹೊಂದಲು ಸಿದ್ಧರಾಗುವದೆ. ದರೆ ಎಲ್ಲ ಚುನಾವಣೆಗಳಲ್ಲಿ ವಿಜಯ ಪಡೆದಂತೆಯೆ. ೧೯೨೦ ರಲ್ಲಿ ಕಾಂಗ್ರೆಸ್ಸು ಹಾಕಿಕೊಟ್ಟ ಧೋರಣದಿಂದ ಅದಕ್ಕೆ ಕ್ರಮಶಃ ವಿಜಯ ಸಿಕ್ಕುತ್ತ ನಡೆದಿದೆಯೆಂಬುದು ಪರಿಣಾಮಗಳಿಂದ ಸಿದ್ಧವಾಗುತ್ತದೆ. ಆದರೆ ಆ ಇತಿಹಾಸಪ್ರಸಿದ್ಧ ಅಧಿವೇಶನದಲ್ಲಿ ಸ್ವೀಕರಿಸಿದ ಮೂಲಭೂತ ಧೋರಣೆಗೆ ಯಾವ ಪ್ರಮಾಣದಲ್ಲಿ ಕಾಂಗ್ರೆಸ ನಿಷ್ಠವಾಗುಳಿದಿದೆಯೋ ಅದೇ ಪ್ರಮಾಣದಲ್ಲಿ ವಿಜಯ ಸಿಕ್ಕುತ್ತ ನಡೆದಿದೆಂಬುದು ಸುಸ್ಪಷ್ಟ. ಹಿಂದುಸ್ತಾನವು ಬದುಕಿ ಜಾಳಿ ರಾಷ್ಟ್ರವೆಂದು ಅಭಿವೃದ್ಧಿ ಹೊಂದಬೇಕಾದರೆ ಅಸ್ಪೃಶ್ಯತೆ ಮಾಯವಾಗಲಿಕ್ಕೆ ಬೇಕು.

ಪುಣೆ ಮೋ. ಕ. ಗಾಂಧಿ

೨೧-೩-೪೬

ನನಗೂ ಸಂತೋಷ. ಸ್ಥಳಿಕರ ಸಹಾಯವು ನನಗೆ ಸಿಕ್ಕುತ್ತಿದೆ ಇಲ್ಲಿಯ ಜನತೆಯ ಹೃದಯದಲ್ಲಿ ನಾನು ಪ್ರವೇಶಿಸಿದರೆ ರೋಗವೆಲ್ಲ ಮಾಯವಾಗುವದು, ಈ ಹಳ್ಳಿಯು ಸ್ವಚ್ಛತೆ ಮತ್ತು ಆರೋಗ್ಯದ ಮಾದರಿ ಗ್ರಾಮವಾಗುವದು. ಹೀಗಾಗದಿದ್ದರೆ ಆಗುವ ಹಾನಿಯಾದರೂ ಯಾವುದು ? ಪರಮಾತ್ಮನ ಆಜ್ಞೆಯಂತೆ ನಡೆಯುವದಷ್ಟೆ ನನ್ನ ಕರ್ತವ್ಯ.

ಉರುಳಿ ಮೋ. ಕ. ಗಾಂಧಿ

೨೫—೩—೧೯೪೬

(ಹರಿಜನಸೇವಕದಿಂದ)

ಟೀಕೆ—ಟಿಪ್ಪಣಿಗಳು

ಭಂಗಿಗಳ ವಸತಿಯಲ್ಲೇಕೆ?

ನಾನು ಸಂದರ್ಶಿಸಬಹುದಾದ ನಗರಗಳಲ್ಲಿ ಇಲ್ಲವೆ ಪಟ್ಟಣಗಳಲ್ಲಿ ಭಂಗಿ ಜನರ ವಸತಿಯಲ್ಲಿಯೆ ಉಳಿಯಬೇಕೆಂಬ ನನ್ನ ಇಚ್ಛೆಗಾಗಿ ಅನೇಕರು ಆಶ್ಚರ್ಯಚಕಿತರಾಗಿರುವರು. ಇಷ್ಟು ವರುಷಗಳ ವರೆಗೆ ನಾನು ಈ ಇಚ್ಛೆಯನ್ನೇಕೆ ಪ್ರದರ್ಶಿಸಲಿಲ್ಲವೆಂದು ಕೇಳುವುದು ಹೆಚ್ಚು ಉಚಿತವಾಗಬಹುದು. ಇಷ್ಟು ದಿನಗಳ ವರೆಗೆ ಅಂಥ ಇಚ್ಛೆ ನನಗೇಕೆ ಉಂಟಾಗಲಿಲ್ಲೆಂಬುದನ್ನು ಇನ್ನೊಮ್ಮೆ ವಿಚಾರಿಸುವಾ. ಈ ಬಗೆಯ ಇಚ್ಛೆ ನನ್ನಲ್ಲಿ ಈಗ್ಗೆ ಏಕೆ ಹುಟ್ಟಿದೆಂಬ ಬಗ್ಗೆ ನಾನೀಗ ಉತ್ತರಿಸುವೆ.

ನಾವೆಲ್ಲ ಭಂಗಿಗಳೇ ಆಗಿರಬೇಕೆಂದು ಕೆಲ ದಿನಗಳಿಂದ ನಾನು ಹೇಳುತ್ತ ಬಂದಿರುವೆನು. ಆದರೆ ಆಡಿದಂತೆ ನಾನು ಮಾಡುತ್ತಿರುವುದಿಲ್ಲೆಂಬ ಚಿಂತೆ ನನಗೆ ಎಂದಿನಿಂದಲೂ ಕಟಿಯುತ್ತದೆ. ಬಯಸಿದಂತೆ ಸಂಪೂರ್ಣ ಕೃತಿ ಮಾಡುವುದು ಶಕ್ಯವಾಗಕ್ಕಿಲ್ಲ. ಆದರೆ ಶಕ್ಯವಿದ್ದ ಮಟ್ಟಿಗೆ ಅದನ್ನು ಕೃತಿಯಲ್ಲಿಳಿಸಲಿಕ್ಕೆ ಬೇಕು. ಈ ಬಗೆಯ ವಿಚಾರ ನನ್ನ ತಲೆಯಲ್ಲಿ ನಡೆದಿರುವ ಸಮಯದಲ್ಲಿಯೆ ಗುಜರಾಥದಲ್ಲಿ ಕರಾಡಿ ಎಂಬ ಹಳ್ಳಿಯನ್ನು ಬಿಟ್ಟು ಉಳಿದ ಯಾವ ಕಡೆಗೂ ಹರಿಜನರಿಗೆ ಯಾವದೊಂದು ಮಂದಿರದಲ್ಲಿ ಇಲ್ಲವೆ ಬಾವಿಯಲ್ಲಿ ಪ್ರವೇಶವಿಲ್ಲೆಂಬ ಸುದ್ದಿ ಬಂದಿತು. ಈ ಸುದ್ದಿಯನ್ನು ಈಗಾಗಲೆ ತಾನೂ ವಾಚಕರೂ ಓದಿದ್ದುಂಟು. ಈ ಸುದ್ದಿ ನಿಜವಿರುವದೊ ಇಲ್ಲವೊ ಎಂಬುದು ಮಹತ್ವದ್ದಲ್ಲ. ಆದರೆ ಈ ಸುದ್ದಿಯಿಂದ ನನ್ನ ಮನಸಿನಲ್ಲಿ ಯಾವ ಬಗೆಯ ಪ್ರತಿಕ್ರಿಯೆಯುಂಟಾಗಿದೆಂಬುದು ಮಹತ್ವದ್ದು. ತಿಳಿದುಕೊಳ್ಳುವುದು ಹುಚ್ಚತನ. ಈ ಸುದ್ದಿಯೆ ನಾನು ಹರಿಜನ ವಸತಿಯಲ್ಲಿರಬೇಕೆಂಬ ಇಚ್ಛೆಗೆ ಕಾರಣವಾಯಿತು. ನಾನೇ ಹರಿಜನರಿಂದ ದೂರ ಉಳಿಯುತ್ತಿರುವಾಗ ಎರಡನೆಯವರು ಹರಿಜನರ ಬಗ್ಗೆ ಆಸಕ್ತಿ ವಹಿಸುವುದಿಲ್ಲೇಕೆಂದು ಕೇಳುವದಕ್ಕೆ ನನಗೇನು ಅಧಿಕಾರ? ಎಂದು ನಾನು ನನ್ನ ಮನಸಿನಲ್ಲಿಯೆ ವಿಚಾರಿಸಿದೆನು. ಎರಡನೆಯವರು ತಮ್ಮ ಧೋರಣವನ್ನು ಬದಲಿಸಿರುವರೊ ಇಲ್ಲವೋ ಎಂಬದನ್ನು ನಿರ್ಣಯಿಸುವ ಅಧಿಕಾರ ನನ್ನದಲ್ಲ. ಹರಿಜನ ವಸತಿಗಳಲ್ಲಿರುವುದು ನನ್ನ ಕರ್ತವ್ಯವಾಗಿದ್ದರೆ ಎರಡನೆಯವರ ಮೇಲೆ ಅದರ ಪ್ರತಿಕ್ರಿಯೆ ಏನೇ ಆದರೂ ನಾನು ನನ್ನ ಆ ಕರ್ತವ್ಯ ಮಾಡಲಿಕ್ಕೆ ಬೇಕು. ಈ ವಿಚಾರ ನನ್ನಲ್ಲಿ ಹುಟ್ಟಿ ಆ ಬಗೆಯ ಕೃತಿಗೆ ನನ್ನನ್ನು ಪ್ರವರ್ತಿಸಿತು.

ಅಂತೆಯೆ ಮುಂಬಯಿಗೆ ನಾನು ಹೋದಾಗ ಶಕ್ಯವಾದರೆ ಹರಿಜನ ವಸತಿಯಲ್ಲಿಯೆ ನನ್ನ ಬಿಡಾರದ ವ್ಯವಸ್ಥೆ ಮಾಡಬೇಕೆಂದು ನಾನು ಶೇಟ ಆರ್. ಡಿ. ಬಿರ್ಲಾ ಇವರಿಗೆ ಬರೆದುಕೊಂಡಿರುವೆನು. ದಿಲ್ಲಿಯಲ್ಲಿಯೂ ಹಾಗೆಯೇ ಮಾಡಬೇಕೆಂದು ನಾನು ಶೇಟ ಜಿ. ಡಿ. ಬಿರ್ಲಾ ಇವರಿಗೂ ತಂತಿಯಿಂದ ತಿಳಿಸಿರುವೆನು. ತಾವು ಮಾಡಿದ ವ್ಯವಸ್ಥೆಯ ಬಗ್ಗೆ ಬ್ರಿಜಕಿಶೋರ ಪಾಂಡೆ ಇವರು ಈಗಾಗಲೆ ನನ್ನ ಒಪ್ಪಿಗೆಯನ್ನು ಕೋರಿರುವರು. ಆದರೆ ಎಲ್ಲಿಯೂ ಹರಿಜನರನ್ನು ನಾನು ವಂಚಿಸತಕ್ಕದ್ದಲ್ಲೆಂಬುದು ಸ್ಪಷ್ಟವಿದೆ. ಅದರಲ್ಲಿ ನಾನು ಹೋಗಿ ಇರುವದನ್ನು ಅವರು ಸಹಿಸದಿದ್ದರೆ ಅದಕ್ಕಾಗಿ ನಾನು ಅವರ ಭಾವನೆಗಳನ್ನು ನೋಯಿಸತಕ್ಕದ್ದಲ್ಲ. ಆದರೆ ಆ ಬಗೆಯ ಅಂಜಿಕೆಗೆ ಅವಕಾಶವಿಲ್ಲೆಂದು ನನ್ನ ತಿಳಿವಳಿಕೆ. ಇನ್ನು ಮುಂದೆ ಬಿರ್ಲಾ ಭವನದಲ್ಲಿ ನಾನು ಉಳಿಯಲಾರೆ ಎಂಬುದಾಗಿ ಹಲವರು ಟೀಕಿಸುವದನ್ನು ನಾನು ನೋಡಿರುವೆ. ಆದರೆ ನಾನು ಇಷ್ಟೆಲ್ಲ ವರುಷಗಳ ವರೆಗೆ ಅವರ ಆತಿಥ್ಯವನ್ನೇ ಏಕೆ ಸ್ವೀಕರಿಸುತ್ತಿರುವನೆಂಬುದು ಅವರಿಗೆ ಗೊತ್ತಿಲ್ಲ. ನನ್ನ ಅನೇಕ ಬಗೆಯ ವಿಧಾಯಕ ಕಾರ್ಯಗಳಿಗಾಗಿ ಅವರಿಂದ ನಿಧಿಯನ್ನು ಪಡೆದಿರುವೆನು. ಅವರ ಜೀವನದಲ್ಲಿ ಅವರಿಗೆ ತಿಳಿಯದಲೆ ಆದ ಮಾರ್ಪಾಟುಗಳನ್ನು ಈ ಟೀಕಾಕಾರರು ಅರಿಯರು; ಅಲ್ಲದೆ ಸಾರ್ವಜನಿಕರಲ್ಲಿ ಉಂಟಾದ ಮಾರ್ಪಾಟುಗಳನ್ನೂ ಅವರು ತಿಳಿಯರು. ಕೇವಲ ಪ್ರದರ್ಶನಕ್ಕಾಗಿ ಇಂಥ ಮಾರ್ಪಾಟುಗಳು ಮಾಡಲ್ಪಡುವದಿಲ್ಲ. ಆದರೆ ಅದೇ ಕಾಲಕ್ಕೆ ಅವರ ಮತ್ತು ನನ್ನ ಧೋರಣಗಳಲ್ಲಿ ಮಹತ್ವದ ಅಂತರವಿದೆಂಬುದು ಅಷ್ಟೇ ನಿಜವಿರುವುದು. ಯಾವದೇ ಬಗೆಯ ವಿಷಾದ ಇಲ್ಲದೆ ಆಶ್ಚರ್ಯಕ್ಕೆ ಅವಕಾಶವಿಲ್ಲ. ನಿಜ ಮಾರ್ಪಾಟುಗಳೆಲ್ಲ ಅಂತಃಸ್ಫೂರ್ತಿಯಿಂದ ಉಂಟಾಗುವವು. ಒತ್ತಾಯಕ್ಕಾಗಿ ಆದ ಬದಲಾವಣೆಗಳು ನಿರರ್ಥಕ. ಎಲ್ಲರೂ ಇದನ್ನನುಕರಿಸಬೇಕೆಂದು ಅಪೇಕ್ಷಿಸುವಷ್ಟು ದುರಭಿಮಾನಿ ಇಲ್ಲವೆ ಮೂರ್ಖ ನಾನಿರುವುದಿಲ್ಲ. ನಾನು ಮಾಡುವದು ಒಪ್ಪೊ ತಪ್ಪೊ ಇಲ್ಲವೆ ಎರಡನೆಯವರು ಮಾಡುವದು ತಪ್ಪೊ ಒಪ್ಪೊ ಎಂಬುದನ್ನು ಹೇಳತಕ್ಕವರಾರು? ಆದರೆ ತನಗೆ ಸರಿಯೆನಿಸಿದಂತೆ ಪ್ರತಿಯೊಬ್ಬ ನಡೆದರೆ ಸಾಕು. ನಾವೆಲ್ಲ ಪರಮಾತ್ಮನ ಸೃಷ್ಟಿ. ಅವನ ಇಚ್ಛೆಯನ್ನು ನಾವು ನಿರ್ವಹಿಸಬೇಕು. ನಮ್ಮದನ್ನಲ್ಲ. ಹಾಗೆ ನಾವು ಮಾಡುವಾಗ ಪರಸ್ಪರ ಮಿತ್ರರಂತೆ ವರ್ತಿಸಬೇಕು.

ಉರುಳಿ — ಮೋ. ಕ. ಗಾಂಧಿ
೨೫-೩-೧೯೪೬

ಬರಗಾಲ ಮತ್ತು ಜನನ ಸಂಖ್ಯೆ

ಹಿಂದುಸ್ತಾನ ಸರಕಾರದ ವೈದ್ಯಕೀಯ ಮಂಡಲದ ಅಧ್ಯಕ್ಷರಾದ ಮೇಜರ ಜನರಲ್ ಸರ್ ಜಾನ್ ಮ್ಯಾಕ್‌ಗಾ ಅವರು ಹೀಗೆ ಹೇಳಿದ್ದಾರೆಂದು ಒಬ್ಬ ಪತ್ರಿಕಾಗಾರರು ವರದಿ ಮಾಡಿದ್ದಾರೆ. "ಹಿಂದುಸ್ತಾನದಲ್ಲಿ ಬರಗಾಲಗಳು ಮತ್ತೆ ಮತ್ತೆ ಬರಲಿವೆ. ವಾಸ್ತವಿಕವಾಗಿ, ಹಿಂದುಸ್ತಾನವಿಂದು ಶಾಶ್ವತ ಬರಗಾಲವನ್ನು ಎದುರಿಸಿದೆ. ಹಿಂದುಸ್ತಾನದಲ್ಲಿ ಜನನ ಸಂಖ್ಯೆಯನ್ನು ಕಡಿಮೆ ಮಾಡಲು ಏನಾದರೂ ಮಾಡದೆ ಹೋದರೆ ಆ ದೇಶ ನೆಟ್ಟಗೆ ಅನಾಹುತದ ಕಡೆ ಧಾವಿಸುವದು." ಇದಕ್ಕೆ ನೀವೇನೆನ್ನುವಿರಿ? —ಎಂದು ಆ ಪತ್ರಿಕಾಗಾರ ಕೇಳುತ್ತಾನೆ.

ನನ್ನ ಪಾಲಿಗೆ, ಹಿಂದುಸ್ತಾನದ ಬರಗಾಲಕ್ಕೆ ಈ ಮತ್ತು ಈ ಬಗೆಯ ಇತರ ಕಾರಣಗಳನ್ನು ಕೊಡುವದೆಂದರೆ ಈ ದೈವಗೇಡಿ ದೇಶದಲ್ಲಿ ಬರಗಾಲಗಳು ತಿರುತಿರುಗಿ ಬರುವ ನಿಜವಾದ ಏಕಮಾತ್ರ ಕಾರಣದಿಂದ ಜನರ ಲಕ್ಷ್ಯವನ್ನು ಬೇರೆಕಡೆ ಸೆಳೆಯಲು ಪ್ರಯತ್ನಿಸಿದಂತೆಯೇ ಸರಿ. ಹಿಂದುಸ್ತಾನದ ಬರಗಾಲಗಳು ಪ್ರಕೃತಿಜನ್ಯವಾದ ವಿಪತ್ತಲ್ಲ; ಅವು ಆಳರಸರಿಂದ ನಿರ್ಮಿತವಾದ ಅನಾಹುತಗಳು ಎಂದು ನಾನು ಹಿಂದೆ ಹೇಳಿದ್ದೇನೆ. ಇಲ್ಲಿಯೂ ಅದನ್ನೇ ಹೇಳುತ್ತೇನೆ. ಇದಕ್ಕೆ ಅವರ ಅಜ್ಞಾತಾತ್ಸಾರ ಬುದ್ಧಿ ಕಾರಣವೋ ಅಥವಾ ಉದ್ದೇಶಪೂರ್ವಕ ಅವರು ಇದನ್ನು ನಿರ್ಮಿಸಿರುವರೋ ಎಂಬುದು ಮುಖ್ಯವಲ್ಲ. ಜಲಾಭಾವವನ್ನು ತಡೆಗಟ್ಟುವದು ಮನುಷ್ಯಪ್ರಯತ್ನಕ್ಕೆ ಇಲ್ಲವೆ ಕೌಶಲಕ್ಕೆ ನಿಲುಕದ ಸಂಗತಿಯಲ್ಲ. ಅಂಥ ಪ್ರಯತ್ನಗಳು ಬೇರೆ ದೇಶಗಳಲ್ಲಿ ನಿರರ್ಥಕವೆಂದು ಸಿದ್ಧವಾಗಿಲ್ಲ. ಹಿಂದುಸ್ತಾನದಲ್ಲಿ ಜಾಣ್ಮೆಯಿಂದ ಸಂತತ ಪ್ರಯತ್ನವನ್ನು ಎಂದೂ ಮಾಡಿದ್ದಿಲ್ಲ.

ಬೆಳೆಯುತ್ತಿರುವ ಜನರ ಸಂಖ್ಯೆಯ ಗುಮ್ಮನ ಬೆದರಿಕೆ ಹೊಸದೇನೂ ಅಲ್ಲ. ಅನೇಕ ಸಾರೆ ಅದನ್ನು ಪ್ರದರ್ಶಿಸಲಾಗಿದೆ. ಜನಸಂಖ್ಯೆಯ ಹೆಚ್ಚಳವನ್ನು ನಿವಾರಿಸಬೇಕಾದ ವಿಪತ್ತೆಂದು ಭಾವಿಸುವದು ಸರಿಯಲ್ಲ, ಅದು ವಿಪತ್ತೂ ಅಲ್ಲ. ನಮಗೆ ಗೊತ್ತಿರಲಿ, ಇಲ್ಲದಿರಲಿ, ಕೃತ್ರಿಮ ರೀತಿಯಿಂದ ಅದನ್ನು ಪರಿಮಿತಗೊಳಿಸುವದು ಅಥವಾ ನಿರ್ಬಂಧಿತಗೊಳಿಸುವದೇ ಮೊದಲ ಮೊಟ್ಟದ ಅನಾಹುತ. ಅದು ಸಾರ್ವತ್ರಿಕವಾದರೆ ಜನಾಂಗನೇ ಅಧಃಪಾತಕ್ಕೆ ಹೋಗುವದು. ದೇವರ ದಯೆಯಿಂದ ಇದು ಸಾರ್ವತ್ರಿಕವಾಗುವ ಸಂಭಾವ್ಯತೆಯಿಲ್ಲ. ಪಿಡುಗು, ಯುದ್ಧ ಮತ್ತು ಬರಗಾಲಗಳು, ಬೇಡಾದ ಮಕ್ಕಳಿಗೆ ಕಾರಣವಾದ ಪಾಪಮಯ ಕಾಮವಾಸನೆಗೆ ದೊರೆತ ಪಾಪಮಯ ಪ್ರತಿಫಲಗಳು. ಈ ಮುಮ್ಮಡಿ ಅಭಿಶಾಪ ನಮಗೆ ಬೇಡವಾದರೆ, ಬೇಡವಾದ ಮಕ್ಕಳ ಜನನವನ್ನೂ ರಾಮಬಾಣೋಪಾಯವಾದ ಇಂದ್ರಿಯನಿಗ್ರಹದಿಂದ ನಾವು ತಡೆಗಟ್ಟಬೇಕು. ಕೃತ್ರಿಮ ಪದ್ಧತಿಗಳ ದುಷ್ಪರಿಣಾಮವನ್ನು ನಾವು ಜನರನ್ನು ನಿರೀಕ್ಷಿಸಿದರೆ ಈಗಾಗಲೆ ಕಾಣಬಹುದು. ಮೊಲಗಳಂಥ ಸಂತಾನಾಭಿವೃದ್ಧಿಯ ಓಟವನ್ನು ತಡೆಗಟ್ಟುವದವಶ್ಯವೆಂದು ನಾನು ಹೇಳಿದರೆ ನೀತಿನಿಯಮಕ್ಕೆ ಬಾಧೆಬಂದಂತೆ ಆಗಲಿಲ್ಲ. ಆದರೆ ಅದರ ಜತೆಗೆ ಅದಕ್ಕಿಂತ ದುಷ್ಟ ಪರಿಣಾಮಗಳನ್ನು ಅದು ತಂದಿರಬಾರದು. ಸಂತಾನವೃದ್ಧಿಯ ಓಟವನ್ನು ತಡೆಗಟ್ಟಲು ಪ್ರಯೋಗಿಸಿದ ಸಾಧನಗಳಿಂದ ಜನಾಂಗದ ಉದಾತ್ತವೃತ್ತಿ ಬೆಳೆದಿರಬೇಕು. ಅರ್ಥಾತ್, ಜೀವನದ ಎಲ್ಲ ಅಂಗಗಳನ್ನೂ ವ್ಯಾಪಿಸಿದ ಯೋಗ್ಯ ಶಿಕ್ಷಣದಿಂದಲೇ ಅದನ್ನು ಸಾಧಿಸಬೇಕು. ಒಂದು ಕೆಡುಕಿಗೆ ಪ್ರತೀಕಾರ ಮಾಡಿದಾಗ ಎಲ್ಲ ಕೆಡುಕುಗಳೂ ಅದು ತನ್ನ ಸೆಳೆತದಲ್ಲಿ ತರಬೇಕು. ಯಾವುದೊಂದು ಮಾರ್ಗ ಊರ್ಧ್ವಮುಖವಾಗಿರುವದು ಮತ್ತು ಆ ಕಾರಣದಿಂದ ಕಠಿಣವಾಗಿರುವದೆಂದು ಅದನ್ನು ತ್ಯಜಿಸುವದು ತರವಲ್ಲ. ಮನುಷ್ಯನ ಊರ್ಧ್ವ ಪ್ರಗತಿಯೆಂಬುದು ಅವಶ್ಯವಾಗಿ ಬೆಳೆಯುತ್ತಿರುವ ತೊಡಕುಗಳಿಂದ ಕೂಡಿದ್ದು. ಆದುದರಿಂದಲೇ ಅವುಗಳನ್ನು ಸ್ವಾಗತಿಸಬೇಕು.

ಪುಣೆ — ಮೋ. ಕ. ಗಾಂಧಿ
೧೯-೩-೪೬

ಗ್ರಾಮೋದ್ಯೋಗ ಸಂಘದ ಸುದ್ದಿಗಳು

೧. ೧೯೪೫ ಡಿಸೆಂಬರ ೩೧ರ ವರೆಗೆ ಅ. ಭಾ. ಗ್ರಾಮೋದ್ಯೋಗ ಸಂಘದ ಸದಸ್ಯರಿಗೆ "ಗ್ರಾಮೋದ್ಯೋಗ ಪತ್ರಿಕೆ" ಉಚಿತವಾಗಿ ಬರುತ್ತಿತ್ತು. ಆದರೆ ವೆಚ್ಚ ಬೆಳೆದ ಪ್ರಯುಕ್ತ ವರುಷದಿಂದ ನೇರವಾಗಿ ಕಾರ್ಯಕ್ಷೇತ್ರದಲ್ಲಿ ದುಡಿಯುತ್ತಿರುವವರನ್ನು ಬಿಟ್ಟು ಇತರ ಎಲ್ಲ ಸದಸ್ಯರಿಂದ ಅರ್ಧ ಬೆಲೆ ವಸೂಲು ಮಾಡಬೇಕೆಂದು ಸಂಕಲ್ಪಿಸಲಾಗಿದೆ.

೨. ಮಂಡಲದ ಕಳೆದ ಸಭೆಯ ನಂತರ ಈ ಕೆಳಗಿನ ಪುಸ್ತಕಗಳು ಪ್ರಸಿದ್ಧವಾಗಿವೆ.

೧. Palm Gur (ಓಲೆಬೆಲ್ಲ)
೨. Views of Meganwadi (ಮಗನವಾಡಿಯ ದೃಶ್ಯಗಳು)
೩. Soap making ಸಾಬಾಣ (ಮಾಡುವದು)
Dhoti Jama (ಧೋತೀ ಜಮಾ)

೩. ಶ್ರೀ ಭರತನ್ ಕುಮಾರಪ್ಪನವರು ಸಹಾಯಕ ಕಾರ್ಯದರ್ಶಿ ಸ್ಥಾನದಿಂದ ನಿವೃತ್ತರಾಗಲು ಅಪೇಕ್ಷಿಸಿದ್ದಾರೆ. ಅವರ ರಾಜೀನಾಮೆಯನ್ನು ಮಂಡಲ ಬಹಳ ವಿಷಾದದೊಡನೆ ಅಂಗೀಕರಿಸಿದೆ. ಹತ್ತು ವರ್ಷಗಳ ಅಮೂಲ್ಯ ಕೆಲಸದ ನಂತರ ಅವರನ್ನು ಕಳೆದುಕೊಂಡದ್ದು ಅ. ಭಾ. ಗ್ರಾ. ಉ. ಸಂಘಕ್ಕೆ ದೊಡ್ಡ ಹಾನಿಯೆನಿಸದಿರದು.

೪. ಸಿಂಧೀ ಗ್ರಾಮದಲ್ಲಿ ಕಸ್ತೂರಬಾ ನಿಧಿಯ ಪರವಾಗಿ ಅಥವಾ ಸ್ವತಂತ್ರವಾಗಿ ಒಂದು ಗ್ರಾಮ ಆರೋಗ್ಯ ಕೇಂದ್ರವನ್ನು ನಡೆಸುವ ಸಂಕಲ್ಪ ಮಾಡಲಾಗಿದೆ.

(ಆಡಳಿತ ಮಂಡಲದ ಸಭೆಯ ವರದಿಯಿಂದ)

—ಅ. ಕಾ.

ಅಪವ್ಯಯ

ಉಗ್ರಾಣಗಳಲ್ಲಿ ಕೂಡಿಸಿಟ್ಟ ಆಹಾರ ವಸ್ತುಗಳು ಮನುಷ್ಯ ಸೇವನೆಗೆ ಅನರ್ಹವೆಂದು ನಿರ್ಣಯಿಸಲ್ಪಟ್ಟು ಒಗೆಯಲ್ಪಡುತ್ತಿವೆಯೆಂಬ ಸುದ್ದಿಯನ್ನೊಳಗೊಂಡ ಪತ್ರಗಳು ಧಾರಾಕಾರವಾಗಿ ಬರುತ್ತಿವೆ. ಬಳಕೆಯ ಅಭ್ಯಾಸವಿಲ್ಲದ ಮೂಲಕ ಕೆನೆ ತೆಗೆದ ಹಾಲು (ಸ್ಕಿಮ್ಡ ಮಿಲ್ಕ) ಒಗೆಯಲ್ಪಡುತ್ತದೆ. ಅಂತೆಯೇ ಘನರೂಪ ಹಾಲು ಅಜ್ಞಾನದ ಮೂಲಕ ಗಿರಾಕಿಯಿಲ್ಲದೆ ಬಿದ್ದಿದೆ. ಆಹಾರ ವಸ್ತುಗಳು ರೇವುಗಳಲ್ಲಿ ಬಹು ರಾಶಿ ಬಿದ್ದ ಮಾತ್ರಕ್ಕೆ ಸಂಕಷ್ಟ ನಿವಾರಣೆಯಾದಂತಾಗಲಿಲ್ಲ. ಅದರ ಅವಶ್ಯಕತೆ ಒದಗಿದ ಎಲ್ಲಿದೆಯೋ ಅಲ್ಲಿಗೆ ಸಕಾಲದಲ್ಲಿ ಸಾಗಿಸಿದರೆನೇ ಅದರ ಉಪಯೋಗ. ಇದಕ್ಕಿಂತಲೂ ಕೆಟ್ಟದ್ದೆಂದರೆ ಹೆಚ್ಚಿಕೊಳ್ಳುತ್ತಿರುವ ಬರಗಾಲ ಪರಿಸ್ಥಿತಿಯ ಸಂಗಡಲೇ ನಡೆದಿರುವ ಈ ಮುಪ್ಪುರ ಅಪವ್ಯಯ. ಈ ಎಲ್ಲ ಅಪವ್ಯಯವೂ ಆಳುವವರಿಗೂ ಜನತೆಗೂ ಸಜೀವ ಸಂಪರ್ಕವಿಲ್ಲದಿರುವ ಕಾರಣದಿಂದಲೇ ಉಂಟಾಗುತ್ತಿದೆ.

ಉರುಳಿ, — ಮೋ. ಕ. ಗಾಂಧಿ
೨೪-೩-೧೯೪೬

ಕೈನೂಲು ಮತ್ತು ಕೈಮಗ್ಗ

ಒಂದು ಕಡೆ ಕೈನೂಲಿನ ರಾಶಿ ಏರುತ್ತಿರುವಾಗ್ಗೆ ಇನ್ನೊಂದೆಡೆ ಕೈಮಗ್ಗದ ನೇಕಾರರು ಕೈನೂಲನ್ನು ಬಿಟ್ಟುಕೊಟ್ಟು ಗಿರಣಿ ನೂಲನ್ನು ಆಶ್ರಯಿಸುವದು ಕಂಡುಬರುತ್ತಿದೆಯೆಂದು ಶ್ರೀ. ಜಾಜೂಜಿಯವರು ಬರೆಯುತ್ತಾರೆ. "ಹರಿಜನ" ಪತ್ರಿಕೆಯಲ್ಲಿ—ಇಂಗ್ಲೀಷ ಭಾಷೆಯಲ್ಲಾಗಲಿ ದೇಶ ಭಾಷೆಗಳಲ್ಲಾಗಲಿ—ನೇಕಾರರಿಗೆ ವಿಸ್ತರಿತ ಮಾಡಿಕೊಂಡರೆ ಕಾಸಿನ ಫಲವಾಗಲಿಕ್ಕಿಲ್ಲ. "ಹರಿಜನ" ಓದುವ ನೇಕಾರರೇ ಇಲ್ಲವೆಂದರೂ ಸಲ್ಲುವದು. ನೇಕಾರನಿಗೆ ಅದನ್ನು ಓದಿ ಹೇಳುವ ಪ್ರಯತ್ನವನ್ನು ಯಾರಾದರೂ ಮಾಡಿದರೂ ಅವನು ಅದರಲ್ಲಿ ಆಸ್ಥೆ ತೋರಲಿಕ್ಕಿಲ್ಲ. ಆದುದರಿಂದ ಕೈನೂಲನ್ನು ತಿರಸ್ಕರಿಸುವದರಿಂದಾಗುವ ಆತ್ಮಹತ್ಯಾ ಸದೃಶವಾದ ಪರಿಣಾಮವನ್ನು ಕುರಿತು ನೇಕಾರರೊಡನೆ ಮಾತಾಡುವ ಭಾರ ಚರಖಾಸಂಘದ ಕರ್ತವ್ಯನಿಷ್ಠ ಕಾರ್ಯಕರ್ತರ ತಲೆಯ ಮೇಲೆ ಬಿದ್ದಿದೆ. ಕೈನೂಲನ್ನು ಬಿಟ್ಟುಕೊಡುವದರಿಂದ ಕೈಮಗ್ಗದವರು ಹೇಗೆ ಕೊನೆಗೆ ತಮ್ಮ ವೃತ್ತಿಯನ್ನೇ ಕೊಂದದ್ದಕ್ಕೆ ಹೊಣೆಗಾರರಾಗುವರೆಂಬವನ್ನು ಅವರಿಗೆ ಮನದಟ್ಟು ಮಾಡಬೇಕಾಗಿದೆ. ಗಿರಣಿಯೊಡೆಯರಿಗೆ ಹಾಗೆ ಮಾಡುವದು ಲಾಭದಾಯಕವೆನಿಸಿದೊಡನೆ ಅವರು ಗಿರಣಿ ನೂಲನ್ನು ಹೊರಗೆ ಮಾರುವದನ್ನು ನಿಷೇಧಿಸಿ ತಮ್ಮ ಗಿರಣಿಗಳಲ್ಲೇ ನೇಯಿಸಿಕೊಳ್ಳತೊಡಗುವರು. ಅವರೇನು "ಧರ್ಮದಾತ"ರಲ್ಲ. ಅವರು ಗಿರಣಿಗಳನ್ನು ಸ್ಥಾಪಿಸಿದ್ದು ಹಣ ಗಳಿಸುವದಕ್ಕಾಗಿ. ತಮ್ಮ ನೂಲನ್ನು ತಾವೇ ನೇಯುವದು ಲಾಭದಾಯಕವೆಂದು ತೋರಿದರೆ ಅವರು ಕೈಮಗ್ಗದವರಿಗೆ ಮಾರುವದನ್ನು ನಿಲ್ಲಿಸಿಬಿಡುವರು. ಆದುದರಿಂದ ಇಂದಲ್ಲ ನಾಳೆ ಕೈಮಗ್ಗದ ನೇಕಾರರಿಗೆ ಉಪವಾಸ ಬೀಳುವ ಅವಸ್ಥೆ ಬಂದೇಬರುವದು. ಕೈಮಗ್ಗದವರಿಂದಲೇ ಕೈನೂಲಿನವರ ಹೊಟ್ಟೆಪಾಡು ಸಾಗುವಂತೆ ಕೈನೂಲಿನವರಿಂದಲೇ ನಿಜವಾಗಿ ಕೈಮಗ್ಗದವರ ಉದರಂಭರಣವಾಗುತ್ತಿದೆ. ಅವರು ಅನ್ಯೋನ್ಯಾಶ್ರಯಿಗಳಾದ ಅಶ್ವಿನೀಕುಮಾರರು. ಈ ಮಾತನ್ನು ಚರಖಾಸಂಘದವರು ನೇಕಾರರಿಗೆ ಮನವರಿಕೆ ಮಾಡಿಕೊಡಬೇಕು. ಪ್ರೀತಿಯುಕ್ತ ಸಹನೆಯಿಂದಲೂ ತಿಳಿವಳಿಕೆಯಿಂದಲೂ ಅವರು ನೇಕಾರರ ತೊಂದರೆಗಳನ್ನು ಮನಗಂಡು ಅವುಗಳನ್ನು ನಿವಾರಿಸಲು ಪ್ರಯತ್ನಿಸಬೇಕು. ಹಾಸಿನ ಹತ್ತಿ ಅಥವಾ ಮುದ್ದೆ ಮುಂದೆ ನೂಲನ್ನು ತೋರುತ್ತಿರವಾಗಲೆ ಹುರಿ, ಗಂಟೆ ಮಾಡಿಕೊಳ್ಳಬೇಕೆಂದು ಆಚಾರ್ಯ ವಿನೋಬಾ ಭಾವೆಯವರು ಒಂದು ಉಪಾಯ ಸೂಚಿಸುತ್ತಾರೆ. ಈ ಪದ್ಧತಿ ಸರ್ವತ್ರ ಪ್ರಚುರವಾದರೆ ಹುರಿಯಿಲ್ಲದ ಕೈನೂಲು ನೇಯ್ಗೆಗೆ ದೊರೆಯುವದೇ ಇಲ್ಲ. ಹುರಿ ನೂಲು ಯಾವಾಗಲೂ ಗಿರಣಿ ನೂಲಿಗಿಂತ ಹೆಚ್ಚಲ್ಲದಿದ್ದರೂ ಅಷ್ಟೇ ನೇಯ್ಗೆಗೆ ಯೋಗ್ಯವಾಗಿದೆಯೆಂಬುದು ಅನುಭವದ ಮಾತು. ನನ್ನ ಕೊನೆಯ ಸೆರೆಮನೆವಾಸದಿಂದ ಹೊರಬಂದಂದಿನಿಂದಲೂ ಕಾರ್ಯಕರ್ತರು ನೂಲುವ ಕಲೆಯನ್ನು ಸಿದ್ಧಿಸಿಕೊಂಡಂತೆ ನೇಯುವದನ್ನೂ ಸಿದ್ಧಿಸಿಕೊಳ್ಳಬೇಕೆಂದು ಸಾಧ್ಯವಿದ್ದಷ್ಟು ಕಳಕಳಿಯಿಂದ ಸಾರುತ್ತ ಬಂದಿದ್ದೇನೆ. ತಾವೇ ನೆಯ್ಗೆಯನ್ನೂ ಕೈಕೊಂಡ ವಿನಾ ನೂಲುವವರಿಗೆ ನೇಯ್ಗೆಯವರ ತೊಡಕುಗಳು ಅರ್ಥವಾಗುವಂತಿಲ್ಲ. ಈಗ ಅವರು ಹಿಂದಿನ ಅಲಕ್ಷ್ಯಕ್ಕೆ ಪರಿಹಾರ ರೂಪವಾಗಿ—ಆ ಅಲಕ್ಷ್ಯ ಉದ್ದೇಶರಹಿತವಾಗಿದ್ದರೂ—ನೇಯುವ ವಿದ್ಯೆಯನ್ನು ಕಲಿಯುವದಲ್ಲದೆ ಪಟ್ಟು ಹಿಡಿದು ಅದನ್ನು ಅಭ್ಯಸಿಸಬೇಕು. ಆಗ ಮಾತ್ರ ಅವರಿಗೆ, ಕೈನೂಲನ್ನು ನೇಯುವಲ್ಲಿ ಧಂದೆಗಾರ ನೇಕಾರರಿಗಾಗುವ ತೊಂದರೆಗಳ ತಿಳುವಳಿಕೆಯಾಗಬಲ್ಲದು. ಮತ್ತು ಅವುಗಳನ್ನು ಪರಿಹರಿಸುವ ಉಪಾಯ ಕಂಡು ಹಿಡಿಯುವದು ಸಾಧ್ಯವಾದೀತು.

ಉರುಳಿ, — ಮೋ. ಕ. ಗಾಂಧಿ
೨೪-೩-೪೬ (ಹರಿಜನ ಬಂಧುವಿನಿಂದ)

ಆಹಾರ ಕೊರತೆಯನ್ನು ಹೋಗಲಾಡಿಸುವದೆಂತು?

ಮತ್ತೆ ಹಲವು ಸೂಚನೆಗಳು

(ಕಳೆದ ಸಂಚಿಕೆಯಿಂದ ಮುಗಿಸಿದ್ದು)

೧೧) ಜೀವನದ ಪ್ರತಿಯೊಂದು ವಿಷಯದಲ್ಲಿ ಸಹಕಾರದ ಮಹತಿಯನ್ನು ತಿಳಿಸುವದಕ್ಕಾಗಿ ಬರಗಾಲ ಪರಿಸ್ಥಿತಿ ಒಳ್ಳೆ ಸಂಧಿಯನ್ನು ಕಲ್ಪಿಸಿ ಕೊಡುತ್ತದೆ. ಆದರೆ ಹಳ್ಳಿಗರನ್ನು ನಿಜವಾಗಿ ಪ್ರೀತಿಸುವವರಿಂದ ಅವರೊಡನೆ ಸಮರಸರಾಗಿ ಪ್ರಾಮಾಣಿಕತನದಿಂದ ಎಲ್ಲವೂ ಆಗುವಂತೆ ನೋಡಿಕೊಳ್ಳುವವರಿಂದಲೇ ಈ ಶಿಕ್ಷಣ ಕಾರ್ಯ ಸಾಗಬೇಕು.

ಸುಜ್ಞ ಮಿತ್ರರೊಬ್ಬರು ಹೀಗೆ ಬರೆಯುತ್ತಾರೆ:

“ಆಹಾರ ಪರಿಸ್ಥಿತಿ ಸಂಬಂಧದಲ್ಲಿ ನಾನು ಕೆಲ ತರುಣ ಸೈನ್ಯಾಧಿಕಾರಿಗಳೊಡನೆ ಮಾತುಕತೆ ನಡೆಸುತ್ತಿರುವೆನು. ತಮಗೆ ಶಕ್ಯವಿದ್ದುದನ್ನೆಲ್ಲ ಮಾಡಲು ಅವರು ಬಹಳ ದಕ್ಷ ಮತ್ತು ಆತುರ ಇರುವರು. ಒಕ್ಕಲತನದಲ್ಲಿ ಸ್ವಲ್ಪ ಶಿಕ್ಷಣ ಮತ್ತು ತಾವು ಮಾಡತಕ್ಕದ್ದೇನೆಂಬ ಬಗ್ಗೆ ನಿಶ್ಚಿತ ಸೂಚನೆಗಳು ಬೇಕೆಂದು ಅವರ ಅಪೇಕ್ಷೆ. ಈ ಎಂಜಿನಿಯರ ದಳದ ಗೂಡ ಕೆಲ ಒಕ್ಕಲತನ ತಜ್ಞರನ್ನು ಜೋಡಿಸುವದು ಅವಶ್ಯವಾಗಿದೆ. ಟ್ರಾಕ್ಟರ್ಸ ಮೊದಲಾದವುಗಳು ಅವರಲ್ಲಿ ಸಾಕಷ್ಟು ಇವೆ. ಆದರೆ ಗಳೇದ ಸಾಮಾನುಗಳನ್ನೂ ಮಾಡಬೇಕೆಂದು ಒತ್ತಾಯ ಪಡಿಸಬೇಕಿಲ್ಲ. ಇವೆಲ್ಲ ಸಾಧನಗಳನ್ನು ಅವರಿಗೆ ಪೂರೈಸಲಿಕ್ಕೆಬೇಕು. ತಮ್ಮ ಕೆಲಸದ ಪರಿಚಯವಿದ್ದವರ ನೇತೃತ್ವದಲ್ಲಿಯೇ ಸೈನಿಕರು ಕಾರ್ಯ ಮಾಡಬೇಕು. ಆದರೆ ದುರ್ದೈವದಿಂದ ಕೇಂದ್ರದಲ್ಲಿ ಧುರೀಣತ್ವವು ಬಹಳ ದುರ್ಬಲ ಮತ್ತು ಸಂಪೂರ್ಣ ಅದೂರದರ್ಶಿ ಆಗಿರುವದು. ವಾಯಿಸರಾಯರು ಈ ವಿಷಯವನ್ನು ತಮ್ಮ ಕೈಯಲ್ಲಿ ತೆಗೆದುಕೊಂಡದ್ದು ಉಚಿತವಾಗಿದೆ. ಆದರೆ ಈ ವ್ಯಾಪಕವಾದ ಸಮಸ್ಯೆಯನ್ನು ಕಾರ್ಯರೂಪದಲ್ಲಿ ತರುತ್ತಿರುವ ಅಧಿಕಾರಿಗಳು ಮಾತ್ರ ಇನ್ನೂ ಹೆಚ್ಚು ಸಂಘಟಿತರಾಗಿಲ್ಲ. ಗಣಿತದ ಆಧಾರದಿಂದ ಈ ಸಮಸ್ಯೆಯನ್ನು ಇಂತು ವಿವರಿಸಬಹುದು.

“ಹಿಂದುಸ್ತಾನದಲ್ಲಿ ಸಣ್ಣ ಧಾನ್ಯದ ವಾರ್ಷಿಕ ಉತ್ಪಾದನೆ ೬೦೦ ಲಕ್ಷ ಟನ್ ಇದೆ. ಅದರಲ್ಲಿ ೧೮೦ ಲಕ್ಷ ಟನ್ ಪೇಟೆಗೆ ಬರುತ್ತದೆ. ಅಧಿಕಾರಿಗಳ ಲೆಕ್ಕದಂತೆ ೬೦ ಲಕ್ಷ ಟನ್ ಅಂದರೆ ಇಡೀ ವರ್ಷದಲ್ಲಿ ಪೇಟೆಗೆ ಬರತಕ್ಕ ಧಾನ್ಯದ ಒಂದು ಮೂರಾಂಶದಷ್ಟು ಕೊರತೆಯಿದೆ. ಸಾರಿಗೆ ದೃಷ್ಟಿಯಿಂದ ವಿಚಾರ ಮಾಡಿದರೆ ಇದು ಬಹಳ ಹೆಚ್ಚೆಂದೆನಿಸದಿರಲಾರದು. ಮುಂಬಯಿ ದಕ್ಷಿಣ ಭಾಗ ಮತ್ತು ಮೈಸೂರ ತ್ರಾವಣಕೋರಗಳನ್ನೊಳಗೊಂಡ ಇಡೀ ಮದ್ರಾಸ ಪ್ರಾಂತಕ್ಕೆ ಮುಖ್ಯವಾಗಿ ಧಾನ್ಯ ಕಳಿಸಬೇಕಾಗಿದೆಂಬದನ್ನು ನೆನೆದರೆ ಈ ಸಮಸ್ಯೆ ಒಳ್ಳೇ ಭಯೋತ್ಪಾದಕವೆಂದು ತೋರದಿರದು. ಹೊರಗಿನಿಂದ ೩೦—೮೦ ಲಕ್ಷ ಟನ್ ಕಾಳು ಬರುವ ಸಂಭವವಿದೆ. ಆದರೆ ನಮ್ಮ ಪಶ್ಚಿಮ ಮತ್ತು ಆಗ್ನೇಯ ಭಾಗದ ಬಂದರಗಳಲ್ಲಿ ಇದರ ಒಂದು ಕಾಲು ಧಾನ್ಯದ ಸಂಗ್ರಹ ಮುಂತಾದ್ದನ್ನು ಮಾಡುವದು ಕೂಡ ಅಶಕ್ಯ. ಧಾನ್ಯ ಸಂಗ್ರಹಾಲಯವಿಲ್ಲ ಅಥವಾ ಬಂದರಗಳಲ್ಲಿ ವ್ಯವಹಾರ ನಡೆಸುವಸೌಕರ್ಯಗಳಿಲ್ಲ. ರೇಲ-ರೋಡುಗಳಲ್ಲಿ ವ್ಯವಹಾರ ಸಾಗಿಸಲೂ ಸೌಕರ್ಯಗಳಿಲ್ಲ. ವಿವರವಾಗಿ ಈ ಸಮಸ್ಯೆಯನ್ನು ಕಾರ್ಯಕಾರಿ ಮಾಡದೆ ಇದ್ದುದರಿಂದ ಲಕ್ಷಾಂತರ ಜನ ಉಪವಾಸ ಬಳಲುವ ಗಂಡಾಂತರವುಂಟಾಗಿದೆ. ಬಂದರಗಳಲ್ಲಿ ಕಾಳುಗಳು ಕೆಡಹತ್ತಿವೆ ಇಲ್ಲವೆ ಹಡಗಗಳಿಂದ ಕೆಳಗಿಳಿಸುವವರು ಕೂಡ ದಿಕ್ಕಿಲ್ಲದ ಪರಿಸ್ಥಿತಿಯುಂಟಾಗಿದೆ. ಒಂದು ಗೂಡ್ಸಗಾಡಿಗೆ ೫೮ ವಾಗಿನುಗಳು ಇರುತ್ತವೆ. ಅವುಗಳಲ್ಲಿ ಪ್ರತಿಸಲ ೮೦೦೦ ಟನ್ ಧಾನ್ಯ ಮಾತ್ರ ಒಯ್ಯಲಾಗುತ್ತದೆ. ಇಂಥದೊಂದು ಗುಡ್ಸಗಾಡಿಯಲ್ಲಿಯ ಕಾಳುಗಳನ್ನೆಲ್ಲ ಇಳಿಸಬೇಕಾದರೆ ೩-೫ ದಿನಗಳು ಬೇಕಾಗುವವು. ಇದಕ್ಕಾದರೂ ಅವಶ್ಯಕ ಕೂಲಿಕಾರರು ಮತ್ತು ಸ್ಥಳ ಬೇಕು. ಎರಡೂ ಕಡೆ ಕಾಳು ಇಳಿಸಲು ಬೇಕಾದ ವೇಳೆ ಕೂಡಿಸಿದರೆ ಇದಕ್ಕೆಲ್ಲ ಎಷ್ಟುಸಮಯ ಹತ್ತುತ್ತದೆಂಬುದು ಗೊತ್ತಾಗುವದು. ೩೦ ಲಕ್ಷ ಟನ್ ಧಾನ್ಯ ಹೊರಗಿನಿಂದ ಬರುತ್ತಿದ್ದರೆ ಆದಕ್ಕಾಗಿ ೩೦೦೦ ಸ್ಪೆಶಲ್ ಗುಡ್ಸಗಾಡಿಗಳು ಬೇಕು. ಅವುಗಳಲ್ಲಿ ಕನಿಷ್ಠ ಅರ್ಧದಷ್ಟು ಗಾಡಿಗಳು ಮೊದಲಿನ ೧೫೦ ದಿನಗಳಲ್ಲಿ ಓಡಾಡಬೇಕಾಗುವುದು. ಅಂದರೆ ಪ್ರತಿ ದಿನ ೧೦ ರಂತೆ ಗಾಡಿಗಳ ಓಡಾಟ ನಡೆಯಬೇಕು. ಅತ್ಯುತ್ತಮ ಪರಿಸ್ಥಿತಿಯಲ್ಲಿಯೂ ಇದು ಸಾಧ್ಯವಿಲ್ಲ. ನಮ್ಮ ಪಶ್ಚಿಮ ಬಂದರಗಳಲ್ಲಿಯ ಮರ್ಯಾದಿತ ಅನುಕೂಲತೆಗಳು ಮತ್ತು ದಕ್ಷಿಣ ಹಿಂದುಸ್ತಾನದಲ್ಲಿರುವ ರೇಲ್ವೆ ಲಾಯಿನಗಳಲ್ಲಿಯ ಅನನುಕೂಲತೆ ಮುಂತಾದ್ದನ್ನು ಲಕ್ಷಿಸಿದರೆ ಇದನ್ನೆಲ್ಲ ನಾವು ಹೇಗೆ ಸರಿಪಡಿಸಿಕೊಳ್ಳಬಹುದೋ ತಿಳಿಯದಾಗಿದೆ. ಸಾರ್ವಜನಿಕರ ಮತ್ತು ಸೈನ್ಯಖಾತೆಯ ವಶದಲ್ಲಿದ್ದ ರೇಲ್ವೆ ಮತ್ತು ಮಾರ್ಗಸಾರಿಗೆಯ ಸೌಕರ್ಯಗಳನ್ನೆಲ್ಲ ಧಾನ್ಯ ಸಾರಿಗೆಗೆ ಒದಗಿಸಿಕೊಡಬೇಕು. ಆದರೆ ಪ್ರಾಂತಿಕ ಇಲ್ಲವೆ ಕೇಂದ್ರ ಸರಕಾರ ಇದೆಲ್ಲವನ್ನು ನಿಚ್ಚಳವಾಗಿ ವಿಚಾರಮಾಡದಿದ್ದುದು ದುರ್ದೈವದ ಸಂಗತಿಯಾಗಿದೆ. ಈ ವರ್ಷ ಅಷ್ಟೇ ಅಲ್ಲದೆ ಬರುವ ವರ್ಷದಲ್ಲಿ ನಮಗೆ ಬೇಕಾಗುವ ಧಾನ್ಯ ಅಂದರೆ ಸದ್ಯದ ಜನಸಂಖ್ಯೆಯ ಮಾನದಿಂದ ೭೦ ಲಕ್ಷ ಟನ್ ಹೆಚ್ಚು ಧಾನ್ಯದ ಉತ್ಪಾದನೆ ಹಾಗು ೧೯೫೩ ರಲ್ಲಿ ಆಗಬಹುದಾದ ೪೫ ಕೋಟಿ ಜನರ ಹೊಟ್ಟೆಗೆ ಬೇಕಾಗುವ ೧೮೦ ಲಕ್ಷ ಟನ್ ಧಾನ್ಯದ ಉತ್ಪಾದನೆಯ ಅವಶ್ಯಕತೆಯಿದೆ. ಆದರೆ ಈ ಸಮಸ್ಯೆಯ ಭೀಕರತೆಯನ್ನು ಸರಕಾರ ತಿಳಿದುಕೊಳ್ಳುವಂತೆ ಮಾಡುವದು ತೀರ ಅಶಕ್ಯವಾಗಿದೆಂದು ನೆನೆದರೆ ನನಗೆ ಹಲವು ಸಲ ಭೀತಿಯೆನಿಸುತ್ತದೆ. ಅದುದರಿಂದ ಹೊರಗಿನಿಂದ ನಿಯಮಿತವಾಗಿ ಕಾಳು ಬರುವದೆಂದು ಗ್ರಹಿಸಿದರೂ ಆ ಹೊರಗಿನ ಭಿಕ್ಷೆಯ ಆಸೆಯನ್ನೆ ಅವಲಂಬಿಸಿ ನಾವು ಸ್ವಸ್ಥ ಕೂಡ್ರತಕ್ಕದ್ದಲ್ಲ. “ಗಾಂಧೀಜಿಯವರು ಹೇಳಿದಂತೆ ಸ್ವಾವಲಂಬನವೇ ಇದಕ್ಕೆ ತರಣೋಪಾಯವು. ನಮ್ಮ ಉತ್ಪಾದನೆಯನ್ನು ಹೆಚ್ಚಿಸುವುದಕ್ಕಾಗಿ ಪರಿಣಾಮಕಾರಿಯಾದ ಉಪಾಯಗಳನ್ನು ಕೂಡಲೆ ಯೋಜಿಸಬೇಕು; ಸಂಗ್ರಹಾಲಯ ವ್ಯವಸ್ಥೆಯೂ ಆಗಬೇಕಲ್ಲದೆ ಸಾರಿಗೆಯಲ್ಲಿ ಆಗಬಹುದಾದ ವಿಲಂಬವನ್ನು ತಡೆಯಲಿಕ್ಕೆ ಬೇಕು. ಸರಿಯಾಗಿ ಸಂಗ್ರಹಿಸಿದ್ದರಿಂದ ಮತ್ತು ಹುಳುಗಳ ಹಾವಳಿಯಿಂದ ಆಗಬಹುದಾದ ನಾಶವನ್ನು, ಬಹಳ ನಾಶವನ್ನೂ ತಪ್ಪಿಸಬಹುದಾಗಿದೆ ತಪ್ಪಿಸಲಿಕ್ಕೇ ಬೇಕು. ಆದರೆ ಅಧಿಕಾರಿ ವರ್ಗಕ್ಕೆ ಜಂಗು ತಿಂದದ್ದರಿಂದ ವಾಯಿಸರಾಯರು ಅದರಲ್ಲಿ ಚೈತನ್ಯ ಹುಟ್ಟಿಸಲು ಪ್ರಯತ್ನಿಸಿದರೂ ಯಶಸ್ವಿಯಾಗಲಾರರು. ಅಧಿಕಾರಿ ವರ್ಗ ಮತ್ತು ಸಾರ್ವಜನಿಕ ಕಾರ್ಯಕರ್ತರು ಸಂಪೂರ್ಣ ಸಹಕರಿಸಿ ಸಂಸ್ಥೆಯ ವಿವರಗಳನ್ನೆಲ್ಲ ತಿಳಿದುಕೊಂಡು ಕಾರ್ಯಮಾಡಲು ಪ್ರವೃತ್ತರಾದರೆ ಮಾತ್ರ ಇದು ಸಾಧ್ಯವಿದೆ. ಆದರೆ ಇದೇ ದೊಡ್ಡ ಅಡಚಣೆ. ಇದೀಗ ನಾವು ಬಹಳ ಗಂಡಾಂತರದ ಪರಿಸ್ಥಿತಿಯಲ್ಲಿರುವುದರಿಂದ ಕನಿಷ್ಠ ಆಹಾರದ ಪ್ರಶ್ನೆಯಲ್ಲಿಯಾದರೂ ಕೇಂದ್ರದಲ್ಲಿ ಬದಲಾವಣೆಯಾಗುವದೆಂದು ನಾನು ನಂಬುತ್ತೇನೆ. ಹೊಣೆಗಾರ ಅಧಿಕಾರಿಗಳು ಯೋಜನೆಗಳನ್ನು ಕಾರ್ಯಕಾರಿ ಮಾಡಲು ಸಕಾಲದಲ್ಲಿ ಅಣಿಯಾಗದಿದ್ದರೆ ಹೊರಗಿನಿಂದ ಬರುವ ಸಹಾಯವು ನಮ್ಮ ತೀವ್ರ ಅಯೋಗ್ಯತೆಯನ್ನು ವ್ಯಕ್ತಪಡಿಸುತ್ತದೆ. ಆದರೆ ಇದರ ಲಕ್ಷಣಗಳೇನೂ ಕಾಣುವುದಿಲ್ಲ.”

ಪುಣೆ ಅ. ಕಾ.
೧೦-೩-೪೬

ಗಾಂಧೀಜಿಯ ಸಮಷ್ಟಿವಾದ

(೭ ನೇ ಪುಟದಿಂದ ಮುಂದರಿದುದು)

ನೋವಾಗುತ್ತದೆ. ಬಡ ಹಳ್ಳಿಗರನ್ನು ವಿದೇಶಿ ಸರಕಾರ ಮಾತ್ರವಲ್ಲದೆ ಅವರ ದೇಶಬಾಂಧವರಾದ ನಗರ ನಿವಾಸಿಗಳೂ ಶೋಷಿಸುತ್ತಾರೆ. ಹಳ್ಳಿಗರು ಆಹಾರವನ್ನು ಉತ್ಪಾದನೆ ಮಾಡಿ ತಾವು ಉಪವಾಸ ಬೀಳುತ್ತಾರೆ. ಅವರು ಹಾಲು ಹುಟ್ಟಿಸುತ್ತಾರೆ. ಆದರೆ ಅವರ ಮಕ್ಕಳಿಗೇ ಹಾಲಿಲ್ಲ. ಇದು ನಾಚಿಕೆಗೇಡು. ಪ್ರತಿಯೊಬ್ಬನಿಗೂ ಸಮಧಾತುವಾದ ಆಹಾರ, ಉಳಿದುಕೊಳ್ಳಲು ಪ್ರಶಸ್ತವಾದ ಮನೆ, ಮಕ್ಕಳ ವಿದ್ಯಾಭ್ಯಾಸಕ್ಕೆ ಯೋಗ್ಯ ಸೌಕರ್ಯಗಳು ಮತ್ತು ಸರಿಯಾದ ವೈದ್ಯಕೀಯ ಸಹಾಯ ದೊರಕಬೇಕು. ಇದು ಗಾಂಧೀಜಿಯ ಕಲ್ಪನೆಯ ಆರ್ಥಿಕ ಸಾಮ್ಯದ ಚಿತ್ರ. ಜೀವನದ ಕೇವಲ ಅವಶ್ಯಕತೆಗಿಂತ ಹೆಚ್ಚಿನದೆಲ್ಲವನ್ನೂ ಬಹಿಷ್ಕರಿಸಬೇಕೆಂದು ಅವರ ಇಚ್ಛೆಯಲ್ಲ. ಆದರೆ ಬಡವರ ಮುಖ್ಯ ಅವಶ್ಯಕತೆಗಳನ್ನು ಪೂರೈಸಿದ ನಂತರ ಅವು ಬರಬೇಕು. ಮೊದಲಾಗಬೇಕಾದುದು ಮೊದಲಾಗಬೇಕು.

ಶಾಸನಬದ್ಧ ವಿಶ್ವಸ್ತಿಕೆ

ಸದ್ಯಕ್ಕೆ ಶ್ರೀಮಂತಿಕೆಯುಳ್ಳವರ ಮಟ್ಟಿಗೆ ಅವರು ವರ್ಗಯುದ್ಧವನ್ನು ಇದಿರಿಸಬೇಕು, ಇಲ್ಲವೆ ಸ್ವೇಚ್ಛೆಯಿಂದ ತಮ್ಮ ಸಂಪತ್ತಿನ ವಿಶ್ವಸ್ತರಾಗಿ ಮಾರ್ಪಡಬೇಕು. ಅವರ ಸೊತ್ತುಗಳ ಮೇಲ್ವಿಚಾರಣೆಯ ಅಧಿಕಾರವನ್ನು ಅವರಿಗೇ ಬಿಡಲಾಗುವದು. ಸಂಪತ್ತನ್ನು ಅಭಿವೃದ್ಧಿಗೊಳಿಸುವದಕ್ಕಾಗಿ ಅವರು ತಮ್ಮ ಕೌಶಲವನ್ನು ಉಪಯೋಗಿಸಬಹುದು. ಆದರೆ ಈ ಸಂಪದಭಿವೃದ್ಧಿ ಅವರ ಸ್ವಂತ ಉಪಯೋಗಕ್ಕಲ್ಲ, ರಾಷ್ಟ್ರದ ಹಿತಕ್ಕಾಗಿ ಇರಬೇಕು. ಅದುದರಿಂದಲೇ ಅದು ಶೋಷಣೆಯಿಂದ ನಿರ್ಲಿಪ್ತವಾಗಿರಬೇಕು. ಅವರು ಸಮಾಜಕ್ಕೊದಗಿಸುವ ಸೇವೆ ಮತ್ತು ಸಮಾಜಕ್ಕೆ ಅದರಿಂದಾಗುವ ಪ್ರಯೋಜನದ ಹದವನ್ನರಿತು ಸರಕಾರ ಅವರಿಗೆ ಕೊಡಬೇಕಾದ ಶುಲ್ಕವನ್ನೂ ನಿರ್ಧರಿಸೀತು. ಅವರ ಮಕ್ಕಳು ತಮ್ಮ ಯೋಗ್ಯತೆಯನ್ನು ಪ್ರದರ್ಶಿಸಿದರೆ ಮಾತ್ರ ಆ ಮೇಲ್ವಿಚಾರಣೆಯ ಹಕ್ಕು ಅವರಿಗೆ ದೊರೆತೀತು.

“ನಾಳೆ ಹಿಂದುಸ್ತಾನ ಸ್ವತಂತ್ರ ದೇಶವಾದರೆ,” ಗಾಂಧೀಜಿ ಉಪಸಂಹರಿಸುತ್ತ ಅಂದರು, “ಎಲ್ಲ ಬಂಡವಲಗಾರರಿಗೂ ಶಾಸನಬದ್ಧ ವಿಶ್ವಸ್ತರಾಗುವ ಅವಕಾಶ ಕೊಡಬಹುದು.” ಆದರೆ ಅಂಥ ಶಾಸನವನ್ನು ಅವರ ಮೇಲೆ ಬಲವಂತದಿಂದ ಹೇರಲಾಗುವದಿಲ್ಲ. ಅದು ಕೆಳಗಿಂದಲೇ ಬರಬೇಕಾಗುವದು. ವಿಶ್ವಸ್ತಿಕೆಯ ಅರ್ಥಗಳನ್ನು ಜನರು ಗ್ರಹಿಸಿದ ನಂತರ ಮತ್ತು ವಾತಾವರಣ ಅದಕ್ಕೆ ಹದವಾದಾಗ ಗ್ರಾಮಪಂಚಾಯತಿಯಿಂದ ಆರಂಭಿಸಿ, ಜನರೇ ಇಂಥ ಶಾಸನಗಳನ್ನು ಬಳಕೆಗೆ ತರತೊಡಗುವರು. ಕೆಳಗಿನಿಂದ ಬಂದರೆ ಇಂಥ ಸಂಗತಿಗಳನ್ನು ಸುಲಭವಾಗಿ ನುಂಗಿ ಅರಗಿಸಿಕೊಳ್ಳಬಹುದು. ಮೇಲಿನಿಂದ ಹೊರಿಸಿದರೆ ಅದು ಜಡಭಾರವೆನಿಸುವ ಸಂಭವವುಂಟು.

ಸಾಮ್ಯವಾದಿಗಳೊಡನೆ ಮತಭೇದ

ಪ್ರಶ್ನೆ:— ಆರ್ಥಿಕ ಸಾಮ್ಯವನ್ನು ಸಾಧಿಸುವಲ್ಲಿ ನಿಮ್ಮ ತಂತ್ರಕ್ಕೂ ಸಮಷ್ಟಿವಾದಿಗಳ ಹಾಗು ಸಾಮ್ಯವಾದಿಗಳ ತಂತ್ರಕ್ಕೂ ಇರುವ ಭೇದವೇನು?

ಉತ್ತರ:— ಇಂದೇ ಆರ್ಥಿಕ ಸಮಾನತೆಯನ್ನು ತಂದೊಡ್ಡಲಿಕ್ಕೆ ಏನು ಮಾಡಲೂ ತಮ್ಮಿಂದಾಗದೆಂದು ಸಾಮ್ಯವಾದಿಗಳೂ ಸಮಷ್ಟಿವಾದಿಗಳೂ ಹೇಳುತ್ತಾರೆ. ಅದಕ್ಕಾಗಿ ಅವರು ಬರಿ ಪ್ರಚಾರವನ್ನಷ್ಟೆ ಮಾಡುವರು ಮತ್ತು ಗುರಿ ಸಾಧಿಸಲು ದ್ವೇಷವನ್ನು ಹುಟ್ಟಿಸಿ ಬೆಳಸುವದೇ ಉಪಾಯವೆಂದು ಅವರು ನಂಬುವರು. ಅವರನ್ನುತ್ತಾರೆ, ನಾವು ಸರಕಾರವನ್ನು ವಶಪಡಿಸಿಕೊಂಡ ಮೇಲೆ ಸಮಾನತೆಯನ್ನು ಬಲವಂತದಿಂದ ಆಚರಣೆಗೆ ತರುವೆವು, ಎಂದು. ಆದರೆ ನನ್ನ ಯೋಜನೆಯಂತೆ ಸರಕಾರವಿರುವದು ಜನತೆಯ ಇಚ್ಛೆಯನ್ನು ಪಾಲಿಸಲು, ಹೊರತು ಜನತೆಯ ಮೇಲೆ ತನ್ನ ಇಚ್ಛೆಯನ್ನು ಹೇರುವದಕ್ಕಲ್ಲ. ನಾನು ಅಹಿಂಸೆಯಿಂದ, ಜನರನ್ನು ನನ್ನ ದೃಷ್ಟಿಕೋನಕ್ಕೆ ತಿರುಗಿಸಿ, ದ್ವೇಷದ ಬದಲು ಪ್ರೇಮದ ಸತ್ವಗಳನ್ನು ಒಂದುಗೂಡಿಸುವ ಮೂಲಕ, ಆರ್ಥಿಕ ಸಮಾನಿಕತೆಯನ್ನು ತಂದೊಡ್ಡುವೆನು. ಇಡಿ ಸಮಾಜವನ್ನು ನನ್ನ ದೃಷ್ಟಿಕೋನಕ್ಕೆ ಬದಲಿಸುವವರೆಗೆ ನಾನು ಕಾಯುವದಿಲ್ಲ. ನನ್ನಿಂದಲೇ ನೇರವಾಗಿ ಆರಂಭಿಸುವೆ. ನಾನು ೫೦ ಮೋಟಾರ ಕಾರುಗಳ ಒಡೆಯನಾಗಿದ್ದರೆ ಅಥವಾ ಬರಿ ಹತ್ತು ಬಿಘೆ ಭೂಮಿಯ ಸ್ವಾಮಿಯಾಗಿದ್ದರೆ ಸಹ, ನನ್ನ ಕಲ್ಪನೆಯ ಆರ್ಥಿಕ ಸಾಮ್ಯವನ್ನು ತಂದೊಡ್ಡುವದು ಸಾಧ್ಯವಿಲ್ಲವೆಂದು ನನಗೆ ಚೆನ್ನಾಗಿ ಗೊತ್ತಿದೆ. ಅದಕ್ಕಾಗಿ ನಾನು ನನ್ನನ್ನು ಬಡವನಿಗಿಂತ ಬಡವನ ಸ್ಥಿತಿಗೆ ಇಳಿಸಿಕೊಳ್ಳಬೇಕಾಗಿದೆ. ಹಾಗೆ ಮಾಡುವದನ್ನೇ ನಾನು ಕಳೆದ ೫೦ ವರ್ಷ ಕಾಲದಿಂದಲೂ ಪ್ರಯತ್ನಿಸುತಿದ್ದೇನೆ. ಅದುದರಿಂದಲೇ ನನಗಾಗಿ ಶ್ರೀಮಂತರು ಒದಗಿಸುವ ಮೋಟಾರ ಕಾರುಗಳೇ ಮೊದಲಾದ ಸೌಕರ್ಯಗಳನ್ನು ಉಪಯೋಗಿಸುತಿದ್ದರೂ ನಾನು ಪ್ರಮುಖತಮ ಸಮಷ್ಟಿವಾದಿಯೆಂದು ಹೇಳಿಕೊಳ್ಳುತ್ತೇನೆ. ನನ್ನ ಮೇಲೆ ಅವರ ಹಿಡಿತ ಸ್ವಲ್ಪವೂ ಇಲ್ಲ. ಅವರ ಸಹಾಯವನ್ನು, ಜನತೆಯ ಹಿತಕ್ಕಾಗಿ ಹಾಗೆ ಮಾಡಬೇಕಾದುವದು ಅವಶ್ಯವೆಂದೆನಿಸಿದರೆ, ಒಂದೇ ಕ್ಷಣದಲ್ಲಿ ನಾನು ತೊರೆದುಬಿಡಬಲ್ಲೆ.

ಅಹಿಂಸೆಯ ಅಧಿಕಾರ

ಪ್ರಶ್ನೆ— ಬಡವರ ವಿಷಯದಲ್ಲಿ ಶ್ರೀಮಂತರ ಕರ್ತವ್ಯವನ್ನು ಅವರಿಗೆ ಮನವರಿಕೆ ಮಾಡಿಕೊಡುವಲ್ಲಿ ಸತ್ಯಾಗ್ರಹದ ಸ್ಥಾನವೇನು?

ಉತ್ತರ ವಿದೇಶೀಸರ್ಕಾರದ ವಿರುದ್ಧ ಹೋರಾಡುವಲ್ಲಿ ಅದರ ಸ್ಥಾನವೇನೋ ಅದೇ. ಸತ್ಯಾಗ್ರಹವೆಂಬುದು ಸರ್ವಂಕಷವಾದ ಧರ್ಮ. ಕುಟುಂಬದಿಂದ ಆರಂಭಿಸಿ ಪ್ರತಿಯೊಂದು ವಲಯಕ್ಕೂ ಅದನ್ನು ವಿಸ್ತರಿಸಬಹುದು. ಜಮೀನದಾರನೊಬ್ಬನು ತನ್ನ ಒಕ್ಕಲುಗಳನ್ನು ಶೋಷಿಸಿ ಅವರ ಶ್ರಮದ ಫಲದಿಂದ ಅವರನ್ನು ವಂಚಿಸಿ ತನ್ನ ಉಪಯೋಗಕ್ಕೆ ಅದನ್ನು ಬಳಸಿಕೊಳ್ಳುತ್ತಾನೆಂದು ಭಾವಿಸೋಣ. ಅವರು ಅವನೊಡನೆ ವಾದಿಸಿದರೆ, ಅವನು ಕಿವಿಗೊಡುವದಿಲ್ಲ. ತನ್ನ ಹೆಂಡತಿಗಾಗಿ ಅಷ್ಟು ಬೇಕು, ತನ್ನ ಮಕ್ಕಳಿಗೆ ಇಷ್ಟು ಬೇಕು ಎಂದು ಮುಂತಾಗಿ ಆಕ್ಷೇಪ ಎತ್ತುತ್ತಾನೆ. ಒಕ್ಕಲುಗಳು ಅಥವಾ ಅವರಲ್ಲಿ ಒಡೆಯನೊಡನೆ ವಾದಿಸಿದವರು ಮತ್ತು ಪ್ರಭಾವವುಳ್ಳವರು ಅವನ ಹೆಂಡತಿಯೊಡನೆ ಗಂಡನ ಮಳವೊಲಿಸಲು ಕೇಳಿಕೊಳ್ಳುವರು. ಬಹಳ ಮಟ್ಟಿಗೆ ಅವಳು ಅವನ ಸೂರೆಮಾಡಿದ ಹಣ ತನಗೆ ಬೇಕಾಗಿಲ್ಲವೆಂದು ಹೇಳಬಹುದು. ಮಕ್ಕಳೂ ತಮ್ಮ ಜೀವಿಕೆಯನ್ನು ತಾವೇ ಗಳಿಸಿಕೊಳ್ಳುವದಾಗಿ ಹೇಳುವರು.

ಮುಂದೆ, ಒಡೆಯನು ಯಾರ ಮಾತಿಗೂ ಕಿವಿಗೊಡುವದಿಲ್ಲೆಂದಾಗಲಿ ಅವನ ಹೆಂಡತಿ ಮಕ್ಕಳೆಲ್ಲ ಒಕ್ಕಲುಗಳ ವಿರುದ್ಧ ಅವನೊಡನೆ ಒಂದಾಗುವರೆಂದಾಗಲಿ ತಿಳಿದುಕೊಳ್ಳೋಣ. ಆದರೂ ಒಕ್ಕಲುಗಳು ಬಗ್ಗಲಿಕ್ಕಿಲ್ಲ. ಹೊರಟು ಹೋಗಲು ಹೇಳಿದರೆ ಅವರು ಹೊರಟು ಹೋಗಲು ಸಿದ್ಧರಾಗುವರು. ಆದರೆ ಭೂಮಿಯ ಸ್ವಾಮಿ ನಿಜವಾಗಿ ಉಳುವವನೆ ಎಂದು ಅವನಿಗೆ ಅವರು ನಿಚ್ಚಳವಾಗಿ ಹೇಳಿಬಿಡುವರು. ಒಡೆಯನೇನು ತಾನೇ ಭೂಮಿಯನ್ನೆಲ್ಲ ಉಳಲಾರ. ಆಗ ಅವನು ಅವರ ನ್ಯಾಯವಾದ ಬೇಡಿಕೆಗಳಿಗೆ ತಲೆವಾಗುವನು. ಆದರೆ, ಈ ಒಕ್ಕಲುಗಳನ್ನು ಎಬ್ಬಿಸಿ ಒಡೆಯನು ಬೇರೆ ಒಕ್ಕಲುಗಳನ್ನು ಹಾಕುವ ಸಂಭವವೂ ಇದೆ. ಆಗ ಹಿಂಸೆಯಿಂದ ನಿರ್ಲಿಪ್ತವಾದ ಚಳವಳಿ ನಡೆಯುವದು. ಓಡಿಸಿದ ಒಕ್ಕಲುಗಳ ಸ್ಥಾನದಲ್ಲಿ ಬಂದ ಹೊಸ ಒಕ್ಕಲುಗಳು ತಮ್ಮ ತಪ್ಪನ್ನು ಕಂಡುಕೊಂಡು ಹಳೆಯ ಒಕ್ಕಲುಗಳೊಡನೆ ಒಂದಾಗುವವರೆಗೂ ಅದು ಸಾಗುವದು. ಹೀಗೆ ಸತ್ಯಾಗ್ರಹವು ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವ ಮಾರ್ಗವಾಗಿದ್ದು ಅದು ಸಮಾಜದ ಎಲ್ಲ ಸತ್ವಗಳನ್ನೂ ವ್ಯಾಪಿಸಿ ಕೊನೆಗೆ ಅಜೇಯ ಶಕ್ತಿಯಾಗುತ್ತದೆ. ಹಿಂಸೆಯಿಂದ ಮುನ್ನಡೆಯ ಮಾರ್ಗದಲ್ಲಿ ತಡೆಯುಂಟಾಗಿ ಇಡೀ ಸಮಾಜ ಸ್ವರೂಪದ ನಿಜವಾದ ಕ್ರಾಂತಿಯನ್ನು ವಿಲಂಬಗೊಳಿಸುತ್ತದೆ.

ಸತ್ಯಾಗ್ರಹ ಯಶಸ್ವಿಯಾಗಬೇಕಾದರೆ ಅವಶ್ಯಂಭಾವಿಯಾದ ನಿರ್ಬಂಧಗಳಿವು:— (೧) ಸತ್ಯಾಗ್ರಹಿಯ ಹೃದಯದಲ್ಲಿ ವಿರೋಧಿಯ ಬಗ್ಗೆ ಲೇಶವೂ ದ್ವೇಷವಿಂಕೂಡದು. (೨) ಹೋರಾಟದ ವಿಷಯ ಸತ್ಯವೂ ಗುರುತರವೂ ಆಗಿರಬೇಕು. (೩) ತನ್ನ ಧ್ಯೇಯಕ್ಕಾಗಿ ಕೊನೆಯ ವರೆಗೆ ಸಂಕಷ್ಟಗಳನ್ನು ಅನುಭವಿಸಲು ಸತ್ಯಾಗ್ರಹಿ ಸಿದ್ಧನಾಗಿರಬೇಕು.

ಪುಣೆ —ಪ್ಯಾರೇಲಾಲ
೪—೩—೪೬

ಕರ್ನಾಟಕ

ಧಾರವಾಡ

೧೯೪೪ ನೇ ಇಸ್ವಿಯ ಪ್ರಾರಂಭದಲ್ಲಿ ರಾಣೇಬೆನ್ನೂರಿನಿಂದ ಕೊಡಿಯಾಲ ಗ್ರಾಮದ ಗೌಡರಲ್ಲಿಯ ೪೬೬ ಚೀಲ ಶೇಂಗಾ ಅವರ ಒಪ್ಪಿಗೆಯಿಲ್ಲದೆ ಮೈಸೂರು ಸೀಮೆಗೆ ಸಾಗಿಸಿದ ಆರೋಪದ ಮೇಲೆ ೧೫ ಜನರ ಮೇಲೆ ಖಟ್ಲೆ ಹಾಕಲಾಗಿತ್ತು. ಅದರ ವಿಚಾರಣೆಯಾಗಿ ಫೌಜದಾರ ಶ್ರೀ ಬಾಳಕೃಷ್ಣ ಸಾಡರ್ಜಿ ಇವರಿಗೆ ೬೦೦ ರೂ. ದ್ಯಾಮಣ್ಣಾ ಹುತ್ತಲ ಇವರಿಗೆ ೬೦೦ ರೂ. ಕೃಷ್ಣಪ್ಪ ಕಂಬಳಿ ಅವರಿಗೆ ೪೦೦ ರೂ. ವಿಷ್ಣು ಬಾಡಕರ ಹೆಡ್‌ಕ್ಲಾರ್ಕ ೪೦೦ ರೂಪಾಯಿಗಳಂತೆ ದಂಡ ವಿಧಿಸಲಾಯಿತು. ದಂಡ ಕೊಡದಿದ್ದರೆ ಪ್ರತಿಯೊಬ್ಬರಿಗೆ ೪ ತಿಂಗಳ ಶಿಕ್ಷೆ ಅನುಭವಿಸಬೇಕು. ಧಾರವಾಡ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರ ಈ ನಿರ್ಣಯದ ವಿರುದ್ಧ ಅಪೀಲ ಮಾಡಲಾಗಿದೆ.

ಹಿರೇಕೆರೂರಲ್ಲಿ ಹಾಯಸ್ಕೂಲ ಸ್ಥಾಪಿಸಲು ಶ್ರೀ ಪ್ರಭಪ್ಪ ಹಾದ್ರಿಹಳ್ಳಿಯವರು ಅನ್ನಸತ್ಯಾಗ್ರಹ ಕೈಕೊಂಡಿದ್ದಾರೆ. ಹಾಯಸ್ಕೂಲಿಗಾಗಿ ಹಿರೇಕೆರೂರಲ್ಲಿ ೧೫ ಸಾವಿರ ಮತ್ತು ಉಳಿದ ಹಣ ಸಂಗ್ರಹಿಸಿ ೧ ಲಕ್ಷ ರೂ. ಕೂಡಿಸುವದಾಗಿ ಅವರ ಯೋಜನೆಯಿದೆ.

ಇದೇ ೩೧ ನೇ ತಾರೀಕಿನಿಂದ ಹುಬ್ಬಳ್ಳಿ ನಗರದಲ್ಲಿ ಸೀದಾ ಕಾರ್ಡುಗಳ ಮೇಲೆ ಕೊಡಲಾಗುವ ಸಕ್ಕರೆ ಸೀದಾ ಪ್ರತಿಯೊಬ್ಬರಿಗೆ ೩॥ ಔನ್ಸ ಕಡಿಮೆ ಮಾಡಿದೆ. ಅಂದರೆ ಒಂದು ವಾರಕ್ಕೆ ಒಬ್ಬರಿಗೆ ೧೦ ಔನ್ಸದ ಬದಲು ೭ ಔನ್ಸ ಕೊಡಲಾಗುವದು.

ಕಳಸದಲ್ಲಿ ಶಿಶುನಾಳ ಶರೀಫಸಾಹೇಬರ ಗುರುಗಳಾದ ಗುರುಗೋವಿಂದರ ಆರಾಧನೆ ವೈಭವದಿಂದ ಹೋದವಾರ ಜರುಗಿತು. ಗುರುಗೋವಿಂದರ ಸ್ಮಾರಕ ಕಾರ್ಯ ತೀವ್ರ ಪ್ರಾರಂಭವಾಗಲಿದೆ.

ಸ್ವತಂತ್ರ ಹುರಿಯಾಳಾಗಿ ನಿಂತು ಮುಂಬಯಿ ಶಾಸನಸಭೆಗೆ ಆರಿಸಿಬಂದ ಡಾ. ಮಾನೆಯವರು ಈಗ ಕಾಂಗ್ರೆಸ ಪಕ್ಷವನ್ನು ಸೇರಿರುವರು.

ಧಾರವಾಡ-ಹುಬ್ಬಳ್ಳಿ ರೋಟರಿ ಕ್ಲಬ್ಬಿನಲ್ಲಿ ಸಭೆ ಸೇರಿ ಬರಗಾಲ ಸಂತ್ರಸ್ತರಿಗೆ ಸಹಾಯ ಮಾಡಬೇಕೆಂದು ಗೊತ್ತಾಗಿ ಆಬಗ್ಗೆ ಯೋಜನೆಯೊಂದನ್ನು ಮಾಡಬೇಕೆಂದು ನಿರ್ಧರಿಸಲಾಯಿತು.

ಬೆಳಗಾವಿ

ವಿಜಾಪುರ ಮತ್ತು ಬೆಳಗಾವಿ ಜಿಲ್ಹೆ ಸುದ್ದಿ ಖಾತೆಯ ಅಧಿಕಾರಿಗಳಾಗಿರುವ ಎಸ್. ವಿ. ಜಾಪೂರ ಇವರು ಎಂ. ಈ ಡಿ. ಪಾಸಾಗಿರುವರು. ಪ್ರಾಚೀನ ಕಾಲದಿಂದ ೧೮೦೦ ನೇ ಶತಮಾನದವರೆಗಿನ ಕರ್ನಾಟಕದಲ್ಲಿಯ ಶಿಕ್ಷಣದ ಇತಿಹಾಸ ಈ ವಿಷಯದ ಮೇಲೆ ಬರೆದ ಪ್ರಬಂಧಕ್ಕಾಗಿ ಈ ಪದವಿ ದೊರೆತಿದೆ.

ಗವರ್ನರರು ಜೇವಾಪುರ ಒಡ್ಡಿನ ಕಾಮಗಿರಿ ನೋಡಲಿಕ್ಕೆ ಬಂದಾಗ ಕೂಲಿಕಾರರು ತಮ್ಮ ದುಃಖಗಳನ್ನು ತೋಡಿಕೊಂಡರು. ಕೂಲಿ ೮ ಆಣೆ ಸಿಕ್ಕುತ್ತಿದ್ದು ಅದನ್ನು ಏರಿಸಬೇಕು. ಜೋಳದ ಸೀದಾ ಮೂರು ಕೊಳಗ ಸಿಕ್ಕುತ್ತಿದ್ದು ಅದು ಸಾಲದ್ದರಿಂದ ಹೆಚ್ಚಿಸಬೇಕೆಂದು ಮುಂತಾಗಿ ಕೇಳಿಕೊಂಡರು. ಗವರ್ನರರು ಇದೆರಡಕ್ಕೂ ನಕಾರಾತ್ಮಕ ಉತ್ತರ ಕೊಟ್ಟರು. ಕೂಲಿಕಾರರು ಇತರ ಸಂಕಷ್ಟಗಳನ್ನು ಅವರ ಮುಂದೆ ತೋಡಿಕೊಂಡರು.

ತಲ್ಲೂರ, ಜೇವಾಪುರ, ಜ್ಯಾಲಿಕಟ್ಟಿ, ಮುರಗೋಡ ರುದ್ರಾಪುರ ಮೊದಲಾದ ಹಳ್ಳಿಗಳಲ್ಲಿ ಜನರಿಗೆ ಕೂಲಿ ಇಲ್ಲದ್ದಕ್ಕಾಗಿ ಗಾಬರಿಗೊಂಡಿದ್ದಾರೆ. ಜನರಿಗೆ ಒಪ್ಪತ್ತು ಕೂಳು ಇಲ್ಲದ್ದರಿಂದ ಕೇವಲ ಸುಚ್ಚು ಮಜ್ಜಿಗಿ ಮೇಲೆ ಕಾಲಕಳೆಯುತ್ತಿದ್ದಾರೆ. ಬಾವಿಗಳೂ ಅನೇಕ ಕಡೆ ಬತ್ತಿಹೋಗಿವೆ. ಕುಡಿಯಲಿಕ್ಕೆ ನೀರಿಲ್ಲದಂತಾಗಿದೆ.

ಸಾವಂತವಾಡಿಯ ಶ್ರೀ ಯಶವಂತರಾವ ಗಾವಡೆ, ಶಿವರಾವ ರಾವುತ ಕಾರವಾರದ ಶ್ರೀ ಧೀರ ನಾಯಕ ಇವರು ಬಿಡುಗಡೆ ಹೊಂದಿ ಬೆಳಗಾವಿಗೆ ಬಂದಿರುವರು. ಇವರು ಆಝಾದ ಹಿಂದ ಸೈನಿಕರಿದ್ದು ಜರ್ಮನ್ ರಣಭೂಮಿಯ ಮೇಲೆ ಹೋರಾಡಿದವರಿರುವರು.

ಬೈಲಹೊಂಗಲ ತಾಲೂಕಿನ ಹೊಗರ್ತಿ ಗ್ರಾಮದ ಲಗಮಾ ಮರೆಪ್ಪನವರ ಎಂಬವನಿಗೆ ೫ ವರ್ಷ ಶಿಕ್ಷೆಯಾಗಿ ಹಿಂಡಲಗಿ ಸೆರೆಮನೆಯಲ್ಲಿದ್ದರು. ಅವರೆ ೧೯೪೨ ರಲ್ಲಿ ರಡ್ಡೇರಟ್ಟಿ ಗ್ಯಾಂಗಿನವರು ಸೆರೆಮನೆಯೊಡೆದು ಓಡಿಹೋಗುವಾಗ ಇವನೂ ಹೋಗಿದ್ದನು. ಮುಂದೆ ೨೪—೯—೧೯೪೫ ನೇ ದಿನ ಮುನ್ಯಾಳ ತರ್ಲಾಪುರದಲ್ಲಿ ಹೊಕ್ಕು ಲಕ್ಷ್ಮಣ ಮರೆಪ್ಪನವರ ಎಂಬವನನ್ನು ಗುಂಡಿಕ್ಕಿ ಕೊಂದನು. ಅವನನ್ನು ಸೆರೆಹಿಡಿದು ಖಟ್ಲೆ ಹಾಕಲಾಗಿತ್ತು. ಅವನಿಗೀಗ ಗಲ್ಲಿನ ಶಿಕ್ಷೆ ವಿಧಿಸಲಾಗಿದೆ.

ನಿಪ್ಪಾಣಿಯ ಪ್ರಸಿದ್ಧ ವ್ಯಾಪಾರಿಗಳೂ ನಿಪ್ಪಾಣಿ ಮುಸ್ಲಿಂ ಲೀಗಿನ ಅಧ್ಯಕ್ಷರೂ ಆದ ಹಾಜಿ ಅಬೀಬುಲ್ಲಾ ಮಹಮ್ಮದ ಇವರು ೨೧ ನೇ ತಾರೀಕು ಮಧ್ಯಾನ್ಹ ೪ ಗಂಟೆಗೆ ಮನೆಯಲ್ಲಿದ್ದಾಗ ಗುಂಡು ಹಾಕಿ ಕೊಲ್ಲಲ್ಪಟ್ಟರೆಂದು ತಿಳಿಯುತ್ತದೆ.

ಗೋಕಾಕ ನಗರ ಸಭೆಯ ಅಧ್ಯಕ್ಷರಾಗಿದ್ದ ಶ್ರೀ ದಿ. ಹಿ. ಮುಳಗುಂದ ಇವರು ತಮ್ಮ ವಚನದಂತೆ ರಾಜೀನಾಮೆ ಕೊಟ್ಟದ್ದರಿಂದ ಶ್ರೀ ಜಿ. ವಿ. ಕೊತನಾಳ ಇವರು ಹೊಸ ನಗರಾಧ್ಯಕ್ಷರಾಗಿ ಆರಿಸಲ್ಪಟ್ಟಿರುವರು.

ವಿಜಾಪುರ

ವಿಜಾಪುರ ಜಿಲ್ಹೆಯ ಸೀದಾ ಕ್ಷೇತ್ರದಲ್ಲಿ ಎಪ್ರಿಲ ೨ ರಿಂದ ಗರ್ಭಿಣಿಯರಿಗೂ ಚಿಕ್ಕ ಮಕ್ಕಳಿಗೂ ಪ್ರಕ್ಕಟೆ ಹಾಲು ಹಂಚುವ ಯೋಜನೆ ಕಾರ್ಯರೂಪದಲ್ಲಿ ಬರುವದೆಂದು ತಿಳಿಯುತ್ತದೆ.

ಚುನಾವಣೆಯಲ್ಲಿ ಯಶಸ್ವಿಯಾದ ಶ್ರೀ ಅಂಬಲಿ ಮತ್ತು ಕರಿಯವರನ್ನ ಭಿನಂದಿಸುವ ಕುರಿತ ಇಲಕಲ್ಲಿನಲ್ಲಿ ಜಾಹೀರ ಸಭೆ ಸೇರಿತ್ತು. ಆ ಕಾಲಕ್ಕೆ ಶ್ರೀ ಅಂಬಲಿಯವರಿಗೆ ೪೦೦ ರೂಪಾಯಿಗಳ ಹಮ್ಮಿಣಿಯನ್ನರ್ಪಿಸಲಾಯಿತು. ಹುನಗುಂದ ತಾಲೂಕಿನ ಮುಖ್ಯ ಸ್ಥಳಗಳಲ್ಲೆಲ್ಲ ಇದೇ ರೀತಿ ಸಭೆ ಜರುಗಿದವು. ಬದಾಮಿ ತಾಲೂಕಿನಲ್ಲಿಯೂ ಇವರನ್ನು ಸನ್ಮಾನಿಸಲಾಯಿತು.

ಬರಗಾಲ ನಿಮಿತ್ತ ಪಡಿಕಾಳು ಕೊಡುವದು ಪ್ರಾರಂಭವಾಗಿದೆ. ಈ ಕಾಳು ಹೇರಿಕೊಂಡು ಬರುವ ಗಾಡಿಗಳಿಗೆ ಬಾಡಿಗೆ ಕೊಡುವುದಿಲ್ಲೆಂದು ತಿಳಿಯುತ್ತದೆ. ಕಾಯಿದೆಯಂತೆ ಬಾಡಿಗೆ ಕೊಡಬೇಕೆಂದಿದ್ದರೂ ಅದೇಕೆ ಕೊಡುವದಿಲ್ಲವೊ ಇಳಿಯದು. ಅಲ್ಲದೆ ಮಯಸ್ಕರಿಗೆ ತಿಂಗಳಿಗೆ ೧-೨-೨ ಕೊಡಬೇಕೆಂದಿದ್ದು ಅದನ್ನೂ ಕೊಡುವದಿಲ್ಲೆಂದು ತಿಳಿಯುತ್ತದೆ. ಈ ಬಗ್ಗೆಯೂ ವಿಚಾರಣೆಯಾಗಬೇಕೆಂದು ಒಬ್ಬರು ತಿಳಿಸುತ್ತಾರೆ.

ಹಂಗರಗಿ ಹತ್ತರ ಬರಗಾಲ ಕೆಲಸವೆಂದು ಒಡ್ಡಿನ ಕೆಲಸ ಪ್ರಾರಂಭವಾಗಿದೆ. ೪೦೦-೫೦೦ ಜನ ಕೆಲಸ ಮಾಡುತ್ತಿರುವರು. ಅವರ ಮುಖ್ಯ ತಕರಾರು ಕೂಲಿ ಸಾಕಷ್ಟು ಸಿಕ್ಕುವುದಿಲ್ಲೆಂದು ಗವರ್ನರ ಸಾಹೇಬರಿಗೆ ಈ ದೂರನ್ನು ನಿವೇದಿಸಿದ್ದಾರೆ. ಕಾಳು ಹಂಗರಗಿಯಲ್ಲಿ ಸಿಕ್ಕುವ ವ್ಯವಸ್ಥೆಯಾಗಬೇಕು.

ಬಾಗಲಕೋಟೆಯಲ್ಲಿಯ ಸುಣ್ಣದ ಹರಳಿನ ಹುಟ್ಟುವಳಿ ಬಗ್ಗೆ ಭೂಗರ್ಭ ಶಾಸ್ತ್ರಜ್ಞರು ಸಂಶೋಧನೆ ನಡೆಸಿದಾರೆ. ಈ ಸುಣ್ಣದ ಹರಳಿನಿಂದ ಸಿಮೆಂಟ ಮಾಡಬಹುದೆಂದು ಅವರ ಅಭಿಪ್ರಾಯ. ಈ ಉದ್ಯೋಗ ಅಭಿವೃದ್ಧಿ ಹೊಂದಿದ್ದಾದರೆ ಅನೇಕರಿಗೆ ಉದ್ಯೋಗ ದೊರೆತು ಆರ್ಥಿಕ ಪರಿಸ್ಥಿತಿ ಸುಧಾರಿಸಬಹುದಾಗಿದೆ.

ಬಳ್ಳಾರಿ

ಬಳ್ಳಾರಿ ತಾಲೂಕ ಸ್ತ್ರೀ ಮತದಾರ ಸಂಘದಿಂದ ಶ್ರೀ ಸುಮಂಗಲಮ್ಮನವರು ಮದ್ರಾಸ ಶಾಸನಸಭೆಗೆ ಆರಿಸಿ ಬಂದಿದ್ದಾರೆ. ಕಾಂಗ್ರೆಸ್ಸಿನ ಪರವಾಗಿ ನಿಂತಿದ್ದ ಶ್ರೀಮತಿ ಟಿ. ಬಿ. ಜಯಲಕ್ಷ್ಮಿಯವರು ಪರಾಜಯ ಹೊಂದಿದರು.

ಬಳ್ಳಾರಿ ಜಿಲ್ಹೆಯಲ್ಲಿ ಬರಗಾಲದ ಬವಣೆಯಿಂದ ಜನ ಕಂಗಾಲಾಗಿದ್ದರೂ ಧಾನ್ಯ ವಸೂಲಿ ಕಾರ್ಯ ನಡೆದಿದೆ.

ಉತ್ತರ ಕನ್ನಡ

ಔರಂಗಾಬಾದ ಮಿಲಿಟರಿ ಆಸ್ಪತ್ರೆಯ ಮೇಜರ ಕೆಳಂದೆ ಇವರು ಗೋವಾದ ನದಿಯಲ್ಲಿ ಸ್ನಾನಕ್ಕೆ ಹೋದಾಗ ಮುಳುಗಿ ಮರಣ ಹೊಂದಿದರೆಂದು ಸುದ್ದಿ ಬಂದಿದೆ. ಇವರು ಶಿರಸಿಯವರು. ಇವರಿಗೆ ವೃದ್ಧ ತಾಯಿ, ಪತ್ನಿ ಮತ್ತು ಇಬ್ಬರು ಮಕ್ಕಳಿರುವರು.

ಕುಮಟೆಯ ಕರ್ನಾಟಕ ಸಂಘದವರು ಉತ್ತರ ಕನ್ನಡ ಜಿಲ್ಹಾ ಸಾಹಿತ್ಯ ಸಮ್ಮೇಲನವನ್ನು ಬೇಗನೆ ಕರೆಯಲಿರುವರು.

ಹಿಂದುಸ್ಥಾನ ಸರಕಾರದ ಬಂದರ ತಾಂತ್ರಿಕ ಸಮಿತಿಯವರು ಕಳೆದ ಬುಧವಾರ ಕಾರವಾರಕ್ಕೆ ಹೋಗಿ ಕಾರವಾರ ಬಂದರದ ಅಭಿವೃದ್ಧಿ ಸಂಬಂಧದಲ್ಲಿ ವಿಚಾರವಿನಿಮಯ ಮಾಡಿ ಬಂದರು. ಅವರು ಭಟಕಳ ಮೆಂಗುಲೂರ ರತ್ನಾಗಿರಿ ಬಂದರಗಳಿಗೂ ಭೆಟ್ಟಿ ಕೊಟ್ಟರು.

ಕನ್ನಡ ಸಂಸ್ಥಾನ

ಸಾಂಗಲಿ ವಿಲಿಂಗ್ಡನ ಕಾಲೇಜಿನ ಅರ್ಥಶಾಸ್ತ್ರ ಪ್ರಾಧ್ಯಾಪಕರಾದ ಶ್ರೀ ಟಿ. ಎಂ. ಜೋಶಿಯವರಿಗೆ ವಾಟುಮಲ್ ಅರ್ಥಶಾಸ್ತ್ರ ಶಿಷ್ಯವೃತ್ತಿ ದೊರೆತಿದೆ. ಯುನಾಯಿಟೆಡ್ ಸ್ಟೇಟ್ಸನಲ್ಲಿ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಈ ಶಿಷ್ಯವೃತ್ತಿ ಕೊಡಲಾಗಿದೆ. ಇವರು ಅರ್ಥಶಾಸ್ತ್ರದಲ್ಲಿ ಎಂ. ಎ. ಒಂದನೇ ವರ್ಗದಲ್ಲಿ ತೇರ್ಗಡೆ ಹೊಂದಿರುವರು.

ಸಾಂಗಲಿ ಸಂಸ್ಥಾನ ಶಿರಹಟ್ಟಿ ತಾಲೂಕ ಇಟಗಿಯಲ್ಲಿ ಪ್ರತಿವರ್ಷದಂತೆ ಶ್ರೀ ಭೀಮಾಂಬಿಕಾ ಜಾತ್ರೆಯು ಎಪ್ರಿಲ ೩ ರಿಂದ ಪ್ರಾರಂಭವಾಗುವದು. ದನಗಳ ಜಾತ್ರೆಯೂ ಆ ಕಾಲಕ್ಕೆ ನಡೆಯುವದು.

ಕೊಲ್ಹಾಪುರ ಸಂಸ್ಥಾನದ ಸುಮಾರು ೬೦ ಸಾವಿರ ಜನ ಆಹಾರ ಕೊರತೆ, ದಾರಿದ್ರ್ಯ, ನಿರುದ್ಯೋಗಿತನ ಮೊದಲಾದವುಗಳಿಂದ ಬಳಲುತ್ತಿದ್ದರೂ ಅವರ ಸಂಕಟ ಪರಿಹಾರದ ಕಡೆಗೆ ಸರಕಾರದವರು ಲಕ್ಷಕೊಡದಿದ್ದುದರ ನಿಷೇಧಾರ್ಥವಾಗಿ ಸಂಸ್ಥಾನ ಪ್ರಜಾಪರಿಷತ್ತಿನ ಕಾರ್ಯದರ್ಶಿ ಎಂ. ಎಲ್. ವಿಕ್ರಮತ ಇವರು ಅನ್ನತ್ಯಾಗ ಪ್ರಾರಂಭಿಸಿದ್ದಾರೆ. ಆಶ್ವಾಸನ ಮತ್ತು ಪ್ರತಾರದ ಹೊರತು ಸರಕಾರದವರು ಏನೂ ಮಾಡಿಲ್ಲೆಂದು ವಿಕ್ರಮತರ ಹೇಳಿಕೆಯಿದೆ.

ದಾವಣಗೇರಿಯಲ್ಲಿ ಇಂಟರಮೀಡಿಯೆಟ ಕಾಲೇಜ ಸ್ಥಾಪಿಸುವ ಸಂಬಂಧದಲ್ಲಿ ಪ್ರಚಾರ ಮಾಡಲು ಪ್ರಿ. ಸಂಜೀವರಾವ ಮತ್ತು ಪ್ರೊ. ಬೊಂಬಾಡೆಯವರು ಬಂದುಹೋದರು. ಜೂನದಲ್ಲಿ ಇಲ್ಲಿ ಕಾಲೇಜ ಸ್ಥಾಪಿಸಲಾಗುವದೆಂದು ಅವರು ಹೇಳಿದರು.

ಸಕ್ಕರೆಯ ಮುಟ್ಟಾಗ್ರತೆಗಾಗಿ ಶಿವಮೊಗ್ಗೆಯಲ್ಲಿ ನಾಗರಿಕರನ್ನು ಅ. ಬ. ಶ್ರೇಣಿಯಾಗಿ ವಿಂಗಡಿಸಿದರು. ಈಗ ಆಹಾರ ಅಭಾವವಿದ್ದುದರಿಂದ ಬ. ಶ್ರೇಣಿಯವರಿಗೆ ಅಕ್ಕಿ ಸಿಕ್ಕದಂತಾಗಿದೆ. ಶೇಂಗಾ ಅಥವಾ ಬಟಾಟೆ ತಿಂದು ಜೀವಿಸಬೇಕಂತೆ.

ತರೀಕೆರೆಯ ಹತ್ತರ ಬೆಟ್ಟದ ಹಳ್ಳಿಯಲ್ಲಿ ಕಳೆದ ವಾರ ಸಿಂದೀ ಲಾರಿ ಬುಡಮೇಲಾಗಿ ಭೀಮನಾಯಕ ಮತ್ತು ತಿಮ್ಮನಾಯಕ ಎಂಬಿಬ್ಬರು ಸತ್ತಿದ್ದು ೮ ಜನರಿಗೆ ಗಾಯಗಳಾಗಿವೆ. ಪೋಲೀಸರು ಡ್ರಾಯವರನನ್ನು ಬಂಧಿಸಿ ಕೈವಶಪಡಿಸಿಕೊಂಡಿದ್ದಾರೆ.

ಹೊಳೆನರಸಿಪುರ ತಾಲೂಕ ಟ್ರೆಜರಿಯಲ್ಲಿ ೮೫೦೦ ರೂಪಾಯಿ ಮಾಯವಾದದ್ದು ಕಂಡುಬಂದದ್ದರಿಂದ ಪೋಲೀಸರು ತಾತ್ಪೂರ್ತಿಕ ವಿಚಾರಣೆ ಮಾಡಿ ಹೆಡ್‌ಕ್ಲಾರ್ಕ ರಂಗಪ್ಪಾ ಶಿರಸ್ತೇದಾರ ಶೇಷಾದ್ರಿ ಅಯ್ಯಂಗಾರ ಹಾಗು ಸರಾಫ ಪಾರ್ಶ್ವನಾಥನ್ ಇವರನ್ನು ಬಂಧಿಸಿರುವರೆಂದು ತಿಳಿಯುತ್ತದೆ.

ಜಮಖಂಡಿ ಶಾಸನಸಭೆಯ ಆಯ್ಕೆಯಲ್ಲಿ ಪ್ರಜಾಪರಿಷತ್ತಿನ ೧೭ ಜನ ಆರಿಸಿ ಬಂದಿರುವರು. ಒಟ್ಟಿಗಿರುವ ೨೪ ಸ್ಥಳಗಳಲ್ಲಿ ಜನತಾ ಪಕ್ಷಕ್ಕೆ ೨ ಸ್ವತಂತ್ರ ೪ ಲೀಗಕ್ಕೆ ೧ ಹೀಗೆ ಸ್ಥಳಗಳು ದೊರೆತಿವೆ.

ಹುಬ್ಬಳ್ಳಿ ಲೋಕೋ ಮತ್ತು ಟ್ರ್ಯಾಫಿಕ್ ಶಾಖೆಗಳಲ್ಲಿ ಸಂಪು

ಜಿಲ್ಹಾ ಮ್ಯಾಜಿಸ್ಟ್ರೇಟರ ಮಧ್ಯಸ್ಥಿಕೆಯಿಂದ ಮುಕ್ತಾಯ

ಮದ್ರಾಸ ಸದರ್ನ ಮರಾಠಾ ರೇಲ್ವೆಯ ಹುಬ್ಬಳ್ಳಿಯ ಲೋಕೋ ಮತ್ತು ಟ್ರ್ಯಾಫಿಕ್ ಕೆಲಸಗಾರರು ೨೫ ನೇ ತಾರೀಕು ಅಕಸ್ಮಾತ್ ಧರಣೆ ಸಂಪು ಹೂಡಿದ್ದರು. ತತ್ಪರಿಣಾಮವಾಗಿ ಗಾಡಿಗಳ ಓಡಾಟ ಅಂದು ಸಾಯಂಕಾಲ ೫ ಗಂಟೆಯ ವರೆಗೆ ನಿಂತು ಹೋಗಿತ್ತು. ಹೊಸ ಸೀದಾ ಕಾರ್ಡುಗಳು ರೇಲ್ವೆ ಅಧಿಕಾರಿಗಳಿಂದ ಸಮಯಕ್ಕೆ ಸಿಕ್ಕದಿದ್ದುದರಿಂದಲೆ ಸಂಪು ಹೂಡಲಾಗಿತ್ತು. ರೇಲ್ವೆ ಅಧಿಕಾರಿಗಳಿಂದ ಸಂಪು ಕೊನೆಗೊಳಿಸುವದಾಗದ್ದರಿಂದ ಜಿಲ್ಹಾ ಮ್ಯಾಜಿಸ್ಟ್ರೇಟರು ಬಂದು ಕಾರ್ಡುಗಳ ಹಂಚಿಕೆಯ ಬಗ್ಗೆ ಹೊಸ ವ್ಯವಸ್ಥೆ ಮಾಡಿ ಸಂಪು ಮುಕ್ತಾಯಗೊಳಿಸಿದರು. ಸೀದಾ ಅಧಿಕಾರಿಗಳು ಕಾರ್ಡು ತಯಾರ ಮಾಡಿದ ಬಳಿಕ ರೇಲ್ವೆ ಅಧಿಕಾರಿಗಳು ಆಯಾ ಕೆಲಸಗಾರರು ತಮ್ಮಲ್ಲಿದ್ದಾರೆಂಬ ಬಗ್ಗೆ ಗುರುತು ಹಾಕಿದ ಬಳಿಕವೆ ಆ ಕಾರ್ಡುಗಳಿಗೆ ಸೀದಾ ದೊರೆಯುವದು. ಅದರೆ ಇದೆಲ್ಲ ಸಕಾಲಕ್ಕೆ ಆಗದ್ದರಿಂದ ಕೆಲಸಗಾರರು ಸಂಪು ಹೂಡಬೇಕಾಯಿತು. ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಅಧಿಕಾರಿಗಳ ಈ ಪ್ರಮಾದವನ್ನು ಖಂಡಿಸಿ ಹಳೆಯ ಕಾರ್ಡುದಾರರಿಗೆ ಎರಡು ವಾರಗಳ, ಹಳೆಯ ಮತ್ತು ಹೊಸ ಕಾರ್ಡುಗಳನ್ನು ತಂದವರಿಗೆ (ಅವು ರಹಿತವಾಗಿರದಿದ್ದರೂ) ೫ ವಾರಗಳ ಸೀದಾ ಕೊಡಲು ವಿಧಿಸಿದರು. ಮತ್ತು ಅಂದು ರಾತ್ರಿ ಬಹಳ ಹೊತ್ತಿನ ವರೆಗೆ ಅಂಗಡಿ ತೆರೆದಿಡಲು ಆಜ್ಞಾಪಿಸಿದರು.

ಮೇಲೆ ಹೇಳಿದಂತೆ ಎಂಜಿನಗಳಲ್ಲಿ ಕೆಲಸ ಮಾಡುವವರು ಸಂಪು ಹೂಡಿದ್ದರಿಂದ ಗಾಡಿಗಳ ಓಡಾಟಕ್ಕೆ ತಡೆಯುಂಟಾಯಿತು. ಮಧ್ಯಾಹ್ನ ೨-೫೫ ಗಂಟೆಗೆ ಹೊರಡತಕ್ಕ ಪುಣೆ ಮೇಲಗಾಡಿ ಸಾಯಂಕಾಲ ೪-೫೫ ಕ್ಕೆ ೨-೨೦ ಕ್ಕೆ ಬಿಡತಕ್ಕ ಬೆಂಗಳೂರ ಮೇಲಗಾಡಿ ೫-೪೦ ಕ್ಕೆ ಹೊರಟವು. ಮುಂಜಾನೆ ೧೦-೨೦ ರ ಪುಣೆ ಪ್ಯಾಸೆಂಜರ ಗಾಡಿ ಮತ್ತು ಧಾರವಾಡ ಹುಬ್ಬಳ್ಳಿ, ೧-೫ ರ ಮತ್ತು ೫-೪೫ ರ ಲೋಕಲ್ ಗಾಡಿಗಳು ಹೊರಡಲಿಲ್ಲ. ಸಾಯಂಕಾಲ ೫-೧೫ ಕ್ಕೆ ಬಿಡಬೇಕಾಗಿದ್ದ ಸೊಲ್ಲಾಪುರ ಗಾಡಿ ರಾತ್ರಿ ೮-೩೦ ಕ್ಕೆ ಹೊರಟಿತು. ಇದರಿಂದ ಪ್ರವಾಸಿಕರಿಗೆ ತೊಂದರೆ ವಿಶೇಷವಾಯಿತು.

ಉತ್ತರಕನ್ನಡ ಜಿಲ್ಹೆಯಲ್ಲಿ ಸಾಗುವಳಿ ಕ್ಷೇತ್ರದ ವಿಸ್ತರಣೆ

ಉತ್ತರ ಕನ್ನಡ ಜಿಲ್ಹೆಯಲ್ಲಿ ಸಾಗುವಳಿ ಕ್ಷೇತ್ರವನ್ನು ವಿಸ್ತರಿಸುವ ಸಂಬಂಧದಲ್ಲಿ ಶ್ರೀ ದ. ಪ. ಕರಮರಕರರು ಕೇಂದ್ರ ಶಾಸನಸಭೆಯಲ್ಲಿ ಕೇಳಿದ ಪ್ರಶ್ನೆಗಳಿಗೆ ಸರಕಾರದವರು ಈ ರೀತಿ ಉತ್ತರ ಕೊಟ್ಟಿರುವರು. ಆಹಾರ ವೃದ್ಧಿಗಾಗಿ ಬಡ್ಡಿಯಿಲ್ಲದ ಸಾಲ ಕೊಡಲಾಗುತ್ತದೆ ಭಾವಿ ಕೆರೆ ತೋಡುವವರಿಗಾಗಿ ತಗಾಯಿ ಸಾಲ ಕೊಡುತ್ತದೆ. ಯೋಜನೆಯ ಅರ್ಧದಷ್ಟು ವೆಚ್ಚ ಸರಕಾರ ಕೊಡುತ್ತದೆ. ಹೆಚ್ಚು ಕ್ಷೇತ್ರ ಸಾಗು ಮಾಡುವವರಿಗಾಗಿ ಮೊದಲಿನ ಮೂರು ವರ್ಷ ಹೊಸ ಕ್ಷೇತ್ರಕ್ಕೆ ತೆರಿಗೆ ತೆಗೆದುಕೊಳ್ಳುವದಿಲ್ಲ. ಸಾಗು ಮಾಡತಕ್ಕ ಭೂಮಿ ೧೨೭೪೬೨ ಎಕರೆ ಸರಕಾರಿ ಪಡಮಾಯಿ ೫೮೯೬೯ ಎಕರೆ ಇದೆಲ್ಲ ಕಳೆದ ೫೦ ವರ್ಷಗಳಿಂದ ಸಾಗುವಳಿ ಮಾಡದೆಯೆ ಪಡಬಿದ್ದಿದೆ. ದಟ್ಟವಾದ ಕಾಟಿ ಅಲ್ಲಿ ಬೆಳೆದಿವೆ. ಈ ಜಿಲ್ಹೆಯಲ್ಲಿ ೫ ವರುಷಗಳಲ್ಲಿ ೫ ತಿಂಗಳು ಮಲೇರಿಯಾ ಆಗುತ್ತದೆ ಜನಸಂಖ್ಯೆ ಕ್ರಮೇಣ ಕುಗ್ಗುತ್ತಲೆ ಇದೆ ಕೂಲಿಕಾರರು ಸಾಕಷ್ಟು ಸಿಕ್ಕುವದಿಲ್ಲ. ರೋಗರುಜಿಗಳಿಂದಲೂ ಸಸಿಬಾಧಕ ಕ್ರಿಮಿಕೀಟಕಗಳಿಂದಲೂ ಭೂಮಿ ಪಡಬೀಳುತ್ತದೆ. ಪಡಭೂಮಿ ಸಾಗು ಮಾಡಲು ನೆಲೆಮಾಡಿದ ಯೋಜನೆ ಪ್ರಾಂತಿಕ ಸರಕಾರ ವಿಚಾರಿಸುತ್ತಲಿದೆ. ಮಲೇರಿಯಾ ನಿವಾರಣೆಗಾಗಿ ಡಿ.ಡಿ. ಟಿಯ ಉಪಯೋಗ ಮಾಡಲಾಗುತ್ತದೆ.

ಹಿಂದುಸ್ತಾನ

ಮುಂಬಯಿ

ಪುಣೆಯಲ್ಲಿ ಕಳೆದ ೨೫ ನೇ ತಾರೀಕು ಕರ್ನಾಟಕ ಸಂಘದ ಸಹಾಯಾರ್ಥ ಮಹಾರಾಷ್ಟ್ರ ಪರಿವರ್ಧನ ಸಾಹಿತ್ಯ ಮಂದಿರದಲ್ಲಿ ಶ್ರೀ ಪ್ರಲ್ಹಾದರಾವ ಹೊಂಬಳರ ವೇಣು ವಾದನವಾಯಿತು. ಸಂಗೀತ ಜಲಸಾ ಕಾರ್ಯಕ್ರಮವೂ ನಡೆಯಿತು.

ಮುಂಬಯಿ ಇಲಾಖೆ ಕೈಮಗ್ಗ ನೇಕಾರ ಸಂಘದವರು ಬ್ರಿಟಿಶ್ ಮಂತ್ರಿತ್ರಯರಿಗೆ ಒಂದು ಪತ್ರ ಬರೆದು ಕಾಯದೆ ಮಂಡಲಗಳಲ್ಲಿ ಕೈಮಗ್ಗದ ಉದ್ಯೋಗದವರಿಗೆ ಪ್ರತ್ಯೇಕ ಪ್ರಾತಿನಿಧ್ಯ ಕೊಡಬೇಕೆಂದು ವಿನಂತಿಸಿದ್ದಾರೆ. ಕೈಮಗ್ಗದ ಉದ್ಯೋಗದಲ್ಲಿ ಈಗ ೧ ಕೋಟಿ ಜನರು ತೊಡಗಿರುವರಾಗಿ ಅದರಲ್ಲಿ ಹೇಳಿದೆ. ಎಸ್. ಎಂ. ಜೋಶಿಯವರು ಮಂತ್ರಿವರ್ಯರನ್ನು ಭೆಟ್ಟಿಯಾದಾಗ ಈ ಸಂಬಂಧವಾಗಿ ಮಾತಾಡುವರು.

ಪ್ರಾಥಮಿಕ ಶಿಕ್ಷಕರೆಲ್ಲ ಕೆಲಸಕ್ಕೆ ಹಿಂತಿರುಗಬೇಕು. ಅವರು ಹೂಡಿರುವ ಸಂಪು ಅಕಾಲಿಕವಾಗಿದೆ. ಅವರಿಗೆ ಕಾಂಗ್ರೆಸ್ಸಿನ ಸಹಾಯ ಬೇಕಿದ್ದರೆ ಅದರ ಸಲಹೆಯನ್ನು ಮೊದಲೆ ಪಡೆಯಬೇಕಾಗಿತ್ತು ಎಂದು ಸರದಾರ ವಲ್ಲಭಭಾಯಿಯರು ಓರ್ವ ಪ್ರಾಥಮಿಕ ಶಿಕ್ಷಕರ ಪತ್ರಕ್ಕೆ ಉತ್ತರ ಕೊಟ್ಟಿರುವರು. ಮುರಾರಜಿ ದೇಸಾಯರು ಗುಜರಾಥ ಪ್ರಾಥಮಿಕ ಶಿಕ್ಷಣ ಪರಿಷತ್ತಿನಲ್ಲಿ ಮಾತಾಡುತ್ತ ಮೇಲಿನಂತೆಯೆ ಉದ್ಗಾರತೆಗೆದರು.

ಮುಂಬಯಿ ಪೋಲೀಸರಿಗೆ ಎಪ್ರಿಲ ೧ ರಿಂದ ಮೂಲ ಸಂಬಳವನ್ನು ಏರಿಸಲಾಗಿದೆ. ಪ್ರಾರಂಭದಲ್ಲಿ ಒಬ್ಬ ಸಿಪಾಯಿಗೆ ೩೦ ರ ಬದಲು ೪೦ ಹವಾಲದಾರನಿಗೆ ೩೮ ರ ಬದಲು ೫೦ ಜಮಾದಾರನಿಗೆ ೧೦೦ ರ ಬದಲು ೧೨೦ ರೂಪಾಯಿ ಕೊಡಬೇಕೆಂದು ಗೊತ್ತಾಗಿದೆ.

ಪಂಡಿತ ಜವಾಹರಲಾಲರ ಸೂಚನೆಯ ಮೇರೆಗೆ ಮಲಯಾದಲ್ಲಿಯ ಹಿಂದಿಯರಿಗಾಗಿ ಹಿಂದುಸ್ತಾನ ಸರಕಾರದವರು ೧೦೦ ಹಿಂದೀ ಜವಳಿ ಗಂಟುಗಳನ್ನು ಕಳಿಸಲಿರುವರು.

ಮುಂಬಯಿ ಶಾಸನಸಭೆಯಲ್ಲಿಯ ರೇಲ್ವೆ ಕೂಲಿಕಾರ ಸ್ಥಳಕ್ಕೆ ಕಾಂಗ್ರೆಸ್ಸಿನ ಪರವಾಗಿ ಅರ್ಜಿ ಕೊಟ್ಟದ್ದ ಶ್ರೀ ಆರ್. ಎ. ಖೇಡಗಿಕರರ ನಾಮಪತ್ರವನ್ನು ನಿರಾಕರಿಸಿದ್ದರಿಂದ ಅವರು ಚುನಾವಣ ಅರ್ಜಿ ಮಾಡಲಿರುವರು.

ರೇಲ್ವೆ ಗುಡ್ಸ ಯಾರ್ಡಿನಲ್ಲಿ ಬೆಂಕಿ ಹತ್ತಿ ಸುಮಾರು ೩೦೦ ಅರಳೆ ಗಂಟುಗಳು ಬಟ್ಟೆ ಧಾನ್ಯ ಮುಂತಾದವುಗಳು ಸುಟ್ಟುಹೋದವಲ್ಲದೆ ನಾಶವಾಗಿ ಹೋದುವು. ಒಟ್ಟಾರೆ ಒಂದು ಲಕ್ಷ ರೂಪಾಯಿ ಹಾನಿಯಾಗಿದೆಂದು ನಾಗ್ಪೂರದಿಂದ ಸುದ್ದಿ ಬಂದಿದೆ.

ಶ್ರೀ ಬಾಳಾಸಾಹೇಬ ಖೇರ ಇವರು ಶನಿವಾರ ಸಾಯಂಕಾಲ ಮುಂಬಯಿ ಗವರ್ನರರ ಭೆಟ್ಟಿ ತೆಗೆದುಕೊಂಡರು. ಈ ಭೆಟ್ಟಿಯಲ್ಲಿ ಯಾವ ವಿಷಯಗಳ ಬಗ್ಗೆ ವಿಚಾರವಿನಿಮಯ ನಡೆಯಿತೆಂಬುದು ತಿಳಿದಿರದಿದ್ದರೂ ಅಯವ್ಯಯ ಪತ್ರಿಕೆಯನ್ನು ಗವರ್ನರರು ಖೇರರಿಗೆ ತೋರಿಸಿದರೆಂದು ತರ್ಕ.

ಧ್ರಾಂಗಧ್ರಾ ಸಂಸ್ಥಾನ ಸರಕಾರದವರು ಚಾರದ್ವಾಮಹಾಲ ಪ್ರದೇಶದಲ್ಲಿ ಬಂಭಾನ, ನದಿಗೆ ೨ ಮೈಲು ಒಡ್ಡು ಹಾಕುವ ಯೋಜನೆಯನ್ನು ಗೊತ್ತುಪಡಿಸಿದ್ದಾರೆ. ಅದರ ವೆಚ್ಚ ೩೦ ಲಕ್ಷ ರೂ. ಆಗಲಿದ್ದು ಅದರಿಂದ ೧೫ ಸಾವಿರ ಎಕರೆ ಭೂಮಿಗೆ ನೀರು ಸಿಕ್ಕುತ್ತದೆ.

ಮದ್ರಾಸ

ಅ. ಭಾ. ಗ್ರಾಮೋದ್ಯೋಗ ಸಂಘದ ಜೆ. ಸಿ. ಕುಮಾರಪ್ಪ ಇವರು ಮದುರೆಯಲ್ಲಿ ಸತ್ಯಮೂರ್ತಿ ಮಿನಾಚರಣೆಯ ಕಾಲಕ್ಕೆ ಮಾತಾಡುತ್ತ ವಿಧಾಯಕ ಕಾರ್ಯವನ್ನು ವಿವರಿಸಿದರು. ನಮ್ಮಲ್ಲಿನ ಕಚ್ಚಾ ಸರಕುಗಳ ನಿರ್ಯಾತವನ್ನು ಮತ್ತು ಬ್ರಿಟಿಶ ಸರಕುಗಳ ಆಯಾತವನ್ನು ನಿಲ್ಲಿಸಿದರೆ ಬ್ರಿಟಿಶರು ಇಲ್ಲುಳಿಯಲಾರರು. ಬ್ರಿಟಿಶರು ಇಲ್ಲಿರುವದರ ಈ ಮೂಲ ಕಾರಣವನ್ನು ಕಿತ್ತೊಗೆದರೆ ಸ್ವರಾಜ್ಯ ತಾನೇ ಸಿಕ್ಕುವುದೆಂದು ಮುಂತಾಗಿ ಅವರು ಹೇಳಿದರು.

ಮದ್ರಾಸ ಅಯ. ಎನ್. ಎ. ಪರಿಹಾರ ಸಮಿತಿಯ ವಿಶೇಷ ಸದಸ್ಯರೆಂದು ಕ್ಯಾಪ್ಟನ ಲಕ್ಷ್ಮಿಯವರನ್ನು ಸೇರಿಸಿಕೊಳ್ಳಲಾಗಿದೆ.

ಹೊಸದಿಲ್ಲಿ

ಅಖಿಲ ಭಾರತ ಸಂಸ್ಥಾನ ಪ್ರಜಾಪರಿಷತ್ತಿನ ಸ್ಥಾಯಿಸಮಿತಿಯ ಅವಸರದ ಸಭೆ ದಿಲ್ಲಿಯಲ್ಲಿ ಕೂಡಲಿರುವುದರಿಂದ ಅಲ್ಲಿಗೆ ಹೊರಡುವ ಸಿದ್ಧತೆಯಲ್ಲಿರಬೇಕೆಂದು ಪಂಡಿತ ಜವಾಹರಲಾಲರು ಸದಸ್ಯರಿಗೆಲ್ಲ ತಿಳಿಸಿರುವರು. ಬ್ರಿಟಿಶ ಮಂತ್ರಿತ್ರಯರು ಸಂಸ್ಥಾನಗಳ ಸಂಬಂಧದಲ್ಲಿ ಮಾಡಬಹುದಾದ ಸೂಚನೆಗಳನ್ನು ಕುರಿತು ವಿಚಾರ ಮಾಡಲು ಈ ಸಭೆ ಸೇರಲಿದೆ.

ಅ. ಭಾ. ಪತ್ರಿಕಾ ಸಂಪಾದಕರ ಪರಿಷತ್ತಿನ ಸ್ಥಾಯಿಸಮಿತಿಯ ಸದಸ್ಯರನ್ನು ಬ್ರಿಟಿಶ ಮಂತ್ರಿತ್ರಯರು ಎಪ್ರಿಲ ೨ ನೇ ತಾರೀಕು ದಿಲ್ಲಿಯಲ್ಲಿ ಕಾಣುವರು. ಎಪ್ರಿಲ ೧ ಮತ್ತು ೨ ಕ್ಕೆ ಸ್ಥಾಯಿಸಮಿತಿಯ ಸಭೆಯನ್ನು ದಿಲ್ಲಿಯಲ್ಲಿಯೆ ಕರೆಯಲಾಗಿದೆ.

ಹಿಂದುಸ್ತಾನ ಸರಕಾರದ ಮುದ್ರಣ ಕೆಲಸಗಾರರು ಕಳೆದ ೨೦ ದಿನಗಳಿಂದ ಸಂಪು ಹೂಡಿದ್ದರು. ಅವರ ಬೇಡಿಕೆಗಳನ್ನು ವಿಚಾರಿಸುವದಾಗಿ ಕೂಲಿಕಾರ ಖಾತೆಯವರು ಆಶ್ವಾಸನ ಕೊಟ್ಟದ್ದರಿಂದ ಸಂಪು ೨೫ ನೇ ತಾರೀಕು ಮುಂಜಾವಿನಿಂದ ನಿಂತಿದೆ. ಕೆಲಸದ ಅವಧಿಯನ್ನು ವಾರಕ್ಕೆ ೪೮ ಗಂಟೆಗಳಿಂದ ೪೪ ಗಂಟೆಗಳಿಗಿಳಿಸಲಾಗಿದೆ.

ಹಿಂದೀ ಸ್ತ್ರೀ ಸಹಾಯಕ ದಲದ ವಿಸರ್ಜಿತ ಮಹಿಳೆಯರಿಗೆಲ್ಲ ಕಾರಕೂನ ಔದ್ಯೋಗಿಕ ಮೊದಲಾದ ಕೆಲಸಗಳಿಗೆ ತರಬೇತು ಮಾಡಲಾಗುವದೆಂದೂ ವಿಶೇಷತಃ ಸೌಂದರ್ಯವರ್ಧನೆ, ಕೇಶಾಲಂಕಾರ ಛಾಯಾಚಿತ್ರಕಲೆ ಮೊದಲಾದ ವಿಷಯಗಳನ್ನು ವಿಶೇಷ ಆಸ್ಥೆಯಿಂದ ಕಲಿಸುವ ವ್ಯವಸ್ಥೆ ಮಾಡಲಾಗುವದೆಂದೂ ತಿಳಿಯುತ್ತದೆ.

ಮೋಟರ ಟಾಯರಗಳ ಸೀದಾವನ್ನು ಸರಕಾರದವರು ಮುಂದಿನ ವಾರದಿಂದ ರದ್ದುಗೊಳಿಸಲಿರುವರು. ಪೆಟ್ರೋಲ ಸೀದಾ ಮಾತ್ರ ಇನ್ನೂ ಕೆಲ ತಿಂಗಳ ಉಳಿಯಲಿದೆ.

ದಿಲ್ಲಿಯಲ್ಲಿಯ ಗವಳಿಗರು ಸಂಪು ಹೂಡಿದ್ದರಿಂದ ೨೬ ನೇ ತಾರೀಕಿನ ದಿನ ಅನೇಕರು ಹಾಲಿಲ್ಲದೆ ಇರಬೇಕಾಯಿತು. ಧಾರಣೆ ಸಲುವಾಗಿ ಗವಳಿಗರು ಮತ್ತು ಮಿಠಾಯಿಗಾರರಲ್ಲಿ ತಕರಾರು ಆದ್ದರಿಂದ ಗವಳಿಗರು ಸಂಪು ಮಾಡಿದರು. ಚಹಾದಂಗಡಿಗಳಲ್ಲಿ ಚಹ ಸಿಕ್ಕಲಿಲ್ಲ. ಚಿಕ್ಕಮಕ್ಕಳಿಗೆ ರೋಗಿಗಳಿಗೆ ಹಾಲು ಸಿಕ್ಕಲಿಲ್ಲ.

ಅಖಿಲ ಭಾರತ ಸಂಸ್ಥಾನ ಮುಸ್ಲಿಂಲೀಗಿನ ಸಭೆ ಎಪ್ರಿಲ್ ಮೊದಲನೆ ವಾರದಲ್ಲಿ ದಿಲ್ಲಿಯಲ್ಲಿ ಕೂಡುವದು.

ಮಧ್ಯಪ್ರಾಂತ

ಮಧ್ಯಪ್ರಾಂತದ ೧೯೪೬-೪೭ ನೆಯ ಇಸ್ವಿಯ ಮುಂಗಡ ಪತ್ರಿಕೆಯಲ್ಲಿ ೬೦.೨೮ ಲಕ್ಷ ರೂಪಾಯಿ ಉಳಿತಾಯ ತೋರಿಸಲಾಗಿದೆ. ಒಟ್ಟು ಉತ್ಪನ್ನ ೯೦೫.೧೮ ಲಕ್ಷವಿದ್ದು ವೆಚ್ಚ ೮೪೪.೯೦ ಲಕ್ಷ ರೂಪಾಯಿಯಾಗಲಿದೆಂದು ತಿಳಿಯುತ್ತದೆ. ಹೊಸ ಕರಗಳನ್ನು ಹಾಕಿರದಿದ್ದರೂ ಈಗಿದ್ದ ಕರಭಾರ ಮತ್ತೊಂದು ವರ್ಷ ಸಾಗಿದೆ.

ಪೊನ್ನಾನಿ ತಾಲೂಕಿನಲ್ಲಿ ೨೫೦೦ ಚೀಲ ಭತ್ತ ಸಿವಿಲ್ ಅಧಿಕಾರಿಗಳು ಜಪ್ತ ಮಾಡಿದ್ದಾರೆ. ಇದರಲ್ಲಿ ೧೬ ಚೀಲ ಪುಲ್ಲಿನಲ್ಲಿ ಮುಚ್ಚಿಡಲಾಗಿತ್ತಂತೆ.

೧೯೪೨ ನೇ ಇಸ್ವಿಯ ಅಗಸ್ಟ ಗಲಭೆಯಲ್ಲಿ ಶಿಕ್ಷೆಗೋಳಗಾದ ಸೆರಮನೆಗಳಲ್ಲಿರುವ ೩೭೬ ಜನರಲ್ಲಿ ೧೦೨ ಜನರ ಬಿಡುಗಡೆ ಮಾಡಬೇಕೆಂದು ಮದ್ರಾಸ ಸರಕಾರದವರು ನಿರ್ಧರಿಸಿದ್ದಾರೆ.

ಮದ್ರಾಸ ಶಾಸನಸಭೆಯ ೨೧೫ ಸ್ಥಳಗಳಲ್ಲಿ ಕಾಂಗ್ರೆಸ್ಸು ಈಗಾಗಲೆ ೧೧೨ ಸ್ಥಳಗಳನ್ನು ದೊರಕಿಸಿ ಸಂಪೂರ್ಣ ಬಹುಮತ ಪಡೆದಿದೆ ಈಗ ಆರಿಸಿಬಂದ ೧೪೪ ಸದಸ್ಯರಲ್ಲಿ ಕಾಂಗ್ರೆಸ್ಸು ೧೧೨, ಮುಸ್ಲಿಂಲೀಗ ೨೦ ಯುರೋಪಿಯನ್ನ ೭ ಸ್ವತಂತ್ರ ೪ ರಾಷ್ಟ್ರೀಯ ೧ ಹೀಗೆ ಸ್ಥಳ ದೊರೆತಿವೆ.

ಸಂಯುಕ್ತಪ್ರಾಂತ—ಬಿಹಾರ

ಅಯೋಧ್ಯಾ ಹಿಂದೂ ಮಹಾಸಭೆಯ ಅಧ್ಯಕ್ಷ ಮಹೇಶ್ವರ ದಯಾಳ ಸೇಟ ಕೋಟ್ರಾ ಇವರು ಕಾಂಗ್ರೆಸ್ಸಿನಲ್ಲಿ ಕೂಡಿರುವರು. ಅಹಂಕಾರದ ಆಶೆಗಾಗಿ ತಾವು ಕಾಂಗ್ರೆಸ್ಸನ್ನು ಸೇರಿರದೆ ತ್ಯಾಗ ಹಾಗೂ ಸಂಕಷ್ಟಗಳನ್ನು ಅನುಭವಿಸಿ ಸೇವೆ ಮಾಡಲು ಸೇರಿರುವದಾಗಿಯೂ ಅವರು ಹೇಳಿದರು.

ಸಂಯುಕ್ತ ಪ್ರಾಂತ ಸರಕಾರದ ೧೯೪೬—೪೭ ರ ಅಂದಾಜ ಪತ್ರಿಕೆಯಲ್ಲಿ ೩೬೯೮೦ ರೂಪಾಯಿಗಳ ಉಳಿತಾಯವಾಗುವದೆಂದು ತಿಳಿಯುತ್ತದೆ

ಬಿಹಾರ ಶಾಸನ ಸಭೆಯ ಕಾಂಗ್ರೆಸ ಪಕ್ಷದ ಸಭೆ ಸೇರಿ ಶ್ರೀಕೃಷ್ಣ ಸಿಂಹರನ್ನು ಪಕ್ಷದ ಧುರೀಣರನ್ನಾಗಿ ಆರಿಸಲಾಯಿತು. ಮಂತ್ರಿಮಂಡಳ ರಚನೆಯಲ್ಲಿ ಸಹಾಯ ಮಾಡಲು ಗವರ್ನರರಿಂದ ಅವರಿಗೆ ಆಮಂತ್ರಣ ಬಂದಿದೆ.

ಅಖಿಲ ಭಾರತ ಪುರೋಗಾಮಿ ಪಕ್ಷದ ಉಪಾಧ್ಯಕ್ಷ ಪಂಡಿತ ಶೀಲಭದ್ರಯಾಜಿಯವರ ಮೇಲೆ ಪಾಟಣಾ ಪೋಲೀಸರು ನೋಟೀಸ ಜಾರಿ ಮಾಡಿ ಸಾರ್ವಜನಿಕ ಸಭೆಗಳಲ್ಲಿ ಮಾತಾಡಬಾರದೆಂದು ವಿಧಿಸಿದ್ದಾರೆ.

ಸಿಂಧ—ಸರಹದ್ದ—ಪಂಜಾಬ

ಶಿರೋಮಣಿ ಅಕಾಲಿ ದಲದ ಕಾರ್ಯಕಾರಿ ಮಂಡಳದ ಸಭೆ ಸೇರಿ ಶೀಖರ ಧಾರ್ಮಿಕ ಹಾಗು ಸಾಂಸ್ಕೃತಿಕ ರಾಜಕೀಯ ಹಕ್ಕುಗಳ ರಕ್ಷಣೆಗಾಗಿ ಸೀಖ ಸಾರ್ವಭೌಮ ಸರಕಾರ ಸ್ಥಾಪಿಸುವದು ಮತ್ತು ಆ ಸಂಬಂಧದ ಬೇಡಿಕೆಗಳನ್ನು ಬ್ರಿಟಿಶ ಮಂತ್ರಿತ್ರಯರ ಮುಂದಿಡಲು ಒಂದು ಸಮಿತಿಯನ್ನು ನಿಯಮಿಸಲಾಯಿತು.

ಸರಹದ್ದ ಶಾಸನ ಸಭೆಯಲ್ಲಿ ಮಂಡಿಸಲಾಗಿದ್ದ ಅಂದಾಜ ಪತ್ರಿಕೆಯು ಸ್ವೀಕೃತವಾಯಿತು. ಲೀಗ ಪಕ್ಷದವರ ಆರೋಪಗಳಿಗೆಲ್ಲ ಮಂತ್ರಿಗಳು ಉತ್ತರ ಕೊಟ್ಟು ಅವನ್ನೆಲ್ಲ ಖಂಡಿಸಿದರು.

ಕಾಂಗ್ರೆಸಿನ ಸರದಾರ ಕಾಪೂರಸಿಂಗರು ಪಂಜಾಬ ಶಾಸನಸಭೆಯ ಡೆಪ್ಯುಟಿ ಸ್ಪೀಕರರಾಗಿ ನಿಯಮಿಸಲ್ಪಟ್ಟಿರುವರು.

ಬ್ಯಾ. ಜಿನ್ನಾರವರು ಮಾಸ್ತರ ತಾರಾಸಿಂಗರನ್ನು ಕಾಣಬೇಕೆಂದು ಅವರಿಗೆ ಸಂತೋಷಕೂಟದ ಏರ್ಪಾಡು ಮಾಡಿದ್ದರು ಆದರೆ ತಾರಾಸಿಂಗರು ಆಮಂತ್ರಣ ಸ್ವೀಕರಿಸಲಿಲ್ಲ ಆದರೆ ಜಿನ್ನಾರನ್ನು ಕಾಣುವ ಇಚ್ಛೆ ತಮಗೂ ಆಗಿರುವದರಿಂದ ತಮ್ಮ ಗೃಹಕ್ಕೇ ಭೋಜನಕ್ಕೆ ಬರಬೇಕೆಂದು ಬರೆದಿದ್ದರು. ಆದರೆ ಜಿನ್ನಾರವರಿಗೆ ಹೋಗುವದಾಗಲಿಲ್ಲ ಹೀಗಾಗಿ ಅವರಿಬ್ಬರ ಭೆಟ್ಟಿ ಸಂಭವಿಸಲಿಲ್ಲ.

ಅಮೃತಸರದಲ್ಲಿ ಆಕ್ಷೇಪಾರ್ಹ ಭಾಷಣ ಮಾಡಿದರೆಂದು ಲಾಹೋರಿನ ಕೇಶವ ಭಾರ್ಗವ ಎಂಬ ವಿದ್ಯಾರ್ಥಿಯನ್ನು ಸೆರೆ ಹಿಡಿದಿರುವರು. ಅಯ. ಎಸ್. ಎ ಚಳವಳಿ ಸಂಬಂಧದಲ್ಲಿ ಮಾಡಿದ ಆಕ್ಷೇಪಾರ್ಹ ಭಾಷಣಕ್ಕಾಗಿ ಈಗಾಗಲೆ ಅವರ ಮೇಲೆ ಖಟ್ಲೆ ಹಾಕಲಾಗಿದೆ.

ಶಿವಗಂಗಾದ ೨೦ ವರ್ಷ ವಯಸ್ಸಿನ ರಾಜರು ತಮ್ಮ ಆಸ್ತಿಯನ್ನು ವಶಕ್ಕೆ ತೆಗೆದುಕೊಳ್ಳುವಾಗ ರೈತರಿಗೆ ೧೨ ಲಕ್ಷ ರೂಪಾಯಿ ಲಾವಣಿ ಸೂಟ ಪಟ್ಟದ್ದನ್ನು ಜಾಹೀರ ಮಾಡಿದರು.

ಬಂಗಾಲ—ಆಸಾಮ

ಡಾಕಾ ಧಾಕೇಶ್ವರಿ ಜವಳಿ ಗಿರಣಿಯ ಅಧಿಕಾರಿಗಳು ಪಾಲುಗಾರರ ಸಾಧಾರಣ ಸಭೆ ಕೆಲವು ಕಾಗದಪತ್ರಗಳನ್ನು ೨೫ ನೇ ತಾರೀಕು ಒಯ್ಯುತ್ತಿದ್ದಾಗ ಸಂಪುಗಾರರು ಅವರಿಗೆ ಅಡ್ಡಿ ಮಾಡಿದ್ದರಿಂದ ಪೋಲೀಸರು ಲಾಠಿಪ್ರಹಾರ ಮಾಡಿದರು. ಸಂಪುಗಾರರು ಇದಕ್ಕೆ ಪ್ರತಿಯಾಗಿ ಇಟ್ಟಂಗಿಗಳನ್ನು ಒಗೆದರು. ಪೋಲೀಸರು ಗೋಳಿಬಾರು ಮಾಡಬೇಕಾಯಿತು ಅನೇಕರು ಗಾಯಗೊಂಡು ಅವರಲ್ಲಿ ಇಬ್ಬರು ಸತ್ತರು. ಈ ಗಿರಣಿಯಲ್ಲಿ ಸಂಪು ಪ್ರಾರಂಭವಾಗಿ ೩೭ ದಿನಗಳಾದವು.

ಎಪ್ರಿಲ ಮೊದಲನೆ ವಾರದಲ್ಲಿ ಎಲ್ಲ ರಾಜಕೀಯ ಕೈದಿಗಳು ಬಿಡುಗಡೆ ಹೊಂದುವ ಸಂಭವವಿದೆಂದು ತಿಳಿಯುತ್ತದೆ. ಎಪ್ರಿಲ ೨ ಕ್ಕೆ ಸಾರ್ವತ್ರಿಕ ಬಿಡುಗಡೆಯ ಆಜ್ಞೆ ಹೊರಡಬಹುದೆಂದೂ ಅಗಸ್ಟ ಚಳವಳಿ ಸಂಬಂಧದಲ್ಲಿ ಕಾಣೆಯಾದವರ ಮೇಲಿನ ವಾರಂಟುಗಳನ್ನು ರದ್ದುಪಡಿಸಲಾಗುವದೆಂದೂ ತಿಳಿಯುತ್ತದೆ. ಆದರೆ ಅಧಿಕೃತ ವರ್ಗದವರ ಪುಷ್ಟಿ ಇದಕ್ಕೆ ದೊರೆತಿಲ್ಲ.

ಬಂಗಾಲ ಶಾಸನ ಸಭೆಯ ೨೫೦ ಸ್ಥಳಗಳಲ್ಲಿ ಈವರೆಗೆ ಜಾಹೀರಾದ ಸ್ಥಳಗಳಲ್ಲಿ ಕಾಂಗ್ರೆಸ್ಸಿಗೆ ೩೯, ಲೀಗಿಗೆ ೩೫, ಯುರೋಪಿಯನ್ ೨೪, ಆಂಗ್ಲೊ ಇಂಡಿಯನ್ ೪, ಸ್ವತಂತ್ರ ೫, ಕಮ್ಯುನಿಸ್ಟ ೧, ಹಿಂದೂಮಹಾಸಭಾ ೧ ಕೃಷಿಕಪ್ರಜಾ ೧ ಹೀಗೆ ಸ್ಥಳಗಳು ದೊರೆತಿವೆ.

ಓಡಿಸಾ

ಓಡಿಸಾ ಪ್ರಾಂತದ ೧೯೪೬-೪೭ ನೇ ಇಸ್ವಿಯ ಅಂದಾಜ ಪತ್ರಿಕೆಯಲ್ಲಿ ೩೫ ಲಕ್ಷ ರೂಪಾಯಿಗಳ ಕೊರತೆಯಿದೆಂದು ತಿಳಿಯುತ್ತದೆ.

ಮಂತ್ರಿಮಂಡಳ ರಚನೆಯಲ್ಲಿ ಸಹಾಯ ಮಾಡಲು ಓಡಿಸಾದ ಗವರ್ನರರು ಶ್ರೀ ಹರಿಕೃಷ್ಣ ಮೆಹತಾಬರಿಗೆ ಬಿನ್ನವಿಸಿಕೊಂಡಿರುವರು.

ವಿಜಾಪುರ ಜಿಲ್ಹೆಯಲ್ಲಿ ಬರಗಾಲ ಪರಿಹಾರ

ಗವರ್ನರ ಸಾಹೇಬರ ಆಶ್ವಾಸನ

ಮುಂಬಯಿ ಗವರ್ನರರಾದ ಸರ್ ಜಾನ್ ಕಾಲವಿಲ್‌ರವರು ವಿಜಾಪುರ ಜಿಲ್ಹೆಯ ದಕ್ಷಿಣ ಭಾಗದಲ್ಲಿ ಸಂಚರಿಸಿದ್ದರ ಪರಿಣಾಮವಾಗಿ ರೈತರಿಗೆ ಕೆಳಗಿನಂತೆ ಪರಿಹಾರದ ಆಶ್ವಾಸನ ದೊರೆತಿದೆ. ೧) ನೀರಿನ ಅಭಾವ ಇದ್ದ ಪ್ರದೇಶದಲ್ಲೆಲ್ಲ ಮೋಟರಗಳಿಂದ ಬಂಡಿಗಳಿಂದ ನೀರು ಪೂರೈಸಲಾಗುವದು. ೨) ಘಟಪ್ರಭನದಿಯಿಂದ ನೀರು ಪೂರೈಸುವ ಸಲುವಾಗಿ ಹತ್ತು ಸಾವಿರ ರೂಪಾಯಿಗಳ ಯೋಜನೆಯೊಂದನ್ನು ಮಾಡಲಾಗಿದೆ ೩) ಕೃಷ್ಣಾ ಮಲಪ್ರಭಾ ಘಟಪ್ರಭಾ ಮತ್ತು ಡೋಣ ನದಿಗಳಿಂದ ನೀರು ತೆಗೆದುಕೊಂಡು ಹೊಲಗಳಿಗೆ ಪೂರೈಸುವ ಯೋಜನೆ ಗೊತ್ತುಮಾಡಲಾಗಿದೆ. ಸುಮಾರು ೬೦ ಸ್ಥಳಗಳಲ್ಲಿ ಪಂಪಿಂಗ ಸ್ಟೇಶನುಗಳನ್ನು ಮಾಡಲಾಗುವದು. ೪) ಭಾವಿಗಳನ್ನು ತೋಡಿಕೊಂಡು ನೀರಾವರಿಯ ಉಪಯೋಗ ಮಾಡಿಕೊಳ್ಳುವವರಿಗೆ ಧನಸಹಾಯ ಮಾಡಲಾಗುವದು.

ಇವೆಲ್ಲ ಯೋಜನೆಗಳನ್ನು ಕಾರ್ಯರೂಪದಲ್ಲಿ ತರಲು ಗವರ್ನರರು ಆಶ್ವಾಸನ ಕೊಟ್ಟಿರುವರು. ಕೆಲವು ಕಡೆ ಈಗಾಗಲೇ ಈ ಯೋಜನ ಪ್ರಾರಂಭವಾಗಿದೆ.

ಚರಖಾ ಸಂಘಕ್ಕೆ ೧೩೦ ಸಾವಿರ ರೂಪಾಯಿ

ಬರಗಾಲ ಭಾಗಗಳಲ್ಲಿ ನೂಲುವ ಕಾರ್ಯ

ಮುಂಬಯಿ ಪ್ರಾಂತದ ದಕ್ಷಿಣ ಭಾಗದ ಬರಗಾಲ ಪ್ರದೇಶದಲ್ಲಿ ಸಂಕಷ್ಟ ಪರಿಹಾರವೆಂದು ನೂಲುವ ಕಾರ್ಯವನ್ನು ವಿಸ್ತರಗೊಳಿಸಲು ಮುಂಬಯಿ ಸರಕಾರದವರು ಕರ್ನಾಟಕ ಚರಕ ಸಂಘಕ್ಕೆ ೧೩೦೨೫೦ ರೂಪಾಯಿಗಳನ್ನು ವೆಚ್ಚಕ್ಕಾಗಿಯೂ ೬೧ ಸಾವಿರ ರೂಪಾಯಿಗಳನ್ನು ಸಾಲವೆಂದೂ ಮಂಜೂರು ಮಾಡಿದ್ದಾರೆ. ವೆಚ್ಚದ ರಕಮಿನಲ್ಲಿ ಬೆಳಗಾವಿ ಜಿಲ್ಲೆಗೆ ೩೫೫೫೦ ರೂಪಾಯಿ, ವಿಜಾಪುರ ಜಿಲ್ಹೆಗೆ ೫೪೪೦೦ ರೂ. ಧಾರವಾಡ ಜಿಲ್ಹೆಗೆ ೪೦೩೦೦ ರೂಪಾಯಿ ಹೀಗೆ ಮಂಜೂರಾಗಿವೆ.

ಹಿಂದುಸ್ತಾನಕ್ಕೆ ಬ್ರಿಟಿಶ ಮಂತ್ರಿಗಳ ಆಗಮನ

ಎಪ್ರಿಲ್ ಪೂರ್ವಾರ್ಧದಲ್ಲಿ ಮುಂದಾಳುಗಳೊಡನೆ ಭೆಟ್ಟಿ
ಹಿಂದುಸ್ತಾನಕ್ಕೆ ಪೂರ್ಣ ಸ್ವಾತಂತ್ರ್ಯ ಕೊಡುವ ಇಚ್ಛೆ—
" ಅಲ್ಪಸಂಖ್ಯಾಕರಿಗೆ ಪ್ರಗತಿ ತಡೆಯುವ ಅಧಿಕಾರವಿಲ್ಲ " —ಆಟ್ಲೆ

ಬ್ರಿಟಿಶ ಮಂತ್ರಿಮಂಡಲದ ಶಿಷ್ಟರು ಹಿಂದುಸ್ತಾನದ ರಾಜಕೀಯ ಬಿಕ್ಕಟ್ಟನ್ನು ಬಿಡಿಸುವ ಪ್ರಯತ್ನ ಮಾಡುವ ಸಲುವಾಗಿ ಹಿಂದುಸ್ತಾನಕ್ಕೆ ಬಂದಿದ್ದಾರೆ. ತಾ ೨೪ ಕ್ಕೆ ಅವರು ವಿಮಾನ ಮುಖಾಂತರ ಬಂದಿಳಿದಿದ್ದಾರೆ. ಹೊಸದಿಲ್ಲಿಯಲ್ಲಿ "ಹವಣಗಾಳಿ" (ಏರ್‌ಕಂಡೀಶನ್ಡ) ಕೋಣೆಗಳಲ್ಲಿ ಅವರು ಹಿಂದುಸ್ತಾನದ ಸಮಸ್ಯೆಗಳನ್ನು ಅಭ್ಯಸಿಸುವರು. ಅಲ್ಲೇ ಅವರು ವಿವಿಧ ರಾಜಕೀಯ ಪಕ್ಷದ ಧುರೀಣರೊಡನೆ ಮಾತುಕತೆ ನಡೆಸುವರು.

ಬ್ರಿಟಿಶ ಮಂತ್ರಿಮಂಡಲದ ಪರವಾಗಿ ಹಿಂದುಸ್ತಾನಕ್ಕೆ ಬಂದಿರುವವರೆಂದರೆ ಭಾರತ ಮಂತ್ರಿ ಲಾರ್ಡ ಪೆಥಿಕಲಾರೆನ್ಸ, ವಾಣಿಜ್ಯ ಮಂತ್ರಿ ಸರ್ ಸ್ಟಾಫರ್ಡ ಕ್ರಿಪ್ಸ ಮತ್ತು ನೌಕಾ ಮಂತ್ರಿ ಎ. ವಿ. ಅಲೆಗ್ಝಾಂಡರ.

ನಾಲ್ಕು ವರ್ಷಗಳ ಹಿಂದೆ ಸರ್ ಸ್ಟಾಫರ್ಡ ಕ್ರಿಪ್ಸರು ಹಿಂದುಸ್ತಾನಕ್ಕೆ ಇದೇ ಸಮಯದಯ ಮಾಡಿಸಿದ್ದರೆಂದು ಇಲ್ಲಿ ನೆನೆವರಿಕೆ ಮಾಡಿಕೊಳ್ಳಬಹುದು. ಆಗ ಅವರು ತಂದ ಕೊಡುಗೆಗಾದ ಗತಿ ಮತ್ತು ಅದರ ಪರಿಣಾಮವಾಗಿ ಹಿಂದುಸ್ತಾನದಲ್ಲಿ ಎದ್ದ ಬೇಗೆ ಇಷ್ಟು ಬೇಗನೆ ಮರೆತಿರಲಾರದು.

ಮುಂದಾಳುಗಳಿಗೆ ಭೆಟ್ಟಿ

ಮೂರು ಬೇರೆ ಬೇರೆ ಹವಣಗಾಳಿ ಕೋಣೆಗಳ ತಂಪು ವಾತಾವರಣದಲ್ಲಿ ಕುಳಿತು ಈ ಮಂತ್ರಿತ್ರಯರು ಕೆಲಸ ಮಾಡುವರೆಂದು ಗೊತ್ತಾಗಿದೆ ಎಪ್ರಿಲ ೧ ರ ವರೆಗೆ ಅವರು ಅಧಿಕಾರಿ ವರ್ಗದೊಡನೆ ಮತ್ತು ಈಗಿನ ವಾಯಿಸರಾಯ ಕಾರ್ಯಕಾರಿ ಮಂಡಲದ ಸದಸ್ಯರೊಡನೆ ಮಾತುಕತೆಗಳನ್ನು ನಡೆಸುವರು. ವಾಯಿಸರಾಯ ವೇವೆಲ್ಲರು ಈ ಶಿಷ್ಟಮಂಡಲದ ಚತುರ್ಥಮೂರ್ತಿಯಾಗಿ ನೆರವಾಗುವರು. ೧೯೪೨ ರಲ್ಲಿ ಸ್ಟಾಫರ್ಡ ಕ್ರಿಪ್ಸರ ಸಂಧಾನ ವಿಫಲವಾಗಲು ಆಗಿನ ವಾಯಿಸರಾಯರಾದ ಲಾರ್ಡ ಲಿನಲಿಥಗೋ ಅವರನ್ನು ಸೇರಿಸಿಕೊಳ್ಳದೆ ಇದ್ದುದೂ ಒಂದು ಕಾರಣವೆಂದೂ ಹೊರಗಿದ್ದ ಲಿನಲಿಥಗೋ ಸಾಹೇಬರು ತಮ್ಮ ಶಕ್ತಿ ಮೀರಿ ವಿರುದ್ಧ ದಿಶೆಗೆ ಜಗ್ಗಿದರೆಂದೂ ಆ ತಪ್ಪಿನ ಪುನರಾವರ್ತನೆ ಈ ಬಾರಿ ಆಗಬಾರದೆಂದು ಈ ಮುಂಜಾಗ್ರತೆ ವಹಿಸಲಾಗಿದೆಯೆಂದೂ ಹೇಳಲಾಗಿದೆ. ಕಾರ್ಯಕಾರಿ ಮಂಡಲದ ಸದಸ್ಯರೊಡನೆ ಮಾತುಕತೆ ಈಗಾಗಲೆ ನಡೆದಿದ್ದು ಲೋಕಪ್ರಿಯ ರಾಷ್ಟ್ರೀಯ ಸರಕಾರ (ಕಾರ್ಯಕಾರಿ ಮಂಡಲ) ಕ್ಕೆ ಅಧಿಕಾರ ಬಿಟ್ಟುಕೊಡಲು ತಾವು ಸಿದ್ಧರಿರುವದಾಗಿ ಅವರು ತಿಳಿಸಿರುವರಂತೆ. ಕಾರ್ಯಕಾರಿ ಮಂಡಲದ ಎಲ್ಲ ಸ್ಥಾನಗಳಿಗೂ ಹಿಂದೀ ಅಧಿಕಾರೇತರರನ್ನು ನೇಮಿಸಿಕೊಳ್ಳುವ ಅವಕಾಶವೊದಗಿಸಿಕೊಳ್ಳಲು ಪಾರ್ಲಿಮೆಂಟಿನಲ್ಲಿ ಮಂಡಿಸಲ್ಪಟ್ಟ ಹಿಂದುಸ್ತಾನ ಕಾಯಿದೆಯ ತಿದ್ದುಪಡಿ ಮಸೂದೆ ಈಗಾಗಲೆ ಎರಡು ಓದುಗಳನ್ನು ಮುಗಿಸಿದೆ. ಪ್ರಾಂತಿಕ ಗವರ್ನರರ ಭೆಟ್ಟಿಯೂ ಎಪ್ರಿಲ ೧ ರೊಳಗೆ ಮುಗಿಯುವದು.

ಎಪ್ರಿಲ ೧ ರಿಂದ ೧೫ ರ ವರೆಗೆ ಅವರು ಹಿಂದೀ ಪ್ರಮುಖರನ್ನೂ ನರೇಂದ್ರರನ್ನೂ ಅವರ ಪ್ರತಿನಿಧಿಗಳನ್ನೂ ಕಾಣುವರು. ಮೊದಲನೆ ದಿನ (ಎಪ್ರಿಲ ೧) ಗಡಿನಾಡು, ಪಂಜಾಬ, ಸಿಂಧ, ಆಸಾಮು ಮುಖ್ಯ ಮಂತ್ರಿಗಳ ಭೆಟ್ಟಿಯಿಂದ ಆರಂಭವಾಗುವದು. ಮಹಾತ್ಮಾ ಗಾಂಧಿ ಹಾಗು ಬ್ಯಾರಿಸ್ಟರ ಜಿನ್ನಾ ಸಾಹೇಬರು ಎಪ್ರಿಲ ೩ ಮತ್ತು ೪ ಕ್ಕೆ ಮಂತ್ರಿಶಿಷ್ಟರನ್ನು ಕಾಣುವರು. ಆಮಂತ್ರಿಸಲ್ಪಟ್ಟ ಇತರ ಪಕ್ಷ ಪ್ರಮುಖರಲ್ಲಿ ಮಾಸ್ಟರ ತಾರಾಸಿಂಗ ಮತ್ತು ಸರದಾರ ಬಲದೇವಸಿಂಗ (ಸೀಖ), ಡಾ. ಅಂಬೇಡಕರ ಮತ್ತು ರಾ. ಬ. ಶಿವರಾಜ (ಹಿಂದುಳಿದ ವರ್ಗ, ಮೊದಲಾದವರೂ ಕೇಂದ್ರ ಮತ್ತು ಪ್ರಾಂತಿಕ ಶಾಸನಸಭೆಗಳ ಪಕ್ಷ-ವಿರೋಧಿ ಪಕ್ಷಗಳ ಪ್ರಮುಖರೂ ಇರುವರು.

ಆಟ್ಲೆಯವರ ಹೇಳಿಕೆ

ಮಂತ್ರಿಶಿಷ್ಟರು ಹೊರಡುವದಕ್ಕೆ ಪೂರ್ವಭಾವಿಯಾಗಿ ಬ್ರಿಟಿಶ ಮುಖ್ಯಮಂತ್ರಿ ಕ್ಲೆಮೆಂಟ ಆಟ್ಲೆಯವರು ತಾ. ೧೫ಕ್ಕೆ ಪಾರ್ಲಮೆಂಟಿನಲ್ಲಿ ಈ ರಾಯಭಾರವನ್ನು ಕುರಿತು ಒಂದು ಹೇಳಿಕೆಕೊಟ್ಟರು. ಅದರಲ್ಲಿ ಬ್ರಿಟಿಶಹೇಳಿಕೆಗಳ ಸಾಮಾನ್ಯಗುಣಗಳಲ್ಲೊಂದಾದ ಸಂದಿಗ್ಧತೆ ಅಥವಾ "ತಂತಿಯ ಮೇಲೆ ನಡೆಯುವ ಸರ್ಕಸ್ಸು" ಇದ್ದರೂ ಆ ಹೇಳಿಕೆಯ ದನಿಯಲ್ಲಿ ಹೆಚ್ಚು ಕಳಕಳಿ, ಪ್ರಾಮಾಣಿಕತೆಯ ಪರಿಚಯ ದೊರೆಯುತಿತ್ತು. ವಿಶೇಷವೇನಂದರೆ ಹಿಂದೀಯರೊಡನೆ ಒಪ್ಪಂದ ಮಾಡಿಕೊಳ್ಳಬೇಕೆಂಬ ಕೂಲಿಕಾರ ಸರಕಾರದ ಇಚ್ಛೆಗೆ, ಬ್ರಿಟಿಶ ಇತಿಹಾಸದಲ್ಲಿ ಮೊದಲನೆ ಬಾರಿ ಕಾನ್ಸರ್ವೇಟಿವರು ಬೆಂಬಲ ಕೊಟ್ಟರು. " ಈ ಬಾರಿ ಆಯಶಸ್ವಿಯಾಗದಂತೆ ನೋಡಿಕೊಳ್ಳಬೇಕು " ಎಂಬ ಭಾವವನ್ನು ಅವರು ವ್ಯಕ್ತಗೊಳಿಸಿದರು.

ಮುಖ್ಯ ಮಂತ್ರಿ ಆಟ್ಲೆಯವರು ಕಳೆದ ೨೦ ವರ್ಷಗಳಲ್ಲಿ ಉಭಯ ಪಕ್ಷಗಳೂ (ಹಿಂದೀಯರು ಮತ್ತು ಬ್ರಿಟಿಶರು) ತಪ್ಪುತಡೆಗಳನ್ನೆಸಗಿವೆಯೆಂಬುದನ್ನು ಒಪ್ಪಿಕೊಂಡರು. ೧೯೪೬ ನೆ ಇಸ್ವಿಯ ಸ್ಥಿತಿ ೧೯೨೦ ರ ಅಥವಾ ೧೯೩೦ ರ ಅಷ್ಟೇಕೆ ೧೯೪೨ ರಲ್ಲಿದ್ದ ಪರಿಸ್ಥಿತಿಗಿಂತ ಕೂಡ ತೀರ ಭಿನ್ನವಾಗಿದೆ. ಹಿಂದೀಯರು ಹಳೆಯ ಘೋಷಣೆಗಳನ್ನು ಬಿಟ್ಟುಕೊಟ್ಟದ್ದಾರೆ. ಯುದ್ಧದಿಂದ ಈ ಸ್ಥಿತ್ಯಂತರ ಸಂಭವಿಸಿದೆ. ಹಿಂದುಸ್ತಾನದಲ್ಲಿ ಏಕೆ ಇಡಿ ಏಶಿಯಾದಲ್ಲಿ ರಾಷ್ಟ್ರೀಯ ಜಾಗ್ರತಿ ಉಕ್ಕೇರಿದೆ. ಅದು ಸೈನ್ಯಕ್ಕೆ ಕೂಡ ಪಸರಿಸಿದೆಯೆಂದು ಅವರು ನೆಟ್ಟನೆ ಅಂಗೀಕರಿಸಿದರು. ಅದುದರಿಂದ ಭಾರತೀಯರು ಸ್ವಾತಂತ್ರ್ಯ ಬಯಸಿದರೆ ಇಲ್ಲವೆನ್ನಲು ನಾವಾರು? ಎಂದು ಅವರು ಕೇಳಿದರು. ಈ ಸ್ವಾತಂತ್ರ್ಯವನ್ನು ಆದಷ್ಟು ಬೇಗ ಗಳಿಸಲು ನೆರವಾಗುವಗೋಸುಗವೇ ಮಂತ್ರಿತ್ರಯರು ಅಲ್ಲಿ ಹೋಗುತ್ತಿದ್ದಾರೆ. ಹಿಂದೀಯರು ತಮ್ಮ ಇಚ್ಛೆಯ ರಾಜ್ಯಘಟನೆಯನ್ನು ಸಿದ್ಧಗೊಳಿಸಲು ಅನುಕೂಲವಾದ ಸಂಸ್ಥೆಯನ್ನು ಸ್ಥಾಪಿಸುವ ವ್ಯವಸ್ಥೆ ಮಾಡಬೇಕಾಗಿದೆ. ಹಿಂದುಸ್ತಾನ ಬ್ರಿಟಿಶ ಕಾಮನವೆಲ್ತದಲ್ಲುಳಿಯುವದು ಅದಕ್ಕೆ ಹಿತಕರವೆಂದು ಆಟ್ಲೆಯವರ ಅಭಿಪ್ರಾಯವಾಗಿತ್ತು. ಆದರೂ ಅದು ಸ್ವತಂತ್ರವಾಗಿ ಉಳಿಯಬಯಸಿದರೆ ಅವರದೇನೂ ಆಕ್ಷೇಪವಿರಲಿಲ್ಲ. ಮಧ್ಯಕಾಲದಲ್ಲಿ ವಾಯಿಸರಾಯ ಮಂಡಲದ ಪೂರ್ಣ ಹಿಂದೀಕರಣವಾಗಬೇಕು.

ಆ್ಯಟ್ಲೆಯವರು ಇನ್ನೊಂದು ವಿಷಯವನ್ನು ಸ್ಪಷ್ಟಗೊಳಿಸಿದರು. ಹಿಂದುಸ್ತಾನದಲ್ಲಿರುವ ವಿವಿಧ ಜಾತಿ, ಜನಾಂಗ, ಭಾಷೆಗಳ ಭೇದಗಳನ್ನು ಅರಿತಿದ್ದರೂ ಹಿಂದೀಯರು ಅವನ್ನೆಲ್ಲ ಸರಿಪಡಿಸಿಕೊಳ್ಳಬಲ್ಲರೆಂಬ ಆಶೆ ಅವರಿಗಿತ್ತು. ಅಲ್ಪಸಂಖ್ಯಾಕರ ಪ್ರಶ್ನೆಯನ್ನು, ಅವರ ಹಿತಸಂಬಂಧಗಳನ್ನು ಆ್ಯಟ್ಲೆಯವರು ಮರೆತಿರಲಿಲ್ಲ. ಆದರೆ ಬಹುಸಂಖ್ಯಾಕರ ಪ್ರಗತಿಯನ್ನು ತಡೆಗಟ್ಟಲು ಅಲ್ಪಸಂಖ್ಯಾಕರಿಗೆ ಅಧಿಕಾರ ಕೊಡಲಾರೆವೆಂದು ಅವರು ಸ್ಪಷ್ಟವಾಗಿ ಹೇಳಿದರು. ಹಿಂದುಸ್ತಾನಕ್ಕೆ ಸ್ವಾತಂತ್ರ್ಯ ಕೊಟ್ಟು ಅಲ್ಪಸಂಖ್ಯಾಕರ ಪರವಾಗಿ ನಾವು ಅದರ ಆಡಳಿತೆಯಲ್ಲಿ ಕೈಹಾಕಲಾರೆವೆಂದರವರು. ನರೇಂದ್ರರೂ ಪ್ರಗತಿಪಥದಲ್ಲಿ ಸಾಗಬೇಕೆಂದು ಅವರು ಆಶಿಸಿದರು. ಮಂತ್ರಿಶಿಷ್ಟರಿಗೆ ಸಾಕಷ್ಟು ಬಿಡುಗೈ ಕೊಡಲಾಗಿದೆಯೆಂದು ಅವರು ಹೇಳಿದರು.

ಕೊನೆಯಲ್ಲಿ ಅವರು "ನನ್ನ ಮಂತ್ರಿಗಳು ಯಶಸ್ವಿಗಳಾಗುವ ನಿರ್ಧಾರದಿಂದ ಹಿಂದುಸ್ತಾನಕ್ಕೆ ಹೊರಟಿರುವರು" ಎಂದು ಹೇಳಿ ಸರಕಾರದ ಕಳಕಳಿಯನ್ನು ವ್ಯಕ್ತಗೊಳಿಸಿದರು.

ಪ್ರತಿಕ್ರಿಯೆಗಳು

ಆಟ್ಲೆಯವರ ಈ ಭಾಷಣಕ್ಕೆ—ಮುಖ್ಯವಾಗಿ ಅವರು ಹಿಂದುಸ್ತಾನದಲ್ಲಿರುವ ಆನೈಕ್ಯದ ಪಲ್ಲವಿಯ ಹಾಡಿಕೆ ನಿಲ್ಲಿಸಿ ಅಲ್ಪಸಂಖ್ಯಾಕರು ಬಹುಸಂಖ್ಯಾಕರ ಪ್ರಗತಿಯನ್ನು ತಡೆಯಲಾರರೆಂದು ಹೇಳಿದ್ದಕ್ಕೆ—ಹಿಂದುಸ್ತಾನದಲ್ಲಿ ಸಾಮಾನ್ಯವಾಗಿ ಸ್ವಾಗತವೇ ಸಿಕ್ಕಿತು. "ಆಟ್ಲೆಯವರ ಭಾಷಣ ಅನುಕೂಲ ವಾತಾವರಣವುಂಟು ಮಾಡಲು ಸಹಾಯಕವಾಗಿದೆ" ಎಂದು ಅಧ್ಯಕ್ಷ ಆಝಾದರು ಹೇಳಿದರು. ಪೂರ್ಣ ಸ್ವಾತಂತ್ರ್ಯ ಹೊರತು ಅರ್ಧಮರ್ಧ ಯೋಜನೆಗಳನ್ನು ಹಿಂದುಸ್ತಾನ ಸ್ವೀಕರಿಸಲಾರದು ಎಂದು ನೆಹರೂ ಅವರು ಹೇಳಿದರೂ ಆಟ್ಲೆಯವರ ನಡೆನುಡಿಗಳಲ್ಲಿ ಬದಲಾವಣೆಯಾದುದನ್ನು ಅವರು ಸ್ವಾಗತಿಸದಿರಲಿಲ್ಲ. ಬ್ಯಾರಿಸ್ಟರ ಜಿನ್ನಾರೊಬ್ಬರಿಗೇ ಆಟ್ಲೆಯವರ ಹೇಳಿಕೆ ಅಪಥ್ಯವಾಯಿತು. ಬಹುಸಂಖ್ಯಾಕರ ಪ್ರಗತಿಗೆ ಅಡ್ಡಬರಲು ಅಲ್ಪ ಸಂಖ್ಯಾಕರಿಗೆ ಅವಕಾಶ ಕೊಡಲಾರೆವೆಂದು ಹೇಳುವ ಆಟ್ಲೆಯವರು ಅಪಪ್ರಚಾರಕ್ಕೆ ಬಲಿಯಾಗಿರುವರೆಂದು ಅವರ ಹೇಳಿಕೆಯಾಗಿತ್ತು. ಆದರೆ ಅವರು ಈ ಇಕ್ಕಟ್ಟಿನಿಂದ ಪಾರಾಗಲು ಬಂದು ಯುಕ್ತಿಯನ್ನು ಕಂಡರು ಮುಸ್ಲಿಮರು ಅಲ್ಪ ಸಂಖ್ಯಾಕರೇ ಅಲ್ಲ; ಅವರು ಬೇರೆಯೆ ರಾಷ್ಟ್ರ. ಸ್ವಯಂನಿರ್ಣಯಾಧಿಕಾರ ಅವರ ಜನ್ಮಸಿದ್ಧ ಹಕ್ಕು. ಎಂದರವರು ಪಾಕಿಸ್ತಾನವೊಂದೇ ಈ ಸಮಸ್ಯೆಗೆ ತಾರಕವೆಂದು ಗಟ್ಟಿಯಾಗಿ ಹೇಳಿದರು. ರಾಜಾಜಿಯವರು "ಇನ್ನಾರು ತಿಂಗಳಲ್ಲಿ ಸ್ವರಾಜ್ಯ" ಎಂದು ಹೇಳಿ ತಮ್ಮ ಆಶೆಯನ್ನು ವ್ಯಕ್ತಗೊಳಿಸಿದ್ದಾರೆ. ಆದರೆ ಡಾ. ಅಂಬೇಡಕರರು ದಲಿತವರ್ಗದ ಪರವಾಗಿ ಮಾತಾಡುತ್ತ ಬ್ರಿಟಿಶರು ಹಿಂದೂ ಮುಸ್ಲಿಂ ಪ್ರಶ್ನೆಗೇ ಮಹತ್ವವಿತ್ತು ದಲಿತ ವರ್ಗವನ್ನು ದುರ್ಲಕ್ಷಿಸಿದರೆ ೬ ಕೋಟಿ ದಲಿತರು ಬ್ರಿಟಿಶರನ್ನು ತೊರೆದು ಬೇರೆಯವರಿಗೆ ಮೊರೆಹೋಗಬೇಕಾಗುವದೆಂದು ಹೇಳುತ್ತಾರೆ !

ಮಂತ್ರಿತ್ರಯರು ಏನೆನ್ನುವರು ?

ತಾ. ೨೪ ಕ್ಕೆ ಕರಾಚಿ ವಿಮಾನಗೃಹದಲ್ಲಿ ಇಳಿದೊಡನೆ ಒಮ್ಮೆ, ಮತ್ತೆ ತಾ. ೨೫ಕ್ಕೆ ಹೊಸದಿಲ್ಲಿಯಲ್ಲೊಮ್ಮೆ ಹೀಗೆ ಎರಡು ಬಾರಿ ಮಂತ್ರಿಗಳು ಪತ್ರಿಕಾ ಪ್ರತಿನಿಧಿಗಳಿಗೆ ಭೆಟ್ಟಿ ಕೊಟ್ಟರು. "ಹಿಂದುಸ್ತಾನ ಉಜ್ವಲ ಭವಿತವ್ಯದ ಹೊಸ್ತಿಲಲ್ಲಿದೆಯೆಂದು ನಮಗೆ ಖಚಿತವಾಗಿದೆ. ಸ್ವತಂತ್ರ ಹಿಂದುಸ್ತಾನ ಪೂರ್ವಾಂತ್ಯದಲ್ಲಿ ನಾಗರಿಕತೆಯನ್ನು ರಕ್ಷಿಸುವದು. ಮತ್ತು ಜಗತ್ತಿನಲ್ಲಿ ತನ್ನ ಪ್ರಭಾವ ಬೀರುವದೆಂದು ನಮ್ಮ ಆಶೆ" ಎಂದು ಅವರು ಹೇಳಿದರು. "ನಿಮ್ಮ ಆಡಳಿತದ ಸೂತ್ರಗಳನ್ನು ನೀವೇ ವಹಿಸುವಂತೆ" ಬ್ರಿಟಿಶ ಸರಕಾರ ಆಗಿಂದಾಗ್ಗೆ ಕೊಟ್ಟ ವಚನಗಳನ್ನು ಪೂರೈಸಲು ಬಯಸುತ್ತಿದೆ. ಸ್ವಾತಂತ್ರ್ಯ ದೇವಿಯ ಮಂದಿರಕ್ಕೆ ತೆರಳುವ ನಿಶ್ಚಿತವಾದ ಹೆದ್ದಾರಿ ನಿಚ್ಚಳವಾಗಿ ಕಾಣಿಸುವದಿಲ್ಲ. ಆದರೆ ನಾವು ಸಹಕಾರದ ದಾರಿಹಿಡಿಯಲು ಯತ್ನಿಸೋಣ. ಎಂದರು. ಕ್ರಿಪ್ಸ ಯೋಜನೆಯ ತಳಹದಿಯಲ್ಲೇ ಮಾತುಕತೆ ಸಾಗಿಸಲು ಅವರು ಬಂದಿಲ್ಲ. "ನಾವು ಹಿಂದೆ ಹೆಜ್ಜೆಯಿಡುವದಿಲ್ಲ. ಮುಂದೆ ಹೆಜ್ಜೆ ಹಾಕುತ್ತ ಹೋಗುವೆವು" ಈಗಾಗಲೆ ಬ್ರಿಟನ ಹಿಂದುಸ್ತಾನಗಳ ನಡುವೆ ಆಗಬೇಕಾದ ಒಪ್ಪಂದದ ಕರಡನ್ನು ಮಂತ್ರಿತ್ರಯರು ಸಿದ್ಧಗೊಳಿಸಿ ತಮ್ಮೊಡನೆ ತಂದಿರುವರೆಂಬುದು ಸುಳ್ಳು. ಅವರು " ತೆರೆ ಮನಸ್ಸಿನಿಂದ " ಬಂದಿರುವರು. ಪಾಕಿಸ್ತಾನದ ಬಗ್ಗೆಯೂ ಅವರು ತೆರೆ ಮನಸಿನಿಂದಲೇ ಬಂದಿದ್ದಾರೆ. ಹಿಂದುಸ್ತಾನದಲ್ಲಿ ಇತ್ತಂಡದವರು ಮುಂದೊಡ್ಡಿದ ಬೇಡಿಕೆಯನ್ನು ಕುರಿತು ತೀರ್ಪು ಕೊಡಲು ಅವರಿಲ್ಲಿ ಬಂದಿಲ್ಲ. " ಹಿಂದೀಯರಿಗೆ ಅಧಿಕಾರವನ್ನು ಬಿಟ್ಟುಕೊಡುವ ಸಾಧನವನ್ನು ಕಂಡುಹಿಡಿಯಲು ಬಂದಿರುವೆವು. "

ತಾ. ೨೫ ಹೊಸದಿಲ್ಲಿಯಲ್ಲಿ ಸೇರಿಸಿದ ಪತ್ರಿಕಾ ಪರಿಷತ್ತಿನಲ್ಲಿ ಭಾರತ ಮಂತ್ರಿ ಪೆಥಿಕ್‌ಲಾರೆನ್ಸರು ಕೊಟ್ಟ ಹೇಳಿಕೆಯಲ್ಲಿಯೂ ಮೇಲಿನ ಅಂಶಗಳನ್ನೆ ಒತ್ತಿ ಹೇಳಿದರು. "ಹಿಂದುಸ್ತಾನ ಪೂರ್ಣ ಸ್ವತಂತ್ರ ಸ್ಥಾನಮಾನವನ್ನು ಯಾವ ರೀತಿಯಲ್ಲಿ ಪಡೆಯಬಹುದೆಂಬುದನ್ನು ನಿರ್ಧರಿಸುವ ಸಂಸ್ಥೆಯನ್ನು ಸ್ಥಾಪಿಸುವ ಸಲುವಾಗಿ ಮಾತುಕತೆ ನಡೆಸಲು " ತಾವು ಹಿಂದುಸ್ತಾನಕ್ಕೆ ಬಂದಿರುವದಾಗಿ ಅವರು ಹೇಳಿದರು. ಅಲ್ಪಸಂಖ್ಯಾಕರ ಮತ್ತು ನರೇಂದ್ರರ ಸಂಬಂಧವಾಗಿ ಕೇಳಲ್ಪಟ್ಟ ಕೆಲ ಪ್ರಶ್ನೆಗಳಿಗೆ ಅವರು ಉತ್ತರ ಕೊಟ್ಟರು. ಅಲ್ಪಸಂಖ್ಯಾಕರನ್ನು ಅಲಕ್ಷಿಸಲಾಗುವದೆಂದು ಆಟ್ಲೆಯವರ ಭಾಷಣಕ್ಕೆ ಅರ್ಥಮಾಡಲಾಗದು. ಕಾಂಗ್ರೆಸ್, ಲೀಗ, ಎರಡೂ ದೇಶದ ಪ್ರಾತಿನಿಧಿಕ ಸಂಸ್ಥೆಗಳು. ಮುಸ್ಲಿಂಲೀಗು "ಮಹಾ ಮುಸ್ಲಿಂ ಸಮಾಜದ ಬಹುಸಂಖ್ಯಾಕ ಪ್ರತಿನಿಧಿ" ಮುಸ್ಲಿಮರು ಹಿಂದುಸ್ತಾನದ ಪ್ರಮುಖ "ಸಮಾಜ" ಗಳಲ್ಲಿ ಒಂದು, ಎಂದು ಅವರು ಮುಸ್ಲಿಮರು ಪ್ರತ್ಯೇಕ ರಾಷ್ಟ್ರವೋ ಅಲ್ಲವೋ ಎಂಬ ಪ್ರಶ್ನೆಗೆ ಉತ್ತರವಿತ್ತರು. "ಎರಡು ಘಟನಾ ಸಮಿತಿಗಳೇ ಆಗಬೇಕೆಂದು (ಮುಸ್ಲಿಮರು) ಕೇಳಿದರೆ ಏನು ಮಾಡುವಿರಿ ?" ಎಂದುದಕ್ಕೆ ಇಂಥ ಕಾಲ್ಪನಿಕ ಪ್ರಶ್ನೆಗಳಿಗೆ ಲಾರೆನ್ಸರು ಉತ್ತರ ಕೊಡಲೊಪ್ಪಲಿಲ್ಲ. ಎಲ್ಲರ ಸಹಕಾರದಿಂದ ಒಪ್ಪಂದವಾಗುವದೆಂಬ ನಂಬಿಕೆಯನ್ನೇ ಅವರು ವ್ಯಕ್ತಗೊಳಿಸಿದರು. ನರೇಂದ್ರರನ್ನು ಅಲಕ್ಷಿಸಬಾರದೆಂದು ಅವರು ಹೇಳಿದರು. ಸಂಸ್ಥಾನಿ ಪ್ರಜೆಗಳ ಅಭಿಪ್ರಾಯ ಕೇಳುವ ವಿಷಯದಲ್ಲಿ ಅವರು "ವಾಸ್ತವಿಕತೆ" ಯ ದೃಷ್ಟಿಯಿಂದ ನರೇಂದ್ರರೊಡನೆಯೇ ಮಾತುಕತೆ ನಡೆಸಬೇಕಾಗುವದೆಂದರು. ಅಧಿಕಾರ ತ್ಯಾಗಕ್ಕೆ ಕಾಲಾವಧಿ ನಿರ್ಣಯವನ್ನೇನಾದರೂ ಹಾಕಿಕೊಂಡಿರುವದು ಸಾಧ್ಯವಿಲ್ಲವಂತೆ. ಆದರೆ "ಆದಷ್ಟು ಬೇಗ" ಅಧಿಕಾರ ತ್ಯಾಗಮಾಡುವದು ಅವರ ಉದ್ದೇಶ. "ಎಲ್ಲರೂ ಒಪ್ಪಿದರೆ" ಅವಧಿಯನ್ನೂ ನಿರ್ಣಯಿಸಬಹುದು ಎಂದು ಅವರು ಹೇಳಿದರು. ಕೊನೆಯಲ್ಲಿ ಅವರು ಪತ್ರಿಕೆಗಳಲ್ಲಿ ಪಕ್ಷಗಳ ಪರಸ್ಪರ ಟೀಕೆಗಳನ್ನು ಕಡಿಮೆ ಮಾಡಿದರೆ ಒಪ್ಪಂದಕ್ಕೆ ಅನುಕೂಲ ವಾತಾವರಣವಾಗುವದೆಂದು ಸೂಚಿಸಿದರು.

ಮೈಸೂರು ನಗರದಲ್ಲಿ ತಾ. ೨೪ ಕ್ಕೆ ಸೇರಿದ ಮೈಸೂರು ಕಾಂಗ್ರೆಸ್ ಪಾರ್ಲಮೆಂಟರಿ ಸಮಿತಿಯ ಸಭೆಯಲ್ಲಿ ಚಿತ್ರದುರ್ಗ ಪೌರ ಸಭೆಯ ಮತ್ತು ಜಿಲ್ಹಾಬೋರ್ಡಿನ ಚುನಾವಣೆಗಳ ತಕರಾರುಗಳನ್ನು ವಿಚಾರಿಸಿ ವರದಿ ಮಾಡಲು ಶ್ರೀ ವೀರಣ್ಣಗೌಡರಿಗೆ ಅಧಿಕಾರ ಕೊಡಲಾಯಿತು. ದಾವಣಗೆರೆ ಪೌರಸಭೆಯ ತಕರಾರುಗಳನ್ನು ಶ್ರೀ ಸುಬ್ರಹ್ಮಣ್ಯಂ ಮತ್ತು ವೀರಣ್ಣಗೌಡರು ವಿಚಾರಿಸಬೇಕೆಂದೂ ಬೆಂಗಳೂರು ನಗರ ಸಭೆಯ ೧೦ ಕಾಂಗ್ರೆಸ್ ಸದಸ್ಯರು ಪಾರ್ಲಮೆಂಟರಿ ಸಮಿತಿಯನ್ನು ವಿಚಾರಿಸದೆ ರಾಜೀನಾಮೆ ಕೊಟ್ಟದ್ದಕ್ಕೆ ವಿವರಣೆ ಕೇಳಬೇಕೆಂದೂ ನಿರ್ಣಯವಾಯಿತು.

ಮೈಸೂರು ಸಂಸ್ಥಾನದ ಪೋಲೀಸ ಖಾತೆಯ ೧೯೪೪-೪೫ ವರ್ಷದ ವರದಿಯಲ್ಲಿ ಸಂಸ್ಥಾನದಲ್ಲಿ ಅಪರಾಧಗಳು ಕಡಿಮೆಯಾಗಿರುವದನ್ನು ಸೂಚಿಸಲಾಗಿದೆ. ಗುರುತರ ಅಪರಾಧಗಳು ೭೬೬೪ ರಿಂದ ೬೨೩೫ ಕ್ಕಿಳಿದಿವೆ. ಕೊಲೆ ಮತ್ತು ದರೋಡೆಗಳು ಕ್ರಮವಾಗಿ ೯೯ ರಿಂದ ೧೨೨ ಕ್ಕೆ ಮತ್ತು ೧೬ ರಿಂದ ೨೩ ಕ್ಕೆ ಏರಿವೆ. ಅಪರಾಧಗಳು ಕಡಿಮೆಯಾಗಲು ಯುದ್ಧದಿಂದ ಹೇರಳ ಉದ್ಯೋಗಗಳು ದೊರೆತುದು ಕಾರಣವೆಂದು ವರದಿಯ ಅಭಿಪ್ರಾಯ.

ಮೈಸೂರು ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಈ ಬಾರಿ ೮೨೩೫ ವಿದ್ಯಾರ್ಥಿಗಳು ನಿಂತಿದ್ದು ಈ ಸಂಖ್ಯೆ ಕಳೆದ ವರ್ಷಕ್ಕಿಂತ ೧೬೭೧ ರಷ್ಟು ಹೆಚ್ಚೆಂದು ತಿಳಿದುಬಂದಿದೆ.

ಆಹಾರಾಭಾವದ ನಿಮಿತ್ತ ಬೆಂಗಳೂರಲ್ಲಿ ಬೇಸಗೆಯಲ್ಲಿ ನಡೆಯುತ್ತಿದ್ದ ಪುಷ್ಪ ಪ್ರದರ್ಶನ, ನಾಯಿಗಳ ಪ್ರದರ್ಶನ ಮೊದಲಾದವುಗಳು ನಿಲ್ಲಿಸಲ್ಪಟ್ಟಿವೆ.

ಮೈಸೂರು ಯುದ್ಧ ನಿಧಿಯ ಆಸ್ಪತ್ರೆ ಸೌಕರ್ಯ ಲಾಟರಿಯ ಪ್ರಥಮ ಬಹುಮಾನವಾದ ರೂ. ೬೨೪೫ ಮೈಸೂರು ನಗರದ ರೇಲ್ವೆ ನಿಲ್ದಾಣದ ಗಂಟು ಹೊರುವ ಕೂಲಿ ಜಾಫರಖಾನ ಎಂಬವನಿಗೆ ದೊರೆಯಿತು.

ಬೆಂಗಳೂರು--ಮೈಸೂರು

ಗೋಖಲೆ ಸಾರ್ವಜನಿಕ ಸಂಸ್ಥೆಯ ಕಾರ್ಯದರ್ಶಿ ಶ್ರೀ ಡಿ. ವಿ. ಗುಂಡಪ್ಪನವರು ಹಿಂದುಸ್ತಾನದಲ್ಲಿ ಬಂದಿರುವ ಬ್ರಿಟಿಶ ಮಂತ್ರಿ ಶಿಷ್ಟಮಂಡಳದ ಸಂಬಂಧದಲ್ಲಿ ವಾಯಿಸರಾಯರಿಗೆ ಒಂದು ತಂತಿ ಕಳಿಸಿ ಶಿಷ್ಟಮಂಡಳದವರು ಹಿಂದೀ ಸಂಸ್ಥಾನಗಳಲ್ಲಿನ ಸಾರ್ವಜನಿಕ ಸಂಸ್ಥೆಗಳಿಗೂ ಲೋಕಪ್ರಿಯ ಮುಂದಾಳುಗಳಿಗೂ ಭೆಟ್ಟಿ ಕೊಡುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಂಡಿದ್ದಾರೆ. ಸಂಸ್ಥಾನಾಧೀಶರ ಪ್ರತಿನಿಧಿಗಳಿಗೆ ಮಾತ್ರವಲ್ಲದೆ ಪ್ರಜೆಗಳಿಗೂ ಪ್ರಾತಿನಿಧ್ಯ ಕೊಡುವದು ಅವಶ್ಯವಿದೆಯೆಂದು ಅವರು ಒತ್ತಿ ಹೇಳಿದ್ದಾರೆ.

ಮೈಸೂರು ಕಾಂಗ್ರೆಸ ಅಧ್ಯಕ್ಷ ನಿಜಲಿಂಗಪ್ಪನವರು ತಾ. ೨೫ ಕ್ಕೆ ಬೆಂಗಳೂರಲ್ಲಿ ಒಂದು ಸುದ್ದಿಗಾರ ಸಭೆ ಕರೆದು ಬ್ರಿಟಿಶ ಮಂತ್ರಿಗಳು ಸಂಸ್ಥಾನ ಪ್ರಜೆಗಳ ನಿಜವಾದ ಪ್ರತಿನಿಧಿಗಳನ್ನು ಕರೆಸಿಕೊಂಡು ಪ್ರಜೆಗಳ ಆಶೋತ್ತರಗಳನ್ನು ಕೇಳಿಕೊಳ್ಳುವದು ಅವಶ್ಯವಿದೆಯೆಂದು ಹೇಳಿದರು. ಸಂಸ್ಥಾನಗಳ ದೃಷ್ಟಿಯಿಂದ ಈ ಶಿಷ್ಟಮಂಡಲ ನಿರಾಶಾಜನಕವಾಗಿದೆಯೆಂದು ಅವರ ಅಭಿಪ್ರಾಯವಾಗಿತ್ತು. ಪೂರ್ಣ ಜೊಬಾಬುದಾರ ಸರಕಾರಗಳನ್ನು ನರೇಂದ್ರರು ಸ್ಥಾಪಿಸುವ ಕುರಿತು ಬ್ರಿಟಿಶ ಸರಕಾರದವರು ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ಘೋಷಿಸಬೇಕೆಂದು ಒತ್ತಾಯಪಡಿಸಿ ಅವರು ಮೈಸೂರಲ್ಲಿ ಇನ್ನೂ ನಡೆದಿರುವ ದಬ್ಬಾಳಿಕೆಯ ಕಡೆ ಹೊರಳಿ, ಎಪ್ರಿಲ ೧ ಕ್ಕೆ ಯುದ್ಧ ಅಧಿಕೃತವಾಗಿ ಮುಗಿಯುವದರಿಂದ ಇನ್ನಾದರೂ ಪ್ರತಿಬಂಧಕಾಜ್ಞೆಗಳನ್ನು ಸರಕಾರ ಹಿಂತೆಗೆದುಕೊಳ್ಳಲೆಂದು ಕೇಳಿಕೊಂಡರು.

ಸಂಸ್ಥಾನದ ಬೇರೆ ಬೇರೆ ನಗರ ಪಟ್ಟಣಗಳಲ್ಲಿ ಕುಡಿಯುವ ನೀರಿನ ಪೂರೈಕೆಗಾಗಿ ಮುಂಗಡ ಪತ್ರಿಕೆಯಲ್ಲಿ ತೆಗೆದಿಟ್ಟಿರುವ ೭೫,೦೦೦ ರೂಪಾಯಿಗಳನ್ನು ವಿವಿಧ ನಗರ-ಪೌರ ಸಭೆಗಳಲ್ಲಿ ಹಂಚುವ ಯೋಜನೆಯೊಂದನ್ನು ಸರಕಾರದವರು ಮಾನ್ಯ ಮಾಡಿದ್ದಾರೆ.

ಕೋಲಾರದ ಚಿನ್ನದ ಗಣಿಗಳಲ್ಲಿ ೭೦ ದಿನಗಳಿಗಿಂತಲೂ ಮಿಕ್ಕಿ ನಡೆದ ಕೂಲಿಕಾರರ ಸಂಪು ನಿಲ್ಲಿಸಲ್ಪಟ್ಟಿದೆ. ಗಣಿಯೊಡೆಯರು ಹೊಸ ಸಂಬಳದ ಪಟ್ಟಿಯನ್ನು ಪ್ರಸಿದ್ಧಿಸಿದ್ದಾರೆ. ಕೂಲಿಕಾರ ಬೇಡಿಕೆಗಳನ್ನು ಪರಿಶೀಲಿಸುವ ಕುರಿತು ಕೂಲಿಕಾರ ಸಂಘಕ್ಕೂ ಒಡೆಯರಿಗೂ ಆದ ಒಪ್ಪಂದದ ಪರಿಣಾಮವಾಗಿ ಕೂಲಿಕಾರರು ಕೆಲಸಕ್ಕೆ ಮರಳಿದ್ದಾರೆ.

ಯಶವಂತಪುರದಲ್ಲಿರುವ ಮೈಸೂರು ಪ್ಲೈವುಡ ಕಾರಖಾನೆಯನ್ನು ಅದರ ಒಡೆಯರು ತಾ. ೧೯ ರಿಂದ ಮುಚ್ಚಿ ಕೆಲಸಗಾರರನ್ನು ಹೊರಗೆ ಹಾಕಿದ್ದಾರೆ. ಜನವರಿಯಿಂದಲೂ ಕೂಲಿಕಾರರ ಸಂಘಕ್ಕೂ ಒಡೆಯರಿಗೂ ತಂಟೆ ನಡೆದಿತ್ತೆಂದೂ ಕೂಲಿಕಾರರನ್ನು ಉಪಮರ್ದಿಸುವ ಸಲುವಾಗಿ ನಾನಾವಿಧ ಟೊಳ್ಳು ಕಾರಣಗಳನ್ನಿತ್ತು ಒಡೆಯರು ಕಾರಖಾನೆ ಮುಚ್ಚಿರುವರೆಂದೂ ಆಪಾದಿಸಲಾಗಿದೆ. ಈ "ಕೀಲಿಕಟ್ಟು" (ಲಾಕೌಟ) ಕ್ರಮಬದ್ಧವಲ್ಲೆಂದು ರಜಿಸ್ಟ್ರಾರರು ತಿಳಿಸಿದ್ದರೂ ಕಾರಖಾನೆಯ ಒಡೆಯರು ಇನ್ನೂ ಬಾಗಿಲು ತೆರೆದಿಲ್ಲ.

ಮೈಸೂರು ಸಂಸ್ಥಾನದಲ್ಲಿಯೂ ಬೆಂಗಳೂರು ದಂಡಿನ ಪ್ರದೇಶದಲ್ಲಿಯೂ ಆಹಾರ ಮಿತವ್ಯಯ ಸತ್ರದ ಅಂಗವಾಗಿ ಮಾರ್ಚ ೩೦ ರಿಂದ ಮದುವೆ ಸಮಾರಂಭದಲ್ಲಿ ೪೦ ಕ್ಕಿಂತ ಮತ್ತು ಇತರ ಪ್ರಸಂಗಗಳಲ್ಲಿ ೧೦ ಕ್ಕಿಂತ ಹೆಚ್ಚು ಜನರನ್ನು ಊಟಕ್ಕೆ ಕರೆಯುವದನ್ನು ಪ್ರತಿಬಂಧಿಸುವ ಆಜ್ಞೆ ಹೊರಟಿದೆ.

ಬೆಂಗಳೂರಿನ ಅಶಕ್ತ ಪೋಷಕ ಸಭೆಯ ೧೯ನೆ ವಾರ್ಷಿಕೋತ್ಸವ ತಾ. ೨೪ ಕ್ಕೆ ಶಿಕ್ಷಣ ಮತ್ತು ಆರೋಗ್ಯ ಮಂತ್ರಿ ಡಾ. ರಾಯನ್ನರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ಅನಾಥ ಹೆಣ್ಣುಮಕ್ಕಳಿಗೊಂದು ಮನೆ ಕಟ್ಟಿಸಲು ಧರ್ಮಪ್ರಕಾಶ ಕುಪ್ಪುಸ್ವಾಮಿ ನಾಯಿಡು ಅವರು ೨೦೦೦೦ ರೂಪಾಯಿ ದಾನ ಮಾಡಿರುವದನ್ನು ಸಭೆಯಲ್ಲಿ ಸಾರಲಾಯಿತು.

ಬೆಂಗಳೂರಲ್ಲಿ ನಿರ್ಮಿಸಬೇಕೆಂದಿರುವ ಆರ್ಯ ವಿದ್ಯಾಶಾಲೆಯ ಹೊಸ ಕಟ್ಟಡದ ಶಂಕು ಸ್ಥಾಪನೆಯ ಸಮಾರಂಭವನ್ನು ಗಾಂಧೀನಗರದಲ್ಲಿ ಧರ್ಮಪ್ರಕಾಶ ದೇವರಾವ ಶಿವರಾಮರು ತಾ. ೨೪ ಮುಂಜಾನೆ ನೆರವೇರಿಸಿದರು.



ತಾ. ೨೭-೩-೪೬

ಮುಂಬಯಿ ಶೇರಪೇಟೆ

ಮುಂಬಯಿ ಶೇರ ಪೇಟೆಯಲ್ಲಿ ಆಚೆಯವಾರ ಬೆಲೆಗಳು ಒಮ್ಮಿಂದೊಮ್ಮೆ ಮೇಲೆ ನೆಗೆದವುಗಳು ಅದೇ ಮಟ್ಟದಲ್ಲಿ ಬಹಳ ಕಾಲ ನಿಲ್ಲಲಿಲ್ಲ. ಮಾರಾಟ ಹೆಚ್ಚಿದ್ದರಿಂದ ಪಾಲುಗಳ ಬೆಲೆ ಇಳಿಯುತ್ತ ಹೋಯಿತು. ೩೦೦೦ ದ ರೇಖೆಯನ್ನು ಮೀರಿ ಆಚೆಗೆ ಹೋಗಿದ್ದ ಟಾಟಾ ಸ್ಟೀಲ ಡೆಫರ್ಡ ಪಾಲುಗಳು ಒಂದೆರಡು ಹಾರಿಕೆಯಲ್ಲಿಯೆ ೨೯೪೦-೦-೦ ಕ್ಕೆ ಇಳಿದು ಮುಂದೆ ೨೯೭೧-೪-೦ ಗೇರಿದರೂ ಪುನಃ ಪ್ರತಿಫಲಿಸಿ ೨೯೬೨-೮-೦ ಗಿಳಿದವು. ಡಾಯಿಂಗ ಪಾಲುಗಳು ೨೩೭೭-೮-೦ ಕ್ಕಿಳಿದರೂ ಮುಂದೆ ೨೩೯೭-೮-೦ ಸುಧಾರಿಸಿದವು. ಸ್ವದೇಶಿ ಗಿರಣಿ ಪಾಲು ೭೧೩-೦-೦ ರಿಂದ ೭೩೧-೮-೦ ಕ್ಕೇರಿ ೭೨೮-೦-೦ ಕ್ಕಿಳಿಯಿತು. ಗೋಕಾಕ ೩೫೦ ರಿಂದ ೩೫೨-೦-೦ ಕ್ಕೆ ಸುಧಾರಿಸಿತು. ಸೆಂಚೂರಿ ೧೦೩೫-೦-೦ ರಿಂದ ೧೦೩೬-೪-೦ಕ್ಕೆ, ಸೆಂಟ್ರಲ ಇಂಡಿಯಾ ೪೬೫-೦-೦ ರಿಂದ ೪೮೫-೦-೦ ಕ್ಕೆ ಏರಿದವು. ಬೇಲಾಪುರ ೨೬೫-೦-೦ ರಿಂದ ೨೬೬-೦-೦ ಕ್ಕೇರಿದವು. ಜವಳಿ ಗಿರಣಿಗಳಿಗೆ ಒಟ್ಟಿನ ಮೇಲೆ ಬೆಂಬಲ ಹೆಚ್ಚಾಗಿತ್ತು. ಅಸೋಸಿಯೇಟೆಡ ಸಿಮೆಂಟ್ಸ ೨೫೧--೦--೦ ರಿಂದ ೨೫೨--೪--೦ ಕ್ಕೇರಿತು. ಸೆಂಟ್ರಲ್ ಬ್ಯಾಂಕ ೧೨೧--೮--೦ ರ ಸುತ್ತ ಸುಳಿಯುತ್ತಿದ್ದರೆ ಇಂಪೀರಿಯಲ ಎಫ್. ಸಿ. ೨೪೬೫-೦-೦ ರಿಂದ ೨೪೫೫--೦--೦ ಕ್ಕಿಳಿಯಿತು. ರಿಜರ್ವ ಬ್ಯಾಂಕ್ ೧೫೬-೮-೦ ರಿಂದ ೧೫೭-೦-೦ ರ ವರೆಗಿದೆ.

ಜಿ. ಪಿ. ನೋಟುಗಳು ೧೦೨--೧೩--೦ ರಿಂದ ೧೦೨--೦--೦ ಕ್ಕಿಳಿದು ಹೋದರೆ ೩॥% (೧೯೪೫-೫೦) ರ ಸಾಲ ೧೦೩-೭-೦ ರಲ್ಲಿ ಯಥಾಸ್ಥಿತಿ.

ಚಿನ್ನ ಬೆಳ್ಳಿ

ಚಿನ್ನದ ಪೇಟೆಯಲ್ಲಿದ್ದ ಮಂದೀ ಪ್ರವೃತ್ತಿ ತೊಲಗಿ ಹೋಗಿ ಅದಕ್ಕೆ ಹೆಚ್ಚು ಹೆಚ್ಚು ಬೆಂಬಲ ದೊರಕತೊಡಗಿದೆ. ಈ ವಾರ ಚಿನ್ನದ ಬೆಲೆ ೯೭-೦-೦ ರ ವರೆಗೆ ಎಂದರೆ ಈ ವರೆಗಿನ ಪರಮಾವಧಿ ದರವನ್ನು ಮುಟ್ಟಿತು. ೯೬-೮-೦ ರಲ್ಲಿ ಅದು ಬುಧವಾರ ಕೊನೆಗಂಡಿತು. ವಾಯಿದೆ ವ್ಯಾಪಾರ ನಿಂತು ಹೋಗಿದೆ. ಬೆಳ್ಳಿ ೧೫೭-೦-೦ ರ ವರೆಗೇರಿ ೧೫೬-೮-೦ ಕ್ಕಿಳಿದಿದೆ.

ಅರಳೆ

ಕಳೆದ ವಾರಾಂತ್ಯದಲ್ಲಿ ಮೇ ವಾಯಿದೆ ಅರಳೆ ೪೬೨-೦--೦ ರಲ್ಲಿದ್ದುದು ಈ ವಾರ ೪೬೪-೮-೦ ವರೆಗೂ ಹೋದರೂ ಮುಂದೆ ಪುನಃ ೪೬೩-೧೨-೦ ಕ್ಕೆ ಇಳಿಯಿತು. ಜುಲೈ ೪೭೨-೦-೦ ಸೆಪ್ಟೆಂಬರ ೪೬೭--೧೩-೦ ರಲ್ಲಿವೆ.

ಎಣ್ಣೆಕಾಳು

ಶೇಂಗಾ	ರೂ.	೧೮೯--೦--೦
ಅಗಸಿ	,,	೨೪-೪--೦
ಅಗಸಿಎಣ್ಣೆ	,,	೧೩--೮--೦

ಸಾಂಗಲಿ ಪೇಟೆ

ಬೆಲ್ಲ ಬಂಗಾಲಿಮಣ	ರೂ.	೧೪--೧೬
ಅರಿಸಿಣ ಹೇರು	,,	೬೬--೭೮
ಮೆಣಸಿನಕಾಯಿ	,,	೧೫೦--೧೯೦
ಶೇಂಗಾ (ಖಂಡಿ)	,,	೯೨--೯೩
ದೇಶಿ ತಂಬಾಕು (ಹೇರು)		೧೦೦--೨೧೫

ಹುಬ್ಬಳ್ಳಿ

ಹತ್ತಿಕಾಳಿನ ವಿಷಯದಲ್ಲಿ ಸರಕಾರದವರು ಮಾಡಿದ ಕಾಯದೆಯನ್ನು ನಿಷೇಧಿಸಲು ಹುಬ್ಬಳ್ಳಿ ಅರಳೆ ವ್ಯಾಪಾರಸ್ಥರು ಸಂಪು ಹೂಡಿರುವದರಿಂದ ಈಗ ೩ ವಾರಗಳಿಂದ ಪೇಟೆ ಮುಚ್ಚಿದೆ.

ಮುಂಬಯಿ ಮುಂಗಡಪತ್ರಿಕೆ

(೪ ನೇ ಪುಟದಿಂದ ಮುಂದರಿದುದು)

ವರ ಯೋಜನೆಯನ್ನು ವಿಶ್ವವಿದ್ಯಾಲಯವರು ಒಪ್ಪಿದ ನಂತರ ಹಾಗೂ ವೆಚ್ಚದ ವಿವರಗಳಿಗೆ ಸರಕಾರದವರು ಸಮ್ಮತಿ ಕೊಟ್ಟ ನಂತರ ಈ ಹಣವನ್ನು ಕೊಡಲಾಗುವದು.

ಯು. ಈ. ಎಸ್. ಶಾಲೆಯಲ್ಲಿ ಒಕ್ಕಲತನದ ಅರ್ಥಶಾಸ್ತ್ರ ಅಭ್ಯಾಸಕ್ಕೆ ಹಣ ಸಹಾಯ ಮಾಡಲಾಗುವದು.

ಸರಕಾರೇತರ ಮಾಧ್ಯಮಿಕ ಶಾಲೆಗಳಿಗೆ ಶಾರೀರಿಕ ಶಿಕ್ಷಣದ ಬಗ್ಗೆ ಹೊಸ ವರ್ಷದಲ್ಲಿ ೨೩೦೦೦ ರೂ. ಹೆಚ್ಚಿಗೆ ಕೊಡಲಾಗುವದು. ಅಲ್ಲದೆ ತುಟ್ಟಿ ಭತ್ತೆಗಾಗಿ ಕೊಡುತ್ತಿರುವ ಸಹಾಯವನ್ನೂ ಹೆಚ್ಚಿಸಲಾಗಿದೆ.

ಪ್ರಾಥಮಿಕ ಶಿಕ್ಷಕರ ಸಂಬಳ

ಪ್ರಾಥಮಿಕ ಶಿಕ್ಷಕರ ವಿಷಯದಲ್ಲಿ ಸಾಧ್ಯವಿದ್ದಷ್ಟು ಕೊಡಮಾಡಿದೆ. ೧೯೪೬ ಮಾರ್ಚ ೧ ರಿಂದ ಪ್ರಾರಂಭಿಕ ಸಂಬಳವನ್ನು ೧೫ ರೂ. ಯಿಂದ ೨೦ ಕ್ಕೆ ಏರಿಸಿದ್ದರಿಂದ ೨೭೨೦೦೦ ರೂ. ಹೆಚ್ಚು ವೆಚ್ಚ ಬರುತ್ತದೆ. ನಗರಗಳಲ್ಲಿ ಹಾಗೂ ಧಾರಣಗಳು ಅತಿಶಯವಾಗಿ ಬೆಳೆದ ಇನ್ನಿತರ ಸ್ಥಳಗಳಲ್ಲಿ ೫ ರೂ. ಸ್ಥಾನಿಕ ಭತ್ತೆ ಕೊಡಲು ನಿರ್ಣಯಿಸಲಾಗಿದೆ. ಇದರ ಹೊರತಾಗಿ ಸರಕಾರಿ ಪ್ರಮಾಣದಂತೆ ಪ್ರಾಥಮಿಕ ಶಿಕ್ಷಕರಿಗೂ ತುಟ್ಟಿಭತ್ತೆ ಕೊಡಲು ತಿಳಿಸಲಾಗಿದೆ. ಸಾಕ್ಷರತಾ ಪ್ರಸಾರ ಯೋಜನೆಯನ್ವಯ ಪ್ರಾರಂಭಿಸಿದ ಶಾಲೆಗಳಿಗೆ ಕೊಡುತ್ತಿರುವ ಸಹಾಯವನ್ನೂ ಹೆಚ್ಚಿಸಲು ನಿರ್ಧರಿಸಿ ಅದಕ್ಕಾಗಿ ೨೫೭೦೦೦ ರೂ. ತೆಗೆದಿಡಲಾಗಿದೆ. ಒತ್ತಾಯದ ಪ್ರಾಥಮಿಕ ಶಿಕ್ಷಣವನ್ನು ಕೈಕೊಂಡ ಸ್ಥಾನಿಕ ಸಂಸ್ಥೆಗಳಿಗೆ ಸಹಾಯ ಮಾಡಲು ೨೭೮೦೦೦ ರೂ. ಮೀಸಲಾಗಿಟ್ಟಿದೆ.

ಟ್ರೇನಿಂಗ ಕಾಲೇಜ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಹರಿಜನ ವಿದ್ಯಾರ್ಥಿಗಳಿಗೆ ಕೊಡಲಾಗುತ್ತಿದ್ದ ಶಿಷ್ಯವೇತನಗಳನ್ನು ನೂರಕ್ಕೆ ೫೦ ರಷ್ಟು ಹೆಚ್ಚಿಸಲಾಗಿದೆ. ಕಾಲೇಜದಲ್ಲಿ ಕೊಡುತ್ತಿರುವ ಶಿಷ್ಯವೇತನಗಳನ್ನು ೨೫ ರೂಪಾಯಿಗೆ ಏರಿಸಲಾಗಿವೆ.

ಸಾರ್ವಜನಿಕ ಆರೋಗ್ಯ

ಈ ವಿಷಯದಲ್ಲಿ ಒಂದು ಮಹತ್ವದ ಹೊಸ ಯೋಜನೆ ಕೈಕೊಂಡಿರುತ್ತದೆ. ಡಿ. ಡಿ. ಟಿ. ಯಿಂದ ಚಳಿಜ್ವರ ಕ್ರಿಮಿಗಳನ್ನು ನಾಶಮಾಡುವದೇ ಅದು. ಸದ್ಯಕ್ಕೆ ಇದನ್ನು ಕಾರವಾರ ಜಿಲ್ಹೆಯಲ್ಲಿ ಪ್ರಾರಂಭಿಸಲಿದ್ದು ಇದಕ್ಕೆ ೩೮೪೦೦೦ ರೂ. ತೆಗೆದಿಡಲಾಗಿದೆ.

ಒಕ್ಕಲತನ ಮತ್ತು ಪಶುಸಂಗೋಪನ

ಈ ಖಾತೆಗಳಿಗೆ ಹೊಸ ವರ್ಷದಲ್ಲಿ ೨೨೬ ಲಕ್ಷ ರೂ. ಖರ್ಚು ಮಾಡಲಾಗುವದು. ಆಹಾರ ಸಂಪತ್ತಿಯನ್ನು ಬೆಳೆಸುವದು ಅವಶ್ಯವಿರುವದರಿಂದ ಉತ್ತಮ ಬೀಜದ ಪೂರೈಕೆ ಕ್ರಮವನ್ನು ಈ ವರ್ಷವೂ ಮುಂದರಿಸಲಾಗುವದು. ಇದಕ್ಕೆ ೩೮೦೦೦೦ ರೂ. ಖರ್ಚು ಬರುವದು. ಇದರಂತೆ ಪುಣೆಯ ಬಟಾಟಿ ಬೆಳೆಗಾರರಿಗೆ ಗೊಬ್ಬರ ಪೂರೈಸಲಾಗುವದು. ಈ ಗೊಬ್ಬರದಿಂದ ಹುಟ್ಟುವಳಿ ನೂರಕ್ಕೆ ೨೫ ರಷ್ಟು ಹೆಚ್ಚಬಹುದು.

ದುರ್ಭಿಕ್ಷ ಪ್ರದೇಶಗಳಲ್ಲಿ ಹೊಸ ಬಾವಿ ಮತ್ತು ಕೆರೆಗಳನ್ನು ತೋಡಿಸಲು ಹಾಗೂ ಹಳೆಯವುಗಳನ್ನು ಸುಧಾರಿಸಲು ೪೫೧೦೦೦ ರೂ. ಮಂಜೂರ ಮಾಡಿದೆ.

ದಕ್ಷಿಣ ಕನ್ನಡ

ಮಂಗಳೂರು ನಗರ ಸಭೆಗೂ ದ. ಕನ್ನಡ ಜಿಲ್ಲಾ ಕಲೆಕ್ಟರರಿಗೂ ತಿಕ್ಕಾಟವುಂಟಾಗಿದೆ. ಮಂಗಳೂರು ಸಾರ್ವಜನಿಕ ಬಯಲಿನಲ್ಲಿ ಆಟಗಳನ್ನು ನಡೆಸಲು ಬ್ರಾಡ್ವೆ ಸರ್ಕಸ್ಸಿಗೆ ನಗರ ಸಭೆಯವರು ಪರವಾನಗಿ ಕೊಟ್ಟಿದ್ದರು. ಆದರೆ ಸಾರ್ವಜನಿಕ ಬಯಲನ್ನು ಆಟಗಳಿಗಾಗಿ ಉಪಯೋಗಿಸಲು ಕೊಟ್ಟದ್ದು ಸರಕಾರದವರು ಆ ಬಯಲನ್ನು [illegible] ಸಭೆಗೆ ಒಪ್ಪಿಸಿಕೊಟ್ಟಾಗ ಹಾಕಿದ್ದ ಕರಾರುಗಳಿಗೆ ವಿರುದ್ಧವಾದುದೆಂದು ಜಿಲ್ಲಾ ಕಲೆಕ್ಟರರು ಪರವಾನಗಿಯನ್ನು ರದ್ದುಗೊಳಿಸಿ ಸರ್ಕಸ್ಸಿನ ಡೇರೆಯನ್ನು ಬಲವಂತದಿಂದ ಕಿತ್ತಿಸಿದರು. ತಾ. [illegible] ಕ್ಕೆ ಸೇರಿದ ನಗರ ಸಭೆಯ ಅಧಿವೇಶನದಲ್ಲಿ ಕಲೆಕ್ಟರರ ವರ್ತನೆಯನ್ನು ಖಂಡಿಸುವ ಗೊತ್ತುವಳಿಯಾಯಿತು. ಬಯಲನ್ನು ಆಟಗಳಿಗಾಗಿ ಉಪಯೋಗಿಸಿದ್ದು ಇದೇ ಮೊದಲಲ್ಲವೆಂದು ನಗರ ಸಭೆಯ ವಾದ. ಈ ವಿಷಯ ಸರಕಾರಕ್ಕೆ ದೂರುಕೊಡಬೇಕೆಂದು ಅದನ್ನು ಸಿದ್ಧಗೊಳಿಸಲು ಒಂದು ಉಪಸಮಿತಿ ನೇಮಿಸಲ್ಪಟ್ಟಿತು.

ಬೇರೆ ಕೆಲವು ಪ್ರದೇಶಗಳಲ್ಲಿ ನೀರಾವರಿಗೆ ಸಹಾಯ ಮಾಡುವ ದೃಷ್ಟಿಯಿಂದ ಕೆರೆ ಮತ್ತು ಬಾವಿಗಳನ್ನು ಸುಧಾರಿಸಲು ೨೬೭೫೦೦೦ ರೂ. ಕೊಡಬೇಕೆಂದು ಮಾಡಿದೆ.

"ಅಧಿಕ ಆಹಾರ ಬೆಳೆಯಿರಿ"

'ಅಧಿಕ ಆಹಾರ ಬೆಳೆಯಿರಿ' ಪ್ರಚಾರಕ್ಕೆ ಸಹಾಯವೆಂದು ಭತ್ತ ಬೆಳೆಯುವ ಕೊಂಕಣ ಪ್ರದೇಶದಲ್ಲಿ ಎಲುಬಿನ ಗೊಬ್ಬರ ಪೂರೈಸುವ ಯೋಜನೆ ಮಾಡಿದೆ.

ಪ್ರಾಂತದ ದಕ್ಷಿಣ ಜಿಲ್ಹೆಗಳಲ್ಲಿ ಬರಗಾಲವುಂಟಾಗಿರುವದರಿಂದ ಕೆರೆ ಮತ್ತು ಬಾವಿಗಳ ಸಹಾಯದಿಂದ ಬೇಸಿಗೆಯ ಬೆಳೆ (ಆಹಾರ) ಬೆಳೆಯುವರಿಗೆ ಎಕರೆಗೆ ೧೫ ರೂ. ಸಹಾಯ ಕೊಡಲಾಗುವದು.

ಕರ್ನಾಟಕದಲ್ಲಿಯ ಸುಣಬುರ್ಲಿ ಭೂಮಿಯನ್ನು ಸಾಗು ಮಾಡಿಸುವ ಕ್ರಮದ ಶೋಧನೆಗೆ ೫೩೦೦೦ ರೂ. ಕಾದಿಟ್ಟಿದೆ.

ಉದ್ಯೋಗಗಳಿಗೆ ಸಹಾಯ

ಇಲೆಕ್ಟ್ರಿಕ್ ಗ್ರಿಡ್ ಪದ್ಧತಿಯಲ್ಲಿ ಕೆಲಸ ಮಾಡಲಿಕ್ಕೆ ವಿದ್ಯಾರ್ಥಿಗಳನ್ನು ತರಬೇತು ಮಾಡಲು ವ್ಹಿಕ್ಟೋರಿಯಾ ಜ್ಯುಬಿಲಿ ಸಂಸ್ಥೆಗೆ ೭೯೧೦೦೦ ರೂ. ಕೊಡಲಾಗುವದು.

ಪರದೇಶಗಳಿಗೆ ಯಂತ್ರ ವಿದ್ಯೆ ಕಲಿಯಲು ಹೋಗುವ ವಿದ್ಯಾರ್ಥಿಗಳಿಗೆ ೪೦ ಶಿಷ್ಯವೃತ್ತಿ ಕೊಡಬೇಕೆಂದು ಮಾಡಿದ್ದು ಅದಕ್ಕೆ ೧ ಲಕ್ಷ ರೂ. ತಗೆದಿಟ್ಟಿದೆ.

ವಿಜಾಪುರದಲ್ಲಿ ಔದ್ಯೋಗಿಕ ಶಾಲೆ

ವಿಜಾಪುರದಲ್ಲಿ ಔದ್ಯೋಗಿಕ ಶಾಲೆ ಸ್ಥಾಪಿಸುವದಕ್ಕೆ ೩೪೦೦೦ ರೂ. ತಗೆದಿಡಲಾಗಿದೆ.

ಗ್ರಿಡ್ ವಿದ್ಯುಚ್ಛಕ್ತಿ ಯೋಜನೆ

ಗ್ರಿಡ್ ವಿದ್ಯುಚ್ಛಕ್ತಿ ಪೂರೈಕೆ ಯೋಜನೆಯನ್ನು ಯುದ್ಧೋತ್ತರ ಪುನರ್ರಚನೆಗಾಗಿ ಕೈಕೊಳ್ಳಲಾಗುವದು. ಮುಂಗಡ ಪತ್ರಿಕೆ ಸಿದ್ಧಪಡಿಸಿದ ನಂತರ ಈ ಯೋಜನೆಗೆ ಮನ್ನಣೆ ದೊರತಿದೆ. ಇದಕ್ಕೆ ಮೂಲಧನ ೪ ಕೋಟಿ ರೂ. ಬೇಕು. ಈಶಾನ್ಯ ಗುಜರಾತದಲ್ಲಿ ಮೊದಲು ಇದನ್ನು ಕೈಕೊಳ್ಳಲಾಗುವದು. ರತ್ನಾಗಿರಿ, ಸಾತಾರಾ ಮತ್ತು ಸುರತ ಜಿಲ್ಹೆಗಳಲ್ಲಿ ವಿದ್ಯುಚ್ಛಕ್ತಿಯ ದೀಪಗಳನ್ನು ಪೂರೈಸುವ ಯೋಜನೆ ಮಾಡಿರುತ್ತದೆ.

ಬಿಕ್ಷುಕರ ಸಮಸ್ಯೆ

ಪ್ರಾಂತದಲ್ಲಿಯ ಬಿಕ್ಷುಕರ ಸಮಸ್ಯೆಯನ್ನು ನಿವಾರಿಸಬೇಕೆಂಬ ಯೋಚನೆ ಬಹಳ ದಿನಗಳಿಂದಲೂ ಇತ್ತು. ಈ ಬಗ್ಗೆ ಒಂದು ಕಾಯಿದೆ ಮಾಡಿದೆ. ಪೂರ್ವ ಸಿದ್ಧತೆಗಾಗಿ ೨೩೬೦೦೦ ರೂ. ಖರ್ಚ ಮಾಡಿದ್ದು ಹೊಸ ವರ್ಷದಲ್ಲಿ ೩೮೭೦೦೦ ರೂ. ತೆಗೆದಿಡಲಾಗಿದೆ.

ವಿವರಣೆ ಕೊಡುವದಾದ ನಂತರ, ಪ್ರಾಥಮಿಕ ಶಿಕ್ಷಕರಿಗೆ ೨೦ ರೂ. ಸಂಬಳ ಸಾಲುವದೇ ಎಂದು ವಿಚಾರಿಸಿದ್ದಕ್ಕೆ ಭಾವೀ ಜನಾದರಣೀಯ ಸರಕಾರ ಅದನ್ನು ವಿಚಾರಿಸುವದು ಎಂದು ಗವ್ಹರ್ನರರು ಉತ್ತರ ಕೊಟ್ಟರು.

ಪ್ರಶ್ನೆ—ಪೆಟ್ಟಿಗೆ

ಪ್ರಶ್ನೆ—ಮೀನ ತಿನ್ನುವವರಿಗೆ ಅವನ್ನು ಒದಗಿಸಿ ಕೊಡಬೇಕೆಂದು ನೀವು ಪ್ರತಿಪಾದಿಸುತ್ತಿರುವಿರಿ ಇದರಿಂದ ಮೀನಭಕ್ಷಕರು ಮತ್ತು ಮೀನ ಒದಗಿಸುವವರು ಇವರಿಬ್ಬರೂ ಹಿಂಸಾಚಾರಿಗಳಾಗುವುದಿಲ್ಲವೆ?

ಉತ್ತರ:- ಇಬ್ಬರೂ ಹಿಂಸಾಚರಣೆ ಮಾಡುವರು. ಸಸ್ಯಾಹಾರಿಗಳೂ ಅದನ್ನೆ ಮಾಡುವರು. ಜಗತ್ತೆಲ್ಲ ಹಿಂಸಾಮಯ. ಪ್ರಾಣಿಮಾತ್ರರಲ್ಲೆಲ್ಲ ಇಂಥ ಹಿಂಸಾಚರಣೆ ಸ್ವಭಾವತಃ ಸಿದ್ಧ. ಅಂತೆಯೆ ಮನುಷ್ಯರಲ್ಲಿಯೂ ಅದು ಇದೆ. ಈ ಬಗೆಯ ಪರಿಸ್ಥಿತಿಯಲ್ಲಿ ಇಷ್ಟೆಲ್ಲ ಇದ್ದರೂ ಅಹಿಂಸೆ ನಮ್ಮ ಕರ್ತವ್ಯವೆಂದು ನಾವು ಆಚರಿಸಬೇಕಾಗಿದೆ. ಇದನ್ನು ಹೇಗೆ ಆಚರಿಸಬೇಕೆಂಬ ಬಗೆಗೆ ನಾನು ನೂರಾರು ಸಲ ಹೇಳಿರುವೆನು. ಮೀನ ತಿನ್ನಬೇಡಿರೆಂದು ಎರಡನೆಯವನನ್ನು ಒತ್ತಾಯಪಡಿಸುವವನು ಮೀನಭಕ್ಷಕನಿಗಿಂತ ಹೆಚ್ಚು ಹಿಂಸಾಚಾರಿ. ಮೀನಗಾರ, ಮೀನ ಮಾರುವವ ಮತ್ತು ಮೀನಭಕ್ಷಕ ತಮ್ಮ ಕೃತಿಯಲ್ಲಿನ ಹಿಂಸೆಯನ್ನು ಕದಾಚಿತ್ ತಿಳಿದಿರಲಿಕ್ಕಿಲ್ಲ. ಅದು ಗೊತ್ತಿದ್ದರೂ ಅನಿವಾರ್ಯವೆಂದು ಅವರು ಭಾವಿಸಬಹುದು. ಆದರೆ ಮೀನ ತಿನ್ನಬೇಡಿರೆಂದು ಒತ್ತಾಯ ಮಾಡುವವನು ಪ್ರತ್ಯಕ್ಷ ಹಿಂಸೆ ಮಾಡಿದ ಅಪರಾಧಿಯು. ಒತ್ತಾಯವು ಅಮಾನುಷವು. ತಮ್ಮ ತಮ್ಮಲ್ಲಿ ಬಡಿದಾಡುವವರು, ಧನ ಸಂಪಾದನೆಗಾಗಿ ಏನು ಬೇಕಾದ್ದನ್ನು ಮಾಡುವವರು, ಸುಲಿಗೆಗಾರರು ಇಲ್ಲವೆ ಒತ್ತಾಯದಿಂದ ಮಾನವೀಸೇವೆ ಸ್ವೀಕರಿಸುವವರು, ಪ್ರಾಣಿಗಳ ಮೇಲೆ ಹೆಚ್ಚು ಭಾರಹಾಕಿ ಅವುಗಳನ್ನು ಹಿಂಸಿಸುವವರು, ಇವರೆಲ್ಲ ತಿಳಿದೇ ಇಂಥ ಹಿಂಸೆ ಮಾಡುವರು. ಸುಲಭವಾಗಿ ಇದನ್ನೆಲ್ಲ ನಿಲ್ಲಿಸಬಹುದು. ಮೀನಭಕ್ಷಕನಿಗೆ ಮೀನ ತಿನ್ನಲು ಅಪ್ಪಣೆ ಕೊಡುವುದು ಹಿಂಸಾಚರಣೆಯೆಂದು ನನಗನಿಸುವದಿಲ್ಲ ಅದು ನನ್ನ ಧರ್ಮವೆಂದು ನಾನು ತಿಳಿಯುವೆ. ಅಹಿಂಸೆಯಂತೂ ಪರಮಧರ್ಮ. ಅದನ್ನು ಸಂಪೂರ್ಣವಾಗಿ ಆಚರಿಸುವದು ನಮಗೆ ಶಕ್ಯವಿಲ್ಲದಿದ್ದರೆ ಅದರ ತಿರುಳನ್ನು ತಿಳಿದುಕೊಳ್ಳಲು ನಾವು ಪ್ರಯತ್ನಿಸಲಿಕ್ಕೆಬೇಕು ಮತ್ತು ಶಕ್ಯವಿದ್ದಮಟ್ಟಿಗೆ ಹಿಂಸಾಚರಣೆಯಿಂದ ಪರಾವೃತ್ತವಾಗಲಿಕ್ಕೆಬೇಕು.

ಪ್ರಶ್ನೆ- ಪಾಲಿಶ್ ಮಾಡಿದ ಅಕ್ಕಿ ತಿನ್ನಬೇಡಿರೆಂದು ನೀವು ಹೇಳುತ್ತಿರುವಿರಿ. ಆದರೆ ಈ ರೋಗ ಬಹಳ ಹಬ್ಬಿದೆಂದು ನನಗೆ ಅಂಜಿಕೆ. ಪಾಲಿಶ್ ಮಾಡಿದ ಅಕ್ಕಿಯನ್ನು ಮತ್ತೆ ಮತ್ತೆ ತೊಳೆದು ನೀರು ಚಲ್ಲುತ್ತಿರುವರು. ಅನಂತರ ಅದನ್ನು ಬೇಯಿಸುತ್ತಾರೆ. ಆ ನೀರನ್ನೂ ಮತ್ತೆ ಚಲ್ಲುತ್ತಾರೆ. ಹೀಗೆ ಮಾಡಿ ಧಾನ್ಯದಲ್ಲಿಯ ಆಹಾರ ಸತ್ವವನ್ನೆಲ್ಲ ಕಳೆದುಬಿಡುತ್ತಾರೆ. ಹೀಗೆ ಕಾಳುಗಳನ್ನೆಲ್ಲ ಪ್ರತ್ಯೇಕ ಮಾಡಿದ ಅನ್ನವು ನೋಡಲಿಕ್ಕೆ ಚಂದ ಕಾಣುವದಲ್ಲದೆ ನಾಲಿಗೆಗೂ ರುಚಿಕರ. ವಿದ್ಯಾರ್ಥಿಭವನಗಳಲ್ಲಿಯೂ ಇದೇ ರೂಢಿ. ಇದರಿಂದ ನಾವು ಹೇಗೆ ಮುಕ್ತರಾಗಬೇಕು?

ಉತ್ತರ- ಮೇಲೆ ವಿವರಿಸಿದ ತಪ್ಪು ಪದ್ಧತಿಯೆಲ್ಲ ನನಗೆ ಗೊತ್ತಿದೆ. ಅತಿ ದರಿದ್ರ ದೇಶದಲ್ಲಿ ನಾವು ಇರುತ್ತಿರುವೆವು; ಹೀಗಿದ್ದರೂ ಅಪಾಯಕಾರಕವಾದ ಇಂಥ ಚಟಗಳನ್ನು ಬಿಡಲು ನಾವು ಅಸಮರ್ಥರಿರುವೆವು. ಇಲ್ಲವೆ ಸಿದ್ಧರಿರುವುದಿಲ್ಲ. ಪ್ರತಿಯೊಬ್ಬ ತನ್ನ ಸ್ವಾರ್ಥವನ್ನೆ ನೋಡುತ್ತಾನೆ. ನೆರೆಹೊರೆಯವನು ನಮ್ಮ ಆಪ್ತಬಂಧು ಎಂದು ತಿಳಿಯದೆ ಹೊರಗಿನವ ಎಂದು ನಾವು ತಿಳಿಯುತ್ತೇವೆ. ಅವರು ಬದುಕಿದ್ದರೇನು, ಸತ್ತರೇನು? ಸತ್ತರೆ ಅವರದೇ ತಪ್ಪು. ಬದುಕಿದರೆ ಅವರ ಪುಣ್ಯ. ಬದುಕುವದು ಸಾಯುವದು ನಮ್ಮ ಕೈಯಲ್ಲಿಲ್ಲ. ಆದುದರಿಂದ ತಿಂದುಂಡು ಕುಡಿದು ಸುಖವಾಗಿರೋಣ. ಇದರಲ್ಲಿಯೇ ನಮ್ಮ ಪುಣ್ಯ.

ಧರ್ಮದ ಸ್ವರೂಪವಿಷ್ಟೊಂದು ವಿಕೃತವಾಗಿರುವಾಗ ನನ್ನ ಕರ್ತವ್ಯವಾವುದೆಂಬುದನ್ನು ತಿಳಿದುಕೊಂಡು ನಡೆಯಬೇಕಾಗುವದು. ಇಂದಿಲ್ಲ ನಾಳೆಯಾದರೂ ಸತ್ಯವನ್ನೆ ಆಚರಿಸಬೇಕಾಗುವದೆಂಬುದನ್ನು ಮಾತ್ರ ನಂಬಬೇಕು. ಅಲ್ಲಿಯ ವರೆಗೆ ಪ್ರಸಂಗ ಬಂದಾಗೆಲ್ಲ ಸತ್ಯವನ್ನೆ ಸಾರಿ ಸಾರಿ ಹೇಳುವೆ.

ಮುಂಬಯಿ — ಮೋ. ಕ. ಗಾಂಧಿ
೧೧-೩-೪೬. (ಹರಿಜನಬಂಧುವಿನಿಂದ)

* * *

ಪ್ರಶ್ನೆ- ಸ್ವಾತಂತ್ರ್ಯ ಸಮೀಪಿಸಿದಂತೆ ಕಾಣುತ್ತಿದೆಂದು ನೀವು ಸಾರಿರುವಿರಿ. ಆದರೆ ಇದರ ಅರ್ಥ ನನಗೆ ಹೊಳೆಯಲೊಲ್ಲದು. ಪಾಕಿಸ್ತಾನ ಸಮಸ್ಯೆ ನಮಗೊಂದು ಕಾಲ್ತೊಡಕು.

ಉತ್ತರ- ಆಸೆಗೆ ಅಸಾಧ್ಯ ಕಾಲ್ತೊಡಕುಗಳಾವುವೂ ಇಲ್ಲ. ಕೆಲವು ವಾರಗಳಲ್ಲಿ ಅಲ್ಲದಿದ್ದರೂ ಕೆಲ ತಿಂಗಳಲ್ಲಿಯೆ ಇದಕ್ಕೆ ಉತ್ತರ ದೊರೆಯುತ್ತಿರುವಾಗ ಪ್ರಶ್ನೆ ಕೇಳುವುದೇಕೆ? ಈ ಸಲ ನಾನೊಬ್ಬನೆ ಆಶಾವಾದಿಯಲ್ಲ.

ಮುಂಬಯಿ — ಮೋ. ಕ. ಗಾಂಧಿ
೧೨-೩-೪೬

ಹರಿಜನರಿಗೇಕೆ?

ಪ್ರಶ್ನೆ:- ಹರಿಜನರಿಗಾಗಿ ಸರಕಾರದವರು ಹೆಚ್ಚು ಸೌಕರ್ಯ ಕೊಡುತ್ತಿರುವರು. ಅವರ ಶಿಕ್ಷಣ, ನೋಕರಿ ಮತ್ತು ಪ್ರಗತಿಗಾಗಿ ವ್ಯಾಪಕವಾದ ರೀತಿಯಲ್ಲಿ ಸೌಕರ್ಯಗಳನ್ನು ಕೊಡಲಾಗುತ್ತದೆ. ಅಂದಬಳಿಕ ಅವರ ಸಲುವಾಗಿ ನೀವು ಮತ್ತೆ ನಮ್ಮ ಸಹಾಯವನ್ನೇಕೆ ಕೇಳುತ್ತಿರುವಿರಿ? ಸವರ್ಣರಲ್ಲಿ ಅವರಷ್ಟೇ ಅದೇಕೆ ಅವರಿಗಿಂತ ಹೆಚ್ಚು ದರಿದ್ರ ಜನರು ಇರುವರು. ಅವರ ಉನ್ನತಿಗಾಗಿ ನೀವೇಕೆ ಕಾರ್ಯಮಾಡುವುದಿಲ್ಲ?

ಉತ್ತರ:— ಇದೊಳ್ಳೆ ವಿಚಿತ್ರ ಪ್ರಶ್ನೆ. ಹರಿಜನರಿಗಾಗಿ ಸರಕಾರದವರು ಸೌಕರ್ಯ ಕೊಡುತ್ತಿರುವುದೇನು ಆಶ್ಚರ್ಯಕರವಲ್ಲ. ಕಾರಣವೇನೆ ಇದ್ದರೂ ಆ ಸೌಕರ್ಯಗಳಿಂದ ಅವರಿಗೆ ಹಿತವಾಗುತ್ತಿದ್ದರೆ ಅದಕ್ಕಾಗಿ ದುಃಖಪಡಬೇಕಾಗಿಲ್ಲ. ಸರಕಾರದ ಎಲ್ಲ ಸೌಕರ್ಯಗಳಿಂದ ಹಿತವೇನೂ ಆಗುವುದಿಲ್ಲ. ಸ್ಪೃಶ್ಯರೆಂದೆನಿಸಿಕೊಳ್ಳುವವರಿಂದ ಅವರನ್ನು ಒಡೆಯುವದೇ ಇದರ ಉದ್ದೇಶವಿದ್ದಂತೆ ಕಾಣುತ್ತದೆ. ಸ್ಪೃಶ್ಯರೇ ಇದಕ್ಕೆ ಕಾರಣರು. ಅವರು ತಪ್ಪಾಗಿ ವರ್ತಿಸದಿದ್ದರೆ ಒಡೆಯಲು ಶಕ್ಯವಿರಲಿಲ್ಲ. ಕಾಂಗ್ರೆಸ್ಸು ಇಷ್ಟೆಲ್ಲ ವರುಷಗಳಿಂದ ಅವರ ಸಲುವಾಗಿ ಕೆಲಸ ಮಾಡುತ್ತಿದ್ದರೂ ಸವರ್ಣಹಿಂದುಗಳು ತಮ್ಮ ನಡೆವಳಿಕೆಗಳನ್ನು ತಿದ್ದಿಕೊಂಡಿರುವರೆ? ಬಹಳ ಮಟ್ಟಿಗೆ ಸುಧಾರಣೆಯಾಗಿದ್ದರೂ ಮೇಲಿನ ಪ್ರಶ್ನೆಗೆ 'ಇಲ್ಲ' ಎಂದೇ ಉತ್ತರ ಹೊರಡುತ್ತದೆ. ಪರಕೀಯ ಆಳಿಕೆಯನ್ನು ಕೊನೆಗೊಳಿಸಲು ಕಾಂಗ್ರೆಸ್ಸಿನ ವರ್ಚಸ್ಸು ಬಹಳ ಶಕ್ತಿಸಂಪನ್ನವಾಗಿದೆ. ಸಾಮಾಜಿಕ ವಿಷಯಗಳಲ್ಲಿ ಅದು ಕುಂಟಬೀಳುತ್ತದೆ. ಆದುದರಿಂದ ಪರಕೀಯ ಸರಕಾರದಗೂಡ ಅಪವಿತ್ರ ಸ್ಪರ್ಧೆಯಲ್ಲಿ ಬೀಳದೆ ಈ ಅಸ್ಪೃಶ್ಯತೆಯ ಭೂತ ಸಂಪೂರ್ಣ ಮಾಯವಾಗುವವರೆಗೆ ಹರಿಜನರ ಸಲುವಾಗಿ ಸುಧಾರಕರೆಲ್ಲ ತಮ್ಮ ಕರ್ತವ್ಯ ಮಾಡುವದವಶ್ಯವಾಗಿದೆ. ಬಡ ಸವರ್ಣರ ಹಿತನೋಡುವ ಜನ ಅನೇಕರಿರುವರು. ಅವರು ಕೈಕಾಲು ಅಲ್ಲಾಡಿಸದಿದ್ದರೂ ಕುಳಿತಲ್ಲಿಯೇ ಅವರಿಗೆಲ್ಲ ಸಿಕ್ಕುವಂತೆ ನೋಡಿಕೊಳ್ಳುವ ಜನವೂ ಇರುವರು.

ಮುಂಬಯಿ — ಮೋ. ಕ. ಗಾಂಧಿ
೧೬-೩-೪೬.

ದಶಾಂಶ ನಾಣ್ಯ ಪದ್ಧತಿ ಅದರಿಂದಾಗುವ ಹಾನಿ

ಹಿಂದುಸ್ತಾನ ಸರಕಾರದ ೧೯೩೫ ನೆಯ ಕಾಯದೆಯ ೧೫೪ ನೆಯ ಕಲಮಿನನ್ವಯ ಅಪ್ಪಣೆ ಪಡೆದು ೧೯೦೬ ನೆಯ ಇಸ್ವಿಯ ಹಿಂದೀ ನಾಣ್ಯ ಕಾಯದೆಯ ತಿದ್ದುಪಡಿ ಮಸೂದೆಯೊಂದು ಕೇಂದ್ರ ಶಾಸನ ಸಭೆಯಲ್ಲಿ ೧೮—೨—೧೯೪೬ ನೆಯ ದಿನ ಮಂಡಿಸಲಾಗಿದೆ. ಅದು ಪಾಸಾಗಿ ಕಾಯದೆಯಾದರೆ ಒಂದು ರೂಪಾಯಿಯ ಬೆಲೆ ೬೪ ದುಡ್ಡುಗಳಿಗೆ ಸರಿಯಾಗಿ ಉಳಿಯದೆ ೧೦೦ ಸೆಂಟುಗಳಿಗೆ ಸರಿಯಾಗುವುದು. ತತ್ಪರಿಣಾಮವಾಗಿ ಆವಶ್ಯಕ ಬದಲಾವಣೆಗಳೂ ಆಗುವವು. ಅದರ ಉದ್ದೇಶ ಹೀಗೆ ಹೇಳಲಾಗಿದೆ.

" ಯುದ್ಧಕಾಲದ ಅವಶ್ಯಕತೆಯಿಂದ ಹೊರಡಿಸಿದ ನಾಲ್ಕಾಣೆ ನಾಣ್ಯಗಳ ಕೆಳಗಿನ ಚಿಲ್ಲರೆ ನಾಣ್ಯಗಳು ಜನತೆಯ ಅಸಮಾಧಾನಕ್ಕೆ ಮತ್ತು ಅಪ್ರೀತಿಗೆ ಕಾರಣವಾಗಿವೆಂದು ಸಿದ್ಧವಾಗಿದೆ. ಯುದ್ಧಪೂರ್ವಕಾಲದ ಪ್ರಮಾಣಕ್ಕೆ ಸರಿಹೋಗುವಷ್ಟು ನಾಣ್ಯಗಳನ್ನು ಹೊಯ್ಯುವುದೀಗ ಅವಶ್ಯವಾಗಿ ಪರಿಣಮಿಸಿದೆ. ಆದರೆ ಸದ್ಯದಂತೆ ರೂಪಾಯಿಯನ್ನು ೧೬ ಆಣೆಗಳಲ್ಲಿ ಮತ್ತು ಆಣೆಯನ್ನು ೧೨ ಪೈಗಳಲ್ಲಿ ವಿಭಾಗಿಸುವ ಬದಲು ದಶಾಂಶ ಪದ್ಧತಿಯನ್ನು ಜಾರಿಯಲ್ಲಿ ತರುವುದಕ್ಕೆ ಇದೊಳ್ಳೆ ಸಂಧಿಯೊದಗಿದೆ. ಆಧುನಿಕ ವ್ಯಾಪಾರ ಉದ್ದಿಮೆಗಳು ರಭಸದಿಂದ ಸಾಗಬೇಕಾಗಿದ್ದರೂ ಆ ಪದ್ಧತಿಯು ಸರಳವಾಗಿರಬೇಕಾಗಿದೆ. ಇದನ್ನೆಲ್ಲ ಸಾಧಿಸಬೇಕಾದರೆ ಇದೀಗ ಪ್ರಗತಿಪರ ರಾಷ್ಟ್ರಗಳಲ್ಲೆಲ್ಲ ಸಾವಕಾಶವಾಗಿ ಜಾರಿಯಲ್ಲಿ ಬರುತ್ತಿರುವ ದಶಾಂಶ ಪದ್ಧತಿಯನ್ನು ಸ್ಪರ್ಧಿಸುವ ಬೇರೆ ಯಾವ ಪದ್ಧತಿಯೂ ಇಲ್ಲ. ಹಿಂದುಸ್ತಾನದಲ್ಲಿ ಈ ದಶಾಂಶ ಪದ್ಧತಿಯನ್ನು ಜಾರಿಯಲ್ಲಿ ತರಲು ಬಹಳ ಅನುಕೂಲಾಭಿಪ್ರಾಯಗಳು ವ್ಯಕ್ತಮಾಡಲ್ಪಟ್ಟಿವೆ. ಆದುದರಿಂದ ನಾಣ್ಯ ಕಾಯಿದೆಯನ್ನು ತಿದ್ದುವದೇ ಈ ಮಸೂದೆಯ ಉದ್ದೇಶವಾಗಿದೆ" ಮತ್ತು ಇದಕ್ಕೆ ಟಿಪ್ಪಣಿ ಇಂತಿದೆ.

" ರೂಪಾಯಿಯನ್ನು ೧೦೦ ಸೆಂಟುಗಳಾಗಿ ವಿಭಾಗಿಸಿದರೆ ಈಗಿರುವ ನಾಣ್ಯಗಳು ಸೆಂಟುಗಳಿಗೆ ಯಾವ ಬಗೆಯಿಂದಲೂ ಸರಿಹೋಗುವದಿಲ್ಲ. ಆಣೆ ಮತ್ತು ಸೆಂಟ ನಾಣ್ಯಗಳೆರಡೂ ಜಾರಿಯಲ್ಲಿ ಉಳಿಯುವ ಮತ್ತು ಯಾವದಾದರೊಂದು ನಾಣ್ಯಗಳಲ್ಲಿ ಧಾರಣೆ ಹೇಳುವ ಮಧ್ಯಂತರ ಅವಧಿಯಲ್ಲಿ ಅಪೂರ್ಣಾಂಕ ಸೆಂಟುಗಳನ್ನಾಗಿ ಪರಿವರ್ತಿಸುವದವಶ್ಯವಾಗಿದೆ. ಆದರೆ ಅರ್ಧ ಸೆಂಟಿಗಿಂತ ಕೆಳಗಿನ ಸೆಂಟು ನಾಣ್ಯಗಳನ್ನು ಹೊರಡಿಸುವ ಯೋಜನೆಯಿಲ್ಲದ್ದರಿಂದ ರೂಪಾಯಿಯ ಸಣ್ಣ ನಾಣ್ಯಗಳನ್ನಾಗಿ ವಿಭಾಗಿಸುವಾಗ ಅರ್ಧ ಸೆಂಟಿಗೆ ಸರಿಹೋಗುವಂತೆ ಯೋಜಿಸಲಾಗುವದು. ಕಾಲು ಸೆಂಟಿನಷ್ಟು ಹಣವಿದ್ದರೆ ಅದನ್ನು ಅರ್ಧ ಸೆಂಟೆಂದು ಹಿಡಿಯಲಾಗುವದು"

ಶ್ರೀ ಕಿಶೋರಲಾಲ ಮಶ್ರೂವಾಲಾ ಇವರು ಈ ವಿಷಯವನ್ನು ದಕ್ಷತೆಯಿಂದ ಅಭ್ಯಸಿಸಿರುವರು. ದಶಾಂಶ ಪದ್ಧತಿಯನ್ನು ಜಾರಿಯಲ್ಲಿ ತರುವದನ್ನು ತತ್ವತಃ ಎತ್ತಿಹಿಡಿಯಬಹುದಾದರೂ ವ್ಯವಹಾರದಲ್ಲಿ ಮಾತ್ರ ಶ್ರೀಮಂತ ವ್ಯಾಪಾರಸ್ಥರ, ಆಧುನಿಕ ವ್ಯಾಪಾರದ ಹೆಸರಿನಲ್ಲಿ ಕೆಲ ವರ್ಗಗಳವರಿಗಾದರೂ ಬಡವರ ಆಹುತಿಯಾಗುವದು. ಇದಕ್ಕೆ ಬೆಂಬಲವಾಗಿ ಅವರು ಬರೆದ ನಿಶ್ಚಯಾತ್ಮಕ ವಿವರಣೆಯನ್ನೆಲ್ಲ ವಿವರಿಸುವದು ಅನವಶ್ಯಕ. ಹರಿಜನ ಬಂಧುವಿನಲ್ಲಿ ಅದನ್ನು ಪೂರ್ಣವಾಗಿ ಕೊಡಲಾಗಿದೆ. ನಮ್ಮನ್ನಾಳುವವರ ದೇಶದಲ್ಲಿಯೂ ದಶಾಂಶ ಪದ್ಧತಿಯು ಜಾರಿಯಲ್ಲಿ ಇರುವದಿಲ್ಲೆಂದಿಷ್ಟು ಹೇಳಿದರೆ ಸಾಕೆಂದೆನಿಸುತ್ತದೆ. ಅಲ್ಲಿ ಸಾರ್ವಜನಿಕ ಅಭಿಪ್ರಾಯಕ್ಕೆ ಮನ್ನಣೆಯಿದ್ದು ಅದರಿಂದ ಶಾಸನ ಸಭೆಯ ನಿರ್ಣಯಗಳ ಮೇಲೆ ಒಳ್ಳೆ ಪರಿಣಾಮವಾಗುತ್ತದೆ. ಹಿಂದುಸ್ತಾನದಲ್ಲಿ ಸದ್ಯಕ್ಕೆ ಸಾರ್ವಜನಿಕ ಅಭಿಪ್ರಾಯಕ್ಕೆ ಏನೂ ಮನ್ನಣೆಯಿಲ್ಲ. ಅಲ್ಲದೆ ಕಷ್ಟಕ್ಕೊಳಗಾಗುವ ಕೋಟಿಗಟ್ಟಲೆ ಜನರ ಅಭಿಪ್ರಾಯ ಮೂಕವಾಗಿದೆ. ಹೆಚ್ಚಿಗೆ ಕರ ಹೇರದ ಅಪವಾದಕ್ಕೊಳಗಾಗದೆ ಬಡವರ ಮೇಲೆ ಇದರಿಂದ ಕರ ಹೇರಿದಂತಾಗುತ್ತದೆಂಬದನ್ನು ಶ್ರೀ ಮಶ್ರೂವಾಲಾರವರು ಯೋಗ್ಯ ರೀತಿಯಿಂದ ತೋರಿಸಿಕೊಟ್ಟಿರುವರು. ಕೆಲವೇ ತಿಂಗಳಲ್ಲಿ ಲೋಕಪ್ರತಿನಿಧಿಗಳಿಗೆ ಅಧಿಕಾರವನ್ನೊಪ್ಪಿಸಿ ಕೊಡುವದಾಗಿದ್ದರೆ, ಶಾಸ್ತ್ರೀಯವೆಂದು ಹೇಳಲ್ಪಡುತ್ತಿದ್ದರೂ ಬಡವರ ತಾತ್ಕಾಲಿಕ ಹಿತಸಂಬಂಧಗಳಿಗೆ ಪ್ರತ್ಯಕ್ಷವಾಗಿ ವಿರೋಧಕವಾದ ಪ್ರಯೋಗಗಳನ್ನು ನಡೆಸಲು ಸರಕಾರ ಸಿದ್ಧವಾಗುವದು ಅನುಚಿತವಾದುದು. ಹಿಂದುಸ್ತಾನದಂಥ ಬಡರಾಷ್ಟ್ರದಲ್ಲಿ ಅನೇಕ ಸಲ ಈಗಿದ್ದಂತೆ, ತಾತ್ಕಾಲಿಕವಾದುವೇ ನಿರ್ಣಾಯಕವಾಗುತ್ತದೆ. ಪುನರ್ವಿಚಾರಣೆಯ ನಂತರವೂ ಸರಕಾರದವರು ಇದನ್ನು ಹಿಂತೆಗೆದುಕೊಳ್ಳದಿದ್ದರೆ ಕೇಂದ್ರ ಅಸೆಂಬ್ಲಿಯು ಈ ಮಸೂದೆಯನ್ನು ನಿರಾಕರಿಸುವದೆಂದು ಆಶಿಸಲಾಗಿದೆ.

ಪುಣೆ — ಮೋ. ಕ. ಗಾಂಧಿ
೧೬-೩-೪೬


ಇದು ೩ ನೇ ಮಹಾಯುದ್ಧದ ಬೀಜಾರೋಪಣ

(೧ ನೇ ಪುಟದಿಂದ ಮುಂದರಿದುದು)

ಹಾಕಬೇಕಾಗಿದೆ. ಮುಂದಿರುವ ಧ್ರುವನಕ್ಷತ್ರ ಕಣ್ಮರೆಯಾದಾಗ ಸಮುದ್ರದಲ್ಲಿ ತೇಲುತ್ತ ಹೋಗಬೇಕಾದ ಬಡ ದೋಣಿಯ ಅವಸ್ಥೆಯನ್ನು ನೆನೆದುಕೊಳ್ಳಿರಿ.

ಅವಘಡಗಳಿಗೂ ಅದರ ಬೆನ್ನತ್ತಿ ಬರುವ ಯಾತನೆಗಳಿಗೂ ಅವರು ಸಿದ್ಧರಾಗಿರಬೇಕು. ಅವರು ಅತ್ಯಂತ ಕಠಿನ ಪರಿಸ್ಥಿತಿಯನ್ನು ಎದುರಿಸುವಷ್ಟು ಧೀರರೂ ಕಳಕಳಿಯುಳ್ಳವರೂ ಆಗಿದ್ದರೆ ಅವರೇ ಕೊನೆಯಲ್ಲಿ ಯಶಸ್ವಿಗಳಾಗುವದು ನಿಶ್ಚಿತ.

ದಕ್ಷಿಣ ಆಫ್ರಿಕೆಯ 'ಬಿಳಿಯರ ಕಥೆಯೇನು? ಮೊದಲು ಹಿಂದೀಯರನ್ನು ಕರೆದವರು ಅವರೇ. ಹೀಗೆ ಕರೆದವರೆಲ್ಲರೂ ಕೊನೆವರೆಗೂ ಗುಲಾಮರಾಗಿಯೆ ಉಳಿದಾರೆಂದಾಗಲಿ, ಅವರ ಬೆನ್ನತ್ತಿ ಅವರ ಸ್ವತಂತ್ರ ಬಂಧುಗಳು ಬರಲಿಕ್ಕಿಲ್ಲನೆಂದಾಗಲಿ ಬಿಳಿಯರು ಭಾವಿಸಿದ್ದರೆ ಬೇಗನೆ ಅವರ ಕಣ್ಮಂಜು ಹರಿವುದು. ನಿಜವಾದ ಮೇಲ್ಮೆಗೆ ಕಾಯದೆಯ ರೂಪ ಧರಿಸಿದ ಬಾಹ್ಯ ಶಕ್ತಿವರ್ಧಕ ರಸಾಯನ ಬೇಕೆ? ಅಂಥ ಒಂದೊಂದು ಸಂರಕ್ಷಣೆಯೂ ಬಿಳಿಯರನ್ನು ದುರ್ಬಲರನ್ನಾಗಿ ಮಾಡಿ ಕೊನೆಗೆ ಅವರನ್ನೂ ಪೂರ್ಣ ನಿರ್ವೀರ್ಯರನ್ನಾಗಿ ಮಾಡುವದೆಂದು ಅವರು ಕಂಡುಕೊಳ್ಳಲಾರರೆ? ಬಲವಂತನೇ ನ್ಯಾಯವಂತನಲ್ಲವೆಂಬ ಇತಿಹಾಸದ ಪಾಠವನ್ನು ಅವರು ಕಲಿಯಬೇಕಾಗಿದೆ. ನ್ಯಾಯವಂತನೇ ಬಲವಂತನು. ಫೀಲ್ಡ ಮಾರ್ಶಲ ಸ್ಮಟ್ಸರು ದೊಡ್ಡ ಸೇನಾನಿ, ದೊಡ್ಡ ಮುತ್ಸದ್ದಿ. ಈ ಮಸೂದೆಯಲ್ಲಿ ಅಡಕವಾಗಿರುವ ಧೋರಣೆಯನ್ನು ಹಟದಿಂದ ಮುಂದೊತ್ತಿದರೆ ದಕ್ಷಿಣ ಆಫ್ರಿಕೆಯ ಬಿಳಿಯರನ್ನು ತಾವು ಅಧಃಪಾತಕ್ಕೆ ಒಯ್ದಂತಾಗುವದೆಂದು ಅವರು ಕಂಡುಕೊಳ್ಳಬಾರದೆ? ಮಿತ್ರರಿಗೆ ಯುದ್ಧದಲ್ಲಿ ವಿಜಯ ದೊರಕಿಸುವಲ್ಲಿ ಮಹತ್ತರವಾದ ಸಹಾಯವನ್ನು ನೀಡಿರುವ ಸ್ಮಟ್ಸರು ಆ ಮಿತ್ರರ ಸಲಹೆಯನ್ನು ಕೇಳಿಕೊಳ್ಳಲಿ. ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಕೃತ್ರಿಮ ರೀತಿಯಿಂದ ರಕ್ಷಿಸುವ ತಮ್ಮ ಯೋಜನೆಯನ್ನು ಹಟದಿಂದ ಮುಂದೆ ಸಾಗಿಸಿದರೆ ಅವರು ಆ ವಿಜಯದ ಫಲವನ್ನು ತಿಪ್ಪೆಯಲ್ಲಿ ಒಗೆದಂತಾಗುವದು ಖಂಡಿತ."



ಜ್ಯೋತಿಷಿ:-ಕೃಷ್ಣಶಾಸ್ತ್ರಿ ಭಿಡೆ, ಭವಿಷ್ಯಕಥನ ಕಾರ್ಯಾಲಯ, ಖಡೇಬಜಾರ ಬೆಳಗಾವಿ

ಎಪ್ರಿಲ ೧ ರಿಂದ ೭ ರ ವರೆಗೆ

ಮೇಷ

ಪ್ರಕೃತಿ ನಿರೋಗಿಯೆನಿಸಿದರೂ ಮಾನಸಿಕ ತೊಂದರೆ ಬಹಳ ವಿಷಯಗಳಲ್ಲಿ ಎನಿಸುವದು. ಸ್ತ್ರೀ ಸುಖ ಅನುಕೂಲ ಆದರೆ ಮಕ್ಕಳ ಆರೋಗ್ಯ ಕೆಡುವದು ಉದ್ಯೋಗದಲ್ಲಿ ಪ್ರಗತಿ ಉತ್ತಮವೆನಿಸಿದರೂ ಕೊನೆಗೆ ಅದು ಬಹಳ ಮಂದವಾಗಿ ಪ್ರತಿಷ್ಠೆ ಕಳಮಳಿಸುವದು ಲಾಭ ತುಂಬಾ, ಅದರಂತೆ ವೆಚ್ಚವೂ ವಿಪರೀತ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳ ಸಮಾನ ಸ್ಥಿತಿ. ಮಿತ್ರರಲ್ಲಿ ಕ್ಲೇಶ. ಪ್ರವಾಸಾದಿ ಕೆಲಸ ಬಹಳ ತೊಂದರೆಯದು. ಭರಣಿಗೆ ತೊಂದರೆ ಕಡಮೆ. ತಾ. ೩, ೪, ೫, ೬ ಅನುಕೂಲ.

ಅದರಂತೆ ೩ ನೇ ತಾರೀಕಿಗೆ ವಕ್ರಗತಿಯಿಂದ ಗುರು ಪುನಃ ಕನ್ಯಾ ರಾಶಿಯನ್ನು ಪ್ರವೇಶಿಸಿ ಅಗಷ್ಟ ೨೩ ರ ವರೆಗೆ ಉಳಿಯುವನು. ಅರ್ಥಾತ್ ಈ ರಾಶಿಗೆ ಅವನು ೬ ನೆಯವನಾಗುವುದರಿಂದ ಶತ್ರುಗಳ ಬೆಳವಣಿಗೆ. ವೆಚ್ಚ ಹೆಚ್ಚು ಭಾಗ್ಯದ ಸಂಗತಿಗಳಲ್ಲಿ ಅಡಚಣಿ, ಸ್ವತಂತ್ರ ಧಂದೆ ಮಾಡುವವರಿಗಿಂತ ನೌಕರಿ ಇರುವವರಿಗೆ ಮಾತ್ರ ತೊಂದರೆ ಕಡಮೆ. ಈ ರೀತಿ ಫಲ ದೊರೆಯುವವು.

ವೃಷಭ

ಪ್ರಕೃತಿಗೆ ಸ್ವಲ್ಪ ಕಾಯಿಲೆ ಮಕ್ಕಳ ಸುಖ ಅನುಕೂಲ. ಆದರೆ ಹೆಂಡತಿ ಮತ್ತು ಇತರ ಪ್ರಾಪಂಚಿಕ ಸುಖದಲ್ಲಿ ಬಹಳ ವಿರಸ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಸಾಧಾರಣ ಅನುಕೂಲ ಆದರೆ ನಿರರ್ಥಕ ವೆಚ್ಚ ಬಹಳ ವಿಷಯಗಳಲ್ಲಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳದೆ ಜೋರು. ಮಿತ್ರಸುಖ ಮಧ್ಯಮ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಸ್ವಲ್ಪ ಅನುಕೂಲ. ರೋಹಿಣಿಗೆ ತೊಂದರೆ ಕಡಮೆ. ತಾ. ೧, ೨, ೬, ೭ ಅನುಕೂಲ.

ಅದರಂತೆ ೩ ನೇ ತಾರೀಕು ಗುರು ಮತ್ತೆ ೫ ನೇ ಸ್ಥಾನಕ್ಕೆ ಬರುತಿರುವದರಿಂದ ಮಕ್ಕಳಲ್ಲಿ ಉತ್ಕರ್ಷ. ಭಾಗ್ಯ ಮತ್ತು ಲಾಭ ವೃದ್ಧಿ. ಆರೋಗ್ಯ ಮತ್ತು ಸತ್ಯಶೀಲತೆಯ ಬೆಳವಣಿಗೆ. ಇವೆಲ್ಲ ಫಲ ದೊರೆಯುವವು

ಮಿಥುನ

ಪ್ರಕೃತಿ ಸಾಧಾರಣವೆ ಆದರೆ ಮನೋತ್ಸಾಹ ಉತ್ತಮ ಮಕ್ಕಳ, ಹೆಂಡತಿಯ ಮತ್ತು ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅನುಕೂಲ. ಆದರೆ ಜನರಲ್ಲಿ ಬಹಳ ತಪ್ಪು ತಿಳವಳಿಕೆ. ಮಿತ್ರರಲ್ಲಿ ಕ್ಲೇಶ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ ಪ್ರವಾಸಾದಿ ಕೆಲಸ ಒಟ್ಟಾರೆ ಅನುಕೂಲ ಆರಿದ್ರಾಕ್ಕೆ ಹೆಚ್ಚು ಅನುಕೂಲ. ತಾ. ೧, ೨, ೩, ೪ ಅನುಕೂಲ

೩ ನೇ ತಾರೀಕಿಗೆ ಗುರು ಮತ್ತೆ ನಿಮ್ಮ ರಾಶಿಗೆ ೪ ನೇ ಸ್ಥಾನಕ್ಕೆ ಬರುವದರಿಂದ ಆಪ್ತವಿರೋಧ, ಮಾತೃಕ್ಲೇಶ, ಸ್ಥಾವರ ಹಾನಿ, ಮಕ್ಕಳಿಗೆ ಅಪಯಶಸ್ಸು ಆದರೆ ಪ್ರತಿಷ್ಠೆ ಮತ್ತು ಸತ್ತೆಯ ಹೆಚ್ಚಳ. ಪಾರಮಾರ್ಥಿಕ ಜ್ಞಾನದಲ್ಲಿ ಪ್ರಗತಿ. ಇವೆಲ್ಲ ಫಲ ದೊರಕುವವು.

ಕರ್ಕ

ಪ್ರಕೃತಿ ಉತ್ತಮ. ಹೆಂಡತಿಗೆ ಕ್ಲೇಶ ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಕಡಮೆಯೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಸಾಮಾನ್ಯ ಪ್ರತಿಯ. ವೆಚ್ಚ ಹೆಚ್ಚು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಅನೇಕರೊಡನೆ ತಿಕ್ಕಾಟದ ಪ್ರಸಂಗ. ಮಿತ್ರರಲ್ಲಿ ವಿರೋಧ. ಧರ್ಮ ಮಾಡುತ್ತಿರುವಾಗ ಕರ್ಮ ಜಗ್ಗುವ ಅಂಜಿಕೆ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಪುಷ್ಯಕ್ಕೆ ತೊಂದರೆ ಹೆಚ್ಚು. ತಾ. ೧, ೨, ೩, ೪ ಅನುಕೂಲ.

೩ ನೇ ತಾರೀಕಿನಿಂದ ಗುರು ಮತ್ತೆ ೩ ನೇ ಸ್ಥಾನಕ್ಕೆ ಬರುವದರಿಂದ ಭಾಗ್ಯ ಮತ್ತು ಲಾಭ ವೃದ್ಧಿ. ಒಳ್ಳೆ ಸ್ತ್ರೀ ಸುಖ, ಯಾತ್ರಾದಿ ಪುಣ್ಯ ಕೃತ್ಯಗಳು ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು. ಪ್ರತಿಷ್ಠೆಯಲ್ಲಿ ನ್ಯೂನತೆ. ಆಪ್ತವಿರೋಧ. ಇವೆಲ್ಲ ಫಲ ಸಿಕ್ಕುವವು.

ಸಿಂಹ

ಪ್ರಕೃತಿಗೆ ಬಹಳ ಕ್ಲೇಶ. ಹೆಂಡತಿಗೂಡ ಮೇಲಿಂದ ಮೇಲೆ ಮತಭೇದ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಮಧ್ಯಮ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಆದರೆ ಮನಸಿಗೆ ಸಂತೋಷ ಕಡಮೆಯೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಮಿತ್ರರಿಂದ ಅವಹೇಲನೆ ಪತ್ರವ್ಯವಹಾರಕ್ಕಿಂತ ಪ್ರವಾಸ ಮತ್ತು ಭೆಟ್ಟಿ ಅನುಕೂಲ. ಪೂರ್ವಾಕ್ಕೆ ತೊಂದರೆ ಕಡಮೆ. ತಾರೀಖು ೩, ೪, ೫, ೬ ಅನುಕೂಲ.

ಅದರಂತೆ ೩ ನೇ ತಾರೀಕಿನಿಂದ ಆರೋಗ್ಯ. ಕೌಟುಂಬಿಕ ಉತ್ಕರ್ಷ ಪ್ರತಿಷ್ಠೆ ಮತ್ತು ಸತ್ತೆಯ ಬೆಳವಣಿಗೆ ಶತ್ರುಗಳಿಂದ ಹೆಚ್ಚಳ. ಹೆಂಡತಿಗೆ ಕಾಯಿಲೆ. ಇವೆಲ್ಲ ಫಲ ದೊರೆಯುವವು.

ಕನ್ಯಾ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಅನುಕೂಲ. ಸ್ಥಾವರದಲ್ಲ ಅನುಕೂಲ ಘಟನೆಗಳು ಇಲ್ಲವೆ ಹೊಸವಾಗಿ ಹೆಚ್ಚಳ ಉದ್ಯೋಗದಲ್ಲಿ ಪ್ರಗತಿ ಕಡಮೆ ಆದರೆ ಪ್ರತಿಷ್ಠೆ ಮತ್ತು ಲಾಭ ತುಂಬ ಮಿತ್ರಸುಖ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ ಹಸ್ತಾಕ್ಕೆ ಹೆಚ್ಚು ಅನುಕೂಲ. ತಾ. ೧—೩—೭ ಅನುಕೂಲ.

೩ ನೇ ತಾರೀಕಿನಿಂದ ಗುರು ಮತ್ತೆ ಮೊದಲನೆ ಸ್ಥಾನಕ್ಕೆ ಬರುವದರಿಂದ ಪತಿಪತ್ನಿಯರಲ್ಲಿ ಪ್ರೇಮವೃದ್ಧಿ ಮಕ್ಕಳ ಉತ್ಕರ್ಷ ವಾದವಿವಾದಗಳಲ್ಲಿ ಯಶಸ್ಸು ಶತ್ರುಗಳಲ್ಲಿ ಮರಣ. ಭಾಗ್ಯವೃದ್ಧಿ ಆದರೆ ಮನೆತನದವರಲ್ಲಿ ಇತರರೊಡನೆ ಅಲ್ಪಸ್ವಲ್ಪ ವಿರೋಧ. ಈ ಫಲ ದೊರೆಯುವವು.

ತುಲಾ

ಪ್ರಕೃತಿ ಉತ್ತಮ. ಸ್ತ್ರೀ ಸುಖ ಅನುಕೂಲ ಆದರೆ ಇತರ ಪ್ರಾಪಂಚಿಕ ತೊಂದರೆ ಹೆಚ್ಚು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಕಡಮೆ ಆದರೆ ಖರ್ಚು ಬಹಳ ಭಾರದ್ದು ಬಂಧುವರ್ಗದವರಲ್ಲಿ ವಿರೋಧ. ಪ್ರವಾಸದಲ್ಲಿ ತೊಂದರೆ ಭೆಟ್ಟಿಯಲ್ಲಿ ಅಪಮಾನ. ಪತ್ರವ್ಯವಹಾರ ಬಹಳ ವಿರುದ್ಧ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳಿಗಿಂತ ಮಿತ್ರರಿಂದಲೆ ಹೆಚ್ಚು ತೊಂದರೆ ಆದರೆ ಸ್ವಾತಿಗೆ ತೊಂದರೆ ಕಡಮೆ. ತಾ. ೩—೪ ಅನುಕೂಲ

೩ ನೇ ತಾರೀಕಿನಿಂದ ಮತ್ತೆ ೧೨ ನೇ ಗುರು ನಿಮ್ಮ ಸ್ಥಾನಕ್ಕೆ ಬರುವದರಿಂದ ವೆಚ್ಚ ಹೆಚ್ಚು. ಶತ್ರುಗಳು ಹೆಚ್ಚುವರು. ಪರಾಕ್ರಮದ ಯೋಜನೆ ತಿರುಗಿ ಮೈಮೇಲೆ ಬೀಳುವ ಪ್ರಸಂಗ ಬಂಧುಗಳಲ್ಲಿ ವಿರೋಧ. ಇವೆಲ್ಲ ಫಲದೊರೆಯುವದು.

ವೃಶ್ಚಿಕ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿಗೆ ಅಲ್ಪಸ್ವಲ್ಪ ತೊಂದರೆ. ಇತರ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ನಡೆದುದೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅಷ್ಟಕ್ಕಷ್ಟೆ. ಪರಸ್ತ್ರೀ ಬಗ್ಗೆ ಧ್ಯಾಸ ಇಲ್ಲವೆ ಹೆಂಡತಿಯಲ್ಲಿ ಅನಾದರ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಪ್ರವಾಸಾದಿ ಕೆಲಸ ಸಾಧಾರಣ ಅನುಕೂಲ. ಅನುರಾಧೆಗೆ ತೊಂದರೆ ಹೆಚ್ಚು. ತಾ. ೧—೨—೬ ಅನುಕೂಲ.

೩ ನೇ ತಾರೀಕಿನಿಂದ ಗುರು ಮತ್ತೆ ೧೧ ನೇ ಸ್ಥಾನಕ್ಕೆ ಬರುವದರಿಂದ ಲಾಭದ ಹೆಚ್ಚಳ. ಸ್ತ್ರೀಸುಖ ಉತ್ತಮ. ಮಕ್ಕಳ ಮತ್ತು ಬಂಧುಗಳ ಉತ್ಕರ್ಷ ಹೆಚ್ಚು. ವಾದವಿವಾದಗಳಲ್ಲಿ ಯಶಸ್ಸು. ಶತ್ರುಗಳು ಅನ್ಯಶತ್ರುಗಳಿಂದಲೆ ಫಜೀತಿಯಾಗಬೇಕಾದ ಪ್ರಸಂಗ ಮಂಗಲ ಕಾರ್ಯಗಳು. ಮಾತೃಕ್ಲೇಶ ಮೊದಲಾದ ಫಲಗಳು ಸಿಕ್ಕುವವು.

ಧನು

ಪ್ರಕೃತಿ ನಿಮ್ಮದು ಅನುಕೂಲ ಆದರೆ ಹೆಂಡತಿಯದು ಕೆಡುವದು ಉಳಿದ ವಿಷಯಗಳಲ್ಲಿಯೂ ಪ್ರಾಪಂಚಿಕ ತೊಂದರೆ ವಿಪರೀತ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಸಾಧಾರಣವೆ. ಆದರೆ ಲಾಭ ಅತಿ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಪ್ರವಾಸಾದಿ ಕೆಲಸ ಕಷ್ಟಸಾಧ್ಯ ಪೂರ್ವಾಷಾಢಾಕ್ಕೆ ತೊಂದರೆ ಕಡಮೆ. ತಾ. ೩-೪-೭ ಅನುಕೂಲ.

೩ ನೇ ತಾರೀಕಿನಿಂದ ಗುರು ಮತ್ತೆ ೧೦ ನೇ ಸ್ಥಾನಕ್ಕೆ ಬರುವದರಿಂದ ಉದ್ಯೋಗದಲ್ಲಿ ಪ್ರತಿಷ್ಠೆ ಮತ್ತು ಸತ್ತೆ ಉತ್ತಮ. ಸ್ಥಾವರದಲ್ಲಿ ಹೆಚ್ಚಳ ಕೌಟುಂಬಿಕ ಸುಖ ಉತ್ತಮ. ಶತ್ರುಗಳೂ ಪ್ರಬಲರಾಗುವರು. ಮಿತ್ರರಲ್ಲಿ ಕ್ಲೇಶ ಇವೆಲ್ಲ ಫಲ ದೊರಕುವವು.

ಮಕರ

ಪ್ರಕೃತಿ ಸಾಧಾರಣವೆ. ಪ್ರಾಪಂಚಿಕ ಸುಖಗಳಲ್ಲಿಯೂ ಅನಿಶ್ಚಿತತೆ. ಆದರೆ ಸ್ತ್ರೀಸುಖ ಅನುಕೂಲ ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಅನುಕೂಲ ಆದರೆ ಲಾಭ ಕಡಮೆಯೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು ಉತ್ತಮ. ಪ್ರವಾಸಾದಿ ಕೆಲಸ ಹಿತಕರ. ಶ್ರವಣಾಕ್ಕೆ ತೊಂದರೆ ಕಡಮೆ. ತಾ. ೧—೨—೫—೬ ಅನುಕೂಲ.

೩ ನೇ ತಾರೀಕಿನಿಂದ ೯ ನೇ ಗುರು ಬರುವದರಿಂದ ಭಾಗ್ಯವೃದ್ಧಿ ಮಕ್ಕಳಲ್ಲಿ ಉತ್ಕರ್ಷ ಆಕ್ರಮಣಶೀಲ ಕೆಲಸ ನಡೆಯುವವು. ಮಂಗಲ ಕಾರ್ಯಗಳು ಆದರೆ ಸ್ವಲ್ಪ ಕೌಟುಂಬಿಕ ವಿರೋಧ. ಇವೇ ಮೊದಲಾದ ಫಲ ದೊರೆಯುವವು.

ಕುಂಭ

ಪ್ರಕೃತಿ ನಿಮ್ಮದು ಅನುಕೂಲ ಆದರೆ ಹೆಂಡತಿ ಮತ್ತು ಮಕ್ಕಳದು ಕಡುವದು. ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಮಾನ್ಯವೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಉತ್ತಮ ಆದರೆ ಬುದ್ಧಿಯಲ್ಲಿ ಪರದ್ವೇಷದ ಮತ್ತು ವಿಘಾತಕ ಕೆಲಸಗಳ ಝುಳುಕು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳ ಸಮಾನ ಸ್ಥಿತಿ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಶತತಾರಿಕೆಗೆ ತೊಂದರೆ ಕಡಮೆ. ತಾ. ೧—೨....೩—೪ ಅನುಕೂಲ.

೩ ನೇ ತಾರೀಕಿನಿಂದ ಗುರು ಮತ್ತೆ ೮ ನೇ ಸ್ಥಾನಕ್ಕೆ ಬರುವದರಿಂದ ಪ್ರಕೃತಿಗೆ ಕ್ಲೇಶ. ಮಕ್ಕಳ ಗೂಡ ವಿರೋಧ ಮನಸಿಗೆ ಒಂದು ಕುತರ್ಕದಿಂದ ಮಾನಸಿಕ ಕ್ಲೇಶ ಮಾಡಿಕೊಳ್ಳುವ ಚಟ. ಬಂಧುವರ್ಗದವರಿಗೆ ಕ್ಲೇಶ ಆದರೆ ಕೆಲ ವಿಷಯಗಳಲ್ಲಿ ಕೌಟುಂಬಿಕ ಉತ್ಕರ್ಷ. ಅಲ್ಪಸ್ವಲ್ಪ ಅಚಿತ ಧನಲಾಭ. ಇವೆಲ್ಲ ಫಲ ದೊರಕುವದು.

ಮೀನ

ಪ್ರಕೃತಿ ಪ್ರಾಪಂಚಿಕ ಸುಖ ಬಹಳ ಉತ್ತಮ. ಆದರೆ ಇತರ ಆಪ್ತರಿಂದ ಕಿರುಕುಳ ತೊಂದರೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಸಾಧಾರಣವೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಮಿತ್ರರಲ್ಲಿ ವಿರೋಧ ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಉತ್ತರಾ ಭಾದ್ರಪದಕ್ಕೆ ಹೆಚ್ಚು ತೊಂದರೆ. ತಾ. ೨—೩—೪ ಅನುಕೂಲ.

ಅದರಂತೆ ೩ ನೇ ತಾರೀಕಿನಿಂದ ಗುರು ಮತ್ತೆ ೭ ನೇ ಸ್ಥಾನಕ್ಕೆ ಬರುವದರಿಂದ ಪತಿಪತ್ನಿಯರಲ್ಲಿ ದೃಢಪ್ರೇಮ. ದ್ರವ್ಯ ಲಾಭ ತುಂಬ. ಬಂಧುವರ್ಗದವರ ಮತ್ತು ಮಿತ್ರರ ಉತ್ಕರ್ಷ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು. ಶತ್ರುಗಳಿಗೆ ಕಾಯಿಲೆ ಆದರೆ ಅಪರ ಕೌಟುಂಬಿಕ ಅಭಿವೃದ್ಧಿ. ಮೊದಲಾದ ಫಲ ಸಿಕ್ಕುವವು.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ರಾಷ್ಟ್ರೀಯ ವಾಙ್ಮಯ ಪ್ರಕಾಶನ ಟ್ರಸ್ಟಿನ ಪರವಾಗಿ ಹ. ರಾ. ಮೋಹರೆಯವರಿಂದ ಮುದ್ರಿತ ಪ್ರಕಟವಾಯಿತು.